ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 23 ಸೋಮವಾರ 2022

ಸಂಪುಟ: 43 | ಸಂಚಿಕೆ: 37 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಷ್ಟ್ರ, ಸಮಾಜ ನಿರ್ಮಾಣದಲ್ಲಿ ಅವಧೂತ ದತ್ತಪೀಠದಿಂದ ಮಹತ್ವದ ಹೆಜ್ಜೆ; ಪ್ರಧಾನಿ ಮೋದಿ

● ಶ್ರೀಗಳ 80ನೇ ವರ್ಧಂತಿ ಉತ್ಸವಕ್ಕೆ ಚಾಲನೆ ● ಕನ್ನಡದಲ್ಲಿ ಶ್ರೀಗಳಿಗೆ ಶುಭಾಶಯ ಕೋರಿದ ಪ್ರಧಾನಿ ● ಶ್ರೀಗಳ ಕಲ್ಯಾಣ ಕಾರ್ಯಗಳ ಬಗ್ಗೆ ಪ್ರಧಾನಿ ಗುಣಗಾನ

ಮೈಸೂರು,ಮೇ 22(ಪಿಎಂ)– ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮವು ಉತ್ತಮ ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಬಣ್ಣಿಸಿದರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಆಶ್ರಮದ ನಾದ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದತ್ತಪೀಠದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ವರ್ಚ್ಯುಯಲ್ (ಆನ್‌ಲೈನ್) ಮೂಲಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಪ್ರಧಾನಿಯವರು ಶುಭಾಶಯ ಕೋರಿದರು.

ಶ್ರೀಗಳ 80ನೇ ವರ್ಧಂತಿ (ಜನ್ಮದಿನ), ಶ್ರೀಗಳ ಮಾತೃಶ್ರೀ ಜಯಲಕ್ಷ್ಮೀ ಮಾತೆಯವರ ಜನ್ಮ ಶತಮಾನೋತ್ಸವ ಹಾಗೂ ನಾದಮಂಟಪದ 24ನೇ ವಾರ್ಷಿಕೋತ್ಸವದ ಅಂಗವಾಗಿ ಆಶ್ರಮದಲ್ಲಿ ಮೇ 31ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂತೆಯೇ ಇಂದು ಆಶ್ರಮದ ನಾದ ಮಂಟಪದಲ್ಲಿ ನಡೆದ ಉತ್ಸವದ ಉದ್ಘಾಟನೆ ಹಾಗೂ ಶ್ರೀಗಳ ಜನ್ಮದಿನಾಚರಣೆಯಲ್ಲಿ ಆನ್‌ಲೈನ್ ಮೂಲಕ ಶ್ರೀಗಳಿಗೆ ಪ್ರಧಾನಿಗಳು ಶುಭಾಶಯ ತಿಳಿಸಿದರು.

ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿಯವರು, 'ಎಲ್ಲರಿಗೂ ಜೈಗುರು ದತ್ತ... ಅಪ್ಪಾಜಿ ಅವರಿಗೆ 80ನೇ ವರ್ಧಂತಿ ಸಂದರ್ಭದ ಶುಭಾಶಯಗಳು' ಎನ್ನುವ ಮೂಲಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿದರು. ಬಳಿಕ ಹಿಂದಿಯಲ್ಲಿ ಸುಮಾರು 12 ನಿಮಿಷ ಶ್ರೀಗಳ ಸಾಧನೆ ಮತ್ತು ಸೇವಾ ಕಾರ್ಯಗಳ ಗುಣಗಾನ ಮಾಡಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಕಲ್ಯಾಣ ಕಾರ್ಯಗಳು ಸಂತಸ ತಂದಿದೆ. ಇದು ಎಲ್ಲರಿಗೂ ಮಾರ್ಗದರ್ಶಕ ಹಾಗೂ ಆದರ್ಶವಾಗಲಿದೆ. ಜಪಾನ್ ಪ್ರವಾಸದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಇಂದು ಆಗಮಿಸಲು ಸಾಧ್ಯವಾಗಲಿಲ್ಲ. ಸಾಮಾಜಿಕ ನ್ಯಾಯಕ್ಕೆ ಪ್ರೇರಣೆಯಾಗಿ ಶ್ರೀಗಳು ಕೆಲಸ ಮಾಡುತ್ತಿದ್ದಾರೆ. ದೇಶದ ನಾನಾ ಭಾಗಗಳಲ್ಲಿ ಆಶ್ರಮ ಸ್ಥಾಪಿಸಿ, ಸಾಮಾಜಿಕ ಕಾರ್ಯ ನಡೆಸುತ್ತಿದ್ದಾರೆ. ಜನರ ಕಲ್ಯಾಣವೇ ಅವಧೂತ ದತ್ತಪೀಠದ ಆಶಯವಾಗಿದೆ. ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶ್ರೀ ಮಠದ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಇಂದಿನ ಯುವ ಪೀಳಿಗೆಗೆ ದೇಶದ ಉನ್ನತ ಪರಂಪರೆ ತಿಳಿಸುವ ಉನ್ನತ ಮಟ್ಟದ ಕಾರ್ಯಗಳನ್ನು ಮಾಡುವ ಮಠಗಳ ಸಾಲಿನಲ್ಲಿ ಶ್ರೀಮಠ ಅಗ್ರಸ್ಥಾನದಲ್ಲಿದೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮಂತ್ರದಂತೆ ದೇಶ ಸಾಗುತ್ತಿದೆ. ರಾಷ್ಟ್ರ ನಿರ್ಮಾಣದಲ್ಲಿ ಮಠಗಳ ಪಾತ್ರ ಬಹಳ ಮುಖ್ಯ. ದೇಶದ ಪ್ರಗತಿಗೆ ಮುಂದಿನ 25 ವರ್ಷಗಳ ರೂಪುರೇಷೆ ಸರ್ಕಾರದ ಮುಂದಿದ್ದು, ಅದನ್ನು ▶ 3ನೇ ಪುಟಕ್ಕೆ

{ಹೆಚ್ಚಿನ ಸಚಿತ್ರ ವರದಿ ಪುಟ–3}



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಭಾನುವಾರ ವರ್ಚ್ಯುಯಲ್ ಮೂಲಕ ಬೃಹತ್ ಪರದೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ 80ನೇ ವರ್ಧಂತಿ ಶುಭ ಕೋರಿದರು.

ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿಯವರು, 'ಎಲ್ಲರಿಗೂ ಜೈಗುರು ದತ್ತ... ಅಪ್ಪಾಜಿ ಅವರಿಗೆ 80ನೇ ವರ್ಧಂತಿ ಸಂದರ್ಭದ ಶುಭಾಶಯಗಳು' ಎನ್ನುವ ಮೂಲಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿದರು. ಬಳಿಕ ಹಿಂದಿಯಲ್ಲಿ ಸುಮಾರು 12 ನಿಮಿಷ ಶ್ರೀಗಳ ಸಾಧನೆ ಮತ್ತು ಸೇವಾ ಕಾರ್ಯಗಳ ಗುಣಗಾನ ಮಾಡಿದರು.

ನಾಳೆ ಕ್ವಾಡ್ ರಾಷ್ಟ್ರಗಳ ಶೃಂಗ ಸಭೆ: ಜಪಾನ್‌ಗೆ ಪ್ರಧಾನಿ ಮೋದಿ ಭೇಟಿ



ನವದೆಹಲಿ: ಜಪಾನ್‌ನ ಟೋಕಿಯೊ ನಗರದಲ್ಲಿ ಮೇ 24ರಂದು ನಡೆಯುವ ಕ್ವಾಡ್ ರಾಷ್ಟ್ರಗಳ ನಾಯಕರ 3ನೇ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ. ಇಂಡೊ–ಪೆಸಿಫಿಕ್ ವಲಯದ ಅಭಿವೃದ್ಧಿ ಮತ್ತು ಪ್ರಚಲಿತ ಜಾಗತಿಕ ಬಿಕ್ಕಟ್ಟುಗಳ ▶ 8ನೇ ಪುಟಕ್ಕೆ

ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು

ದಾವೋಸ್‌ಗೆ ಸಿಎಂ ನಿಯೋಗ ಪಯಣ

ಬೆಂಗಳೂರು, ಮೇ 22– ಸ್ವಿಟ್ಜರ್ಲೆಂಡಿನ ದಾವೋಸ್‌ನಲ್ಲಿ ಇಂದಿನಿಂದ ಆರಂಭವಾಗಿರುವ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಸಿಎಂ ಬೊಮ್ಮಾಯಿ ನೇತೃತ್ವದ ನಿಯೋಗ ಇಂದು ರಾಜ್ಯದಿಂದ ಹೊರಟಿದೆ.

ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಭಾರತವನ್ನೂ ಪ್ರತಿನಿಧಿಸಲಿರುವ ಸಿಎಂ ಬೊಮ್ಮಾಯಿ ಅವರಿಗೆ ಐಟಿಬಿಟಿ ಸಚಿವ ಡಾ.ಅಶ್ವತ್ಥ್ ನಾರಾಯಣ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ್ ನಿರಾಣಿ ಸಾಥ್ ಕೊಟ್ಟಿದ್ದಾರೆ. ಬೊಮ್ಮಾಯಿಯವರಿಗೆ ಸಿಎಂ ಆದ ಬಳಿಕ ಮೊದಲ ವಿದೇಶ ಪ್ರವಾಸ ಇದಾಗಿದೆ. ಭಾನುವಾರ ಬೆಳಗ್ಗೆ 8.30ಕ್ಕೆ ತಮ್ಮ ಆರ್.ಟಿ.ನಗರದ ನಿವಾಸದಿಂದ ಪ್ಯಾಂಟ್, ಶರ್ಟ್ ಧರಿಸಿ ಸಾಮಾನ್ಯ ಉಡುಪಿನಲ್ಲೇ ದಾವೋಸ್‌ಗೆ ತೆರಳಿದರು. ಸಿಎಂ ಜೊತೆಗೆ ಅದ್ದೂರಿ ಸೂಟ್ ಧರಿಸಿದ ಮುರುಗೇಶ್ ನಿರಾಣಿ ಹೊರಟರು. ಇಂದು ಸಿಎಂ ಜೊತೆಗೆ ಒಟ್ಟು 8 ಜನರ ತಂಡ ದಾವೋಸ್‌ಗೆ ಪ್ರಯಾಣಿಸಿದೆ. ಸಿಎಂ ಅವರೊಂದಿಗೆ ಧರ್ಮಪತ್ನಿ ಚೆನ್ನಮ್ಮ, ಮುರುಗೇಶ್ ನಿರಾಣಿ ಮತ್ತು ನಿರಾಣಿಯವರ ಪತ್ನಿ, ನಿರಾಣಿ ಪಿಎ ಶರಣಬಸಪ್ಪ, ಸಿಎಂ ಪ್ರಧಾನ ಕಾರ್ಯದರ್ಶಿ ಮಂಜುನಾಥ್‌ಪ್ರಸಾದ್ ಮತ್ತು ಅವರ ಪಿಎ, ಸಿಎಂ ಓಎಸ್‌ಡಿ ರೋಹನ್ ಬಿರಾದಾರ್ ದಾವೋಸ್‌ಗೆ ತೆರಳಿದರು. ದಾವೋಸ್‌ಗೆ ಹೋಗುವ ಮುನ್ನ ಆರ್.ಟಿ.ನಗರದ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ, ಕಳೆದ 4 ತ್ರೈಮಾಸಿಕಕ್ಕೆ ಹೋಲಿಕೆ ಮಾಡಿದರೆ ▶ 8ನೇ ಪುಟಕ್ಕೆ





ರಾಜ್ಯದಲ್ಲಿ ಪೆಟ್ರೋಲ್–ಡೀಸೆಲ್ ಸುಂಕ ಇಳಿಕೆ ಕುರಿತು ಪರಿಶೀಲನೆ: ಸಿಎಂ

ಬೆಂಗಳೂರು: ಕೇಂದ್ರ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ತೆರಿಗೆ ಕಡಿತಗೊಳಿಸಿದ್ದು, ರಾಜ್ಯದಲ್ಲಿಯೂ ತೆರಿಗೆ ಕಡಿತ ಕುರಿತು ಪರಿಶೀಲನೆ ನಡೆಸಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ದಾವೋಸ್ ಪ್ರವಾಸಕ್ಕೆ ತೆರಳುವುದಕ್ಕೂ ಮುನ್ನ ಆರ್.ಟಿ.ನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಸ್ವಿಟ್ಜರ್ಲೆಂಡ್‌ನ ದಾವೋಸ್‌ಗೆ ತೆರಳುತ್ತಿದ್ದು ನಾಳೆ ಮತ್ತು ಮೇ 24ರಂದು ನಡೆಯಲಿರುವ 'ವಿಶ್ವ ಆರ್ಥಿಕ ಶೃಂಗಸಭೆ'ಯಲ್ಲಿ ಭಾಗಿಯಾಗುತ್ತೇನೆ. ಪ್ರಮುಖ ಕೈಗಾರಿಕೋದ್ಯಮಿಗಳನ್ನು ಭೇಟಿಯಾಗುವೆ. ಹೂಡಿಕೆದಾರರನ್ನು ಸೆಳೆಯಲು ಎಲ್ಲ ಪ್ರಯತ್ನ ನಡೆಸಲಾಗುತ್ತದೆ ಎಂದರು.

ಜಿಪಂ–ತಾಪಂ ಚುನಾವಣೆಗೆ ಸಿದ್ಧತೆ

ಬೆಂಗಳೂರು, ಮೇ 22– ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಗೆ ಪೂರ್ವ ಸಿದ್ಧತೆಗಳನ್ನು ಆರಂಭಿಸಿರುವ ರಾಜ್ಯ ಸರ್ಕಾರ, ಹಾಲಿ ಇದ್ದ ಕ್ಷೇತ್ರ ವ್ಯಾಪ್ತಿ ಹಾಗೂ ಮೀಸಲಾತಿಯನ್ನು ರದ್ದುಪಡಿಸಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿ ಕ್ಷೇತ್ರ ವ್ಯಾಪ್ತಿ ನಿಗದಿಪಡಿಸಲು ಮಾರ್ಗಸೂಚಿಯನ್ನು ಹೊರಡಿಸಿದೆ.

ತಾಲೂಕು ಪಂಚಾಯತಿ: ತಾಲೂಕಿನಲ್ಲಿರುವ ನಗರ ಸ್ಥಳೀಯ ಸಂಸ್ಥೆಗೆ ಸೇರ್ಪಡೆಯಾಗಿರುವ ಅಥವಾ ಸ್ಥಳೀಯ ಸಂಸ್ಥೆಯಾಗಿ ಮೇಲ್ದರ್ಜೆಗೇರಿಸಿರುವ ಗ್ರಾಮಾಂತರ ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಗ್ರಾಮೀಣ ಪ್ರದೇಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ತಾಲೂಕಿನಲ್ಲಿರುವ ಒಂದು ಜಿಲ್ಲಾ ಪಂಚಾಯತಿ ಕ್ಷೇತ್ರದೊಳಗೆ ಎಷ್ಟು ತಾಲೂಕು ಪಂಚಾಯತಿ ಕ್ಷೇತ್ರಗಳನ್ನು ರಚಿಸಬಹುದೋ ಅಷ್ಟು ಕ್ಷೇತ್ರಗಳನ್ನು ಆ ಜಿಲ್ಲಾ ಪಂಚಾಯತಿ ಕ್ಷೇತ್ರದ ವ್ಯಾಪ್ತಿಯೊಳಗೆ ರಚಿಸಬೇಕು. ಜಿಪಂ ಕ್ಷೇತ್ರದೊಳಗೆ ಬರುವ ಪೂರ್ಣ ಗ್ರಾಮ ಪಂಚಾಯತಿಗಳನ್ನು ಸಾಧ್ಯವಾದಷ್ಟು ಒಟ್ಟುಗೂಡಿಸಿ ತಾಪಂ ಕ್ಷೇತ್ರಗಳನ್ನು ನಿರ್ಧರಿಸಬೇಕು ಹಾಗೂ ಅದು ಸಾಧ್ಯವಾಗದಿದ್ದರೆ ಗ್ರಾಮಗಳನ್ನು ಗುಂಪು ಮಾಡುವುದು. ಹೀಗೆ ಗ್ರಾಮಗಳನ್ನು ಗುಂಪು ಮಾಡುವ ಸಂದರ್ಭ ಮೂಲ ಗ್ರಾಮವನ್ನು ವಿಭಜಿಸತಕ್ಕದ್ದಲ್ಲ. ಹಾಗೂ ಕಂದಾಯ ಗ್ರಾಮದ ದಾಖಲೆಗಳನ್ನು ಬೇರೆಯಾಗಿ ವಿಂಗಡಿಸದೇ ಕಂದಾಯ ಗ್ರಾಮದೊಂದಿಗೆ ಇರುವಂತೆ ನೋಡಿಕೊಳ್ಳತಕ್ಕದ್ದು. ತಾಪಂಗಳನ್ನು ಜಿಪಂ ಕ್ಷೇತ್ರದೊಳಗೆ ಒಟ್ಟುಗೂಡಿಸುವ ಸಂದರ್ಭ ಯಾವುದೇ ಕಾರಣಕ್ಕೂ ಒಂದು ತಾಪಂ ಕ್ಷೇತ್ರವು 2 ಜಿಪಂ ಕ್ಷೇತ್ರಗಳಿಗೆ ವಿಭಜಿಸಿ ಸೇರಿಸತಕ್ಕದ್ದಲ್ಲ. ಪ್ರತಿಯೊಂದು ಚುನಾವಣೆ ಕ್ಷೇತ್ರಗಳ ಜನಸಂಖ್ಯೆಯಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ಹೆಚ್ಚಿನ ವ್ಯತ್ಯಾಸವಿರದಂತೆ ನಿಗಾ ವಹಿಸತಕ್ಕದ್ದು, ಹೊಸದಾಗಿ ಕ್ಷೇತ್ರ ರಚನೆ ಮಾಡಬೇಕಾದ ಸಂದರ್ಭದಲ್ಲಿ ಮಾತ್ರ ಕ್ಷೇತ್ರದಲ್ಲಿನ ▶ 8ನೇ ಪುಟಕ್ಕೆ



ಕ್ಷೇತ್ರಗಳ ವ್ಯಾಪ್ತಿ ನಿಗದಿಗೆ ಮಾರ್ಗಸೂಚಿ ಬಿಡುಗಡೆ

ದಿನಗೂಲಿ ಅವಧಿಯಲ್ಲಿ ನೌಕರರು ಗ್ರ್ಯಾಚುಟಿಗೆ ಅರ್ಹರು

ಬೆಂಗಳೂರು, ಮೇ 22– ನೌಕರರು ದಿನಗೂಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅವಧಿಯೂ ಗ್ರ್ಯಾಚುಟಿಗೆ ಅರ್ಹರು ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ದಿನಗೂಲಿ ನೌಕರರ ಪ್ರಕರಣದಲ್ಲಿ ನಿಯಂತ್ರಣ ಪ್ರಾಕಾರ/ ಮೇಲ್ಮನವಿ ಪ್ರಕಾರದ ಆದೇಶ ರದ್ದುಗೊಳಿಸುವಂತೆ ಕೋರಿ ಸರಕಾರ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಕೆ.ಎಸ್.ಮುದ್ಗಲ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿದೆ.

ಕೋರ್ಟ್ ಆದೇಶವೇನು: ಗುತ್ತಿಗೆ ಆಧಾರದ ಮೇಲೆ ನೌಕರಿ ಮಾಡುತ್ತಿದ್ದವರಿಗೆ ತಮ್ಮ ಸೇವೆ ಖಾಯಂ ಆಗುವವರೆಗಿನ ಅವಧಿ ಕೆಲಸಕ್ಕೂ ಗ್ರ್ಯಾಚುಟಿ ಪಡೆಯಲು ಅರ್ಹರು ಎಂದು ಆದೇಶ ನೀಡಲಾಗಿದೆ. ಅಲ್ಲದೆ, ಗ್ರ್ಯಾಚುಟಿ ಪಾವತಿ ಕಾಯಿದೆ 1972ರ ಅನ್ವಯ ಸಕ್ಷಮ ಪ್ರಾಕಾರ, ಗ್ರ್ಯಾಚುಟಿ ಪಾವತಿಸುವಂತೆ ಮಾಡಿದ್ದ ಆದೇಶವನ್ನು ರದ್ದುಗೊಳಿಸಲು ನ್ಯಾಯಪೀಠ ನಿರಾಕರಿಸಿದೆ.

ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿ ಉದ್ಯೋಗಿಗಳು ಸೇವೆ ಖಾಯಂ ಆಗುವ ಮುನ್ನ ಸಲ್ಲಿಸಿದ್ದ ಸೇವೆಯ ಅವಧಿಗೂ ಗ್ರ್ಯಾಚುಟಿ ನೀಡಲೇಬೇಕಾಗುತ್ತದೆ ಎಂದು ಆದೇಶಿಸಿದೆ.

ಕರ್ನಾಟಕ ನಾಗರಿಕ ಸೇವಾ ಕಾಯಿದೆ (ಕೆಸಿಎಸ್‌ಆರ್) ಪ್ರಾಧಿಕಾರ ಪ್ರತಿವಾದಿ ಉದ್ಯೋಗಿಗಳ ಸೇವೆಯನ್ನು ಖಾಯಂಗೊಳಿಸಲಾಗಿದೆ. ಅವರು ನಿವೃತ್ತರಾಗಿ ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಪಡೆದಿದ್ದಾರೆ. ಆದರೆ ಉದ್ಯೋಗಿಗಳಿಗೆ ಸೇವೆ ಖಾಯಂ ಆದ ನಂತರದ ಅವರಿಗೆ ಮಾತ್ರ ಗ್ರ್ಯಾಚುಟಿ ▶ 8ನೇ ಪುಟಕ್ಕೆ



ಸಾವಿರ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡೇಟಾ ಸಾಕ್ಷರತೆಗೆ ಐಓಎ ಆಸಕ್ತಿ



"ಅನಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಬಳಕೆಯನ್ನು ಕೇವಲ ಹೈಟೆಕ್ ಉದ್ದಿಮೆಗಳಿಗೆ ಮಾತ್ರ ಸೀಮಿತಗೊಳಿಸಬಾರದು. ಬದಲಿಗೆ ಸರ್ಕಾರಿ ಇಲಾಖೆಗಳಲ್ಲಿಯೂ ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಐಓಎ ಸಂಸ್ಥೆಯು ಕಾರ್ಪೊರೇಟ್ ಸದಸ್ಯತ್ವದ ಜೊತೆಗೆ ಕರ್ನಾಟಕ ಸರ್ಕಾರದ ಉದ್ಯೋಗಿಗಳಿಗೆ ಉಚಿತವಾಗಿ 100 ಸದಸ್ಯತ್ವ ಕೊಡಲು ಸಿದ್ಧವಿದೆ.
–ಡಾ.ಕ್ಲೇರ್ ವಾಲ್ಶ್, ಅನಲಿಟಿಕ್ಸ್ ಐಓಎ ಪ್ರತಿನಿಧಿ

ಲಂಡನ್/ಬೆಂಗಳೂರು, ಮೇ 22– ಕರ್ನಾಟಕದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ಆಯ್ದ 1,000 ವಿದ್ಯಾರ್ಥಿಗಳಿಗೆ ಡೇಟಾ ಸಾಕ್ಷರತೆಯನ್ನು ಒದಗಿಸಲು ಮತ್ತು ಶಾಲಾ ವಿದ್ಯಾರ್ಥಿಗಳ ಮಟ್ಟದಲ್ಲಿ ಸಂಪೂರ್ಣವಾಗಿ ಈ ಕಾರ್ಯಕ್ರಮವನ್ನು ವಿಸ್ತರಿಸಲು ಇಲ್ಲಿನ ಅನಲಿಟಿಕ್ಸ್ ಇನ್ಸ್ಟಿಟ್ಯೂಟ್ (ಐಓಎ) ತೀವ್ರ ಆಸಕ್ತಿ ವ್ಯಕ್ತಪಡಿಸಿದೆ. ವರ್ಲ್ಡ್ ಎಜುಕೇಷನ್ ಫೋರಂ ಸಮಾವೇಶದಲ್ಲಿ ಭಾಗವಹಿಸಿದ ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ್ ಅವರನ್ನು ಭೇಟಿ ಮಾಡಿದ್ದು, ಸಂಸ್ಥೆಯ ಉನ್ನತಾಧಿಕಾರಿಗಳ ನಿಯೋಗ ▶ 8ನೇ ಪುಟಕ್ಕೆ

ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪೂರ್ವಾಭ್ಯಾಸ; ಜೂ.21ರಂದು ಮೈಸೂರಿಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ

2 ಲಕ್ಷ ಯೋಗಪಟುಗಳಿಂದ ಗಿನ್ನಿಸ್ ದಾಖಲೆಗೆ ಸಿದ್ಧತೆ





ಮೈಸೂರು, ಮೇ 22(ಆರ್‌ಕೆಬಿ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜೂ.21ರಂದು ಮೈಸೂರಿನಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನೋತ್ಸವಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅಂದು 2 ಲಕ್ಷಕ್ಕೂ ಹೆಚ್ಚಿನ ಯೋಗಪಟುಗಳನ್ನು ಸೇರಿಸಿ ಗಿನ್ನಿಸ್ ದಾಖಲೆ ನಿರ್ಮಿಸುವ ಕುರಿತಂತೆ ಭಾನುವಾರ ಮೈಸೂರಿನ ಮಹಾರಾಜ ಮೈದಾನದ ಬಳಿಯ ಕ್ರಿಕೆಟ್ ಮೈದಾನದಲ್ಲಿ ಯೋಗ ತರಬೇತುದಾರರಿಗೆ ಪೂರ್ವಾಭ್ಯಾಸ ನಡೆಸಲಾಯಿತು.

ಮೈಸೂರು ಯೋಗ ಫೆಡರೇಷನ್ ವತಿಯಿಂದ ನಡೆದ ಪೂರ್ವಾಭ್ಯಾಸದಲ್ಲಿ ಸುಮಾರು 150ಕ್ಕೂ ಹೆಚ್ಚು ಯೋಗ ತರಬೇತುದಾರರು ಭಾಗವಹಿಸಿದ್ದರು. ಯೋಗಪಟು ಡಾ.ಗಣೇಶ್‌ಕುಮಾರ್ ಶಂಖನಾದ ಮೊಳಗಿಸಿದರು. ಪ್ರಾರ್ಥನೆಯ ಬಳಿಕ ವಿವಿಧ ಯೋಗ ಸಂಸ್ಥೆಗಳು ಮುಖ್ಯಸ್ಥರು ಚಲನಕ್ರಿಯೆ, ವಿವಿಧ ಆಸನಗಳು, ಪ್ರಾಣಾಯಾಮ, ಧ್ಯಾನ ಮತ್ತು ಸಂಕಲ್ಪ ಹೇಳಿಕೊಟ್ಟರು. ಶಾಂತಿಮಂತ್ರದೊಂದಿಗೆ ಇಂದಿನ ಪೂರ್ವಾಭ್ಯಾಸ ಪೂರ್ಣಗೊಂಡಿತು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಪೂರ್ವಾಭ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಜೂ.21ರಂದು ಪ್ರಧಾನಿ ಮೋದಿ ಅವರು ಅಂತಾರಾಷ್ಟ್ರೀಯ ಯೋಗ ದಿನೋತ್ಸವದ ಅಂಗವಾಗಿ ಮೈಸೂರಿಗೆ ಭೇಟಿ ನೀಡುವುದಾಗಿ ಪ್ರಕಟಿಸಿದ್ದು, ಇಡೀ ಮೈಸೂರಿಗರಿಗೆ ಹಬ್ಬದ ಸಂಭ್ರಮ ಮನೆ ಮಾಡಿದೆ. ಮೈಸೂರನ್ನು ಯೋಗದ ಹಬ್ ಆಗಿ ಮಾಡಬೇಕೆಂದು ಈ ಹಿಂದೆಯೇ ಪ್ರಕಟಿಸಿದ್ದ ಮೋದಿಯವರು, ಕರ್ನಾಟಕದ ನೆಲದಿಂದಲೇ ಯೋಗ ನೋಡುವ ಆಶಯ ಹೊಂದಿದ್ದಾರೆ. ಮೈಸೂರು ಯೋಗ, ಆರೋಗ್ಯ ಮತ್ತು ಶಿಕ್ಷಣದಲ್ಲಿ ಉತ್ತುಂಗಕ್ಕೆ ಏರಬೇಕು. ವಿಶ್ವ ಭೂಪಟದಲ್ಲಿ ಮೈಸೂರು ಸೇರುವ ಕಾಲ ಬರುತ್ತದೆ ಎಂದು ಹೇಳಿದ್ದನ್ನು ಸ್ಮರಿಸಿದರು.

ಮೈಸೂರಿನ ಅಂತಾರಾಷ್ಟ್ರೀಯ ಯೋಗ ದಿನೋತ್ಸವದ ಪೂರ್ವಾಭ್ಯಾಸ ಕಾರ್ಯಕ್ರಮಗಳು ಪ್ರತೀ ಭಾನುವಾರ ನಡೆಯಲಿದೆ. ಜೂ.29ರಂದು ಸುತ್ತೂರು ಮಠದಲ್ಲಿ ಸುತ್ತೂರು ಶ್ರೀಗಳ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಬಳಿಕ ಜೂ.5ರಂದು ಅರಮನೆ ಆವರಣದಲ್ಲಿ, ನಂತರ ಜೂ.12, 19ರಂದು ರೇಸ್‌ಕೋರ್ಸ್ ಮೈದಾನದಲ್ಲಿ ಪೂರ್ವಾಭ್ಯಾಸ ನಡೆಸಲಾಗುವುದು. ಜೂ.21ರಂದು 2 ಲಕ್ಷ ಯೋಗಪಟುಗಳಿಂದ ಯೋಗ ಪ್ರದರ್ಶನ ನಡೆಸಲಾಗುವುದು.
–ಶ್ರೀಹರಿ, ಅಧ್ಯಕ್ಷ, ಮೈಸೂರು ಯೋಗ ಫೆಡರೇಷನ್

ಜೂ.21ರಂದು ಗಿನ್ನಿಸ್ ದಾಖಲೆ ಬರೆಯುವ ಪ್ರಯತ್ನ ನಡೆದಿದೆ. 2 ಲಕ್ಷಕ್ಕೂ ಹೆಚ್ಚು ಯೋಗಪಟುಗಳು ಅಂದು ಭಾಗವಹಿಸುವಂತೆ ಪ್ರಯತ್ನ ನಡೆದಿದ್ದು, ಅದಕ್ಕಾಗಿ ನಾನಾ ಯೋಜನೆ ಹಾಕಿಕೊಳ್ಳಲಾಗಿದೆ. ಎಲ್ಲಾ ಜನಪ್ರತಿನಿಧಿಗಳು ಪಕ್ಷ, ಧರ್ಮ, ಜಾತಿ ಭೇದ ಬಿಟ್ಟು ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಇದೊಂದು ದೊಡ್ಡ ಹಬ್ಬ: ಮೈಸೂರು ಯೋಗ ಫೆಡರೇಷನ್‌ನ ಅಧ್ಯಕ್ಷ ಶ್ರೀಹರಿ ಮಾತನಾಡಿ, ಪ್ರಧಾನಿ ಮೋದಿ ಅವರು ಜೂ.21ರಂದು ಮೈಸೂರಿನಲ್ಲಿ ಯೋಗ ದಿನೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆಂಬ ಪ್ರಕಟಣೆ ಹೊರಬೀಳುತ್ತಿದ್ದಂತೆ ಇಡೀ ಮೈಸೂರಿಗೆ ಕಂಪನ ಶುರುವಾಗಿದೆ. ▶ 8ನೇ ಪುಟಕ್ಕೆ

ಅರಮನೆಯಿಂದ ಚಾಮುಂಡಿ ಬೆಟ್ಟದವರೆಗೆ ಯೋಗ ಪ್ರದರ್ಶನ!

ಅಂತಾರಾಷ್ಟ್ರೀಯ ಯೋಗ ಪ್ರದರ್ಶನದಲ್ಲಿ ಮೈಸೂರಿನಲ್ಲಿ 2 ಲಕ್ಷ ಜನ ಸೇರಿಸುವ ಪ್ರಯತ್ನ ನಡೆಸಿದ್ದು, ಅಂದು ಅರಮನೆಯಿಂದ ಚಾಮುಂಡಿ ಬೆಟ್ಟದವರೆಗಿನ ಎಲ್ಲಾ ರಸ್ತೆಗಳಲ್ಲೂ ಯೋಗ ಪಟುಗಳಿಂದ ತುಂಬಿರುವಂತೆ ನೋಡಿಕೊಳ್ಳುವಂತೆ ಶಾಸಕ ಎಸ್.ಎ.ರಾಮದಾಸ್ ಸಲಹೆ ನೀಡಿದರು. ಇದು ದೇಶದಲ್ಲಿಯೇ ವಿಶೇಷ ಕಾರ್ಯಕ್ರಮವಾಗಿ ಹೊರ ಹೊಮ್ಮಲಿದೆ. ಹಾಗಾಗಿ ಆ ಪ್ರಯತ್ನ, ಚಿಂತನೆಗಳು ನಡೆದಿವೆ ಎಂದರು.

ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಬರುತ್ತಿರುವುದರಿಂದ ಕಾರ್ಯಕ್ರಮವನ್ನು ಸಂಪೂರ್ಣ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎಲ್ಲರ ಪ್ರಯತ್ನ ಅಗತ್ಯ. ಇದಕ್ಕೆ ಜವಾಬ್ದಾರಿಯಿಂದ ಸಿದ್ಧತೆಗಳನ್ನು ಕೈಗೊಳ್ಳಬೇಕಾಗಿದೆ. ಮನೆಗೆ ಅತಿಥಿಗಳು ಬಂದಾಗ ನಾವು ಹೇಗೆ ತಯಾರಿ ನಡೆಸುತ್ತೇವೋ ಅದೇ ರೀತಿ ಯೋಗ ದಿನಕ್ಕೆ ತಯಾರಾಗಬೇಕಿದೆ. ಸಣ್ಣ ಮಕ್ಕಳಿಂದ ಹಿರಿಯರವರೆಗೆ ಎಲ್ಲರೂ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವಂತೆ ಕಾರ್ಯಕ್ರಮ ರೂಪಿಸಬೇಕಿದೆ.
–ಎಸ್.ಎ.ರಾಮದಾಸ್, ಶಾಸಕರು.

ಪ್ರಧಾನಿ ನರೇಂದ್ರ ಮೋದಿ ಆಗಮನದಿಂದ
ಮೈಸೂರಿನ ಯೋಗ, ಆತಿಥ್ಯ ವಲಯಕ್ಕೆ ಉತ್ತೇಜನ

ಮೈಸೂರು, ಮೇ 22(ಆರ್‌ಕೆ)–ಜೂನ್ 21ರಂದು ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವುದು ಇಲ್ಲಿನ ಯೋಗ ಮತ್ತು ಆತಿಥ್ಯ ವಲಯಕ್ಕೆ ಚೈತನ್ಯ ಬರುತ್ತದೆ ಎಂದು ಸ್ಥಳೀಯ ಸ್ಟೇಕ್ ಹೋಲ್ಡರ್‌ಗಳು ಅಭಿಪ್ರಾಯ ಪಟ್ಟಿದ್ದಾರೆ.

ಮೈಸೂರಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ದಿನದ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಮೋದಿ ಅವರು ಭಾಗವಹಿಸುವುದು ಖಚಿತಪಟ್ಟಿರುವ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡರು, ಪ್ರಧಾನಮಂತ್ರಿಗಳ ಆಗಮನವು ಮೈಸೂರಿನ ಹೆಮ್ಮೆಯ ವಿಷಯವಾಗಿದ್ದು, ಅದರಿಂದ ಸಾಂಸ್ಕೃತಿಕ ನಗರಿ ಮೈಸೂರು ಬ್ರಾಂಡ್ ಮೌಲ್ಯ ವೃದ್ಧಿಯಾಗಲಿದ್ದು, ಯೋಗ ವಲಯಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಪ್ರಧಾನಿಗಳನ್ನು ಮೈಸೂರಿಗೆ ಕರೆತರುವ ಪ್ರಯತ್ನದಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಸದ ಪ್ರತಾಪ್ ಸಿಂಹ ಅವರಿಗೆ ವಂದನೆಗಳು ಎಂದರು.

ಅಷ್ಟಾಂಗ ಯೋಗ ಖ್ಯಾತಿಯ ಶರತ್ ಜೋಯಿಸ್ ಅವರು ಮಾತನಾಡಿ, ಯೋಗ ದಿನದಂದು ಪ್ರಧಾನಮಂತ್ರಿಗಳು ಭಾಗವಹಿಸುತ್ತಿರುವುದು ಮೈಸೂರಿಗೆ ಸಂತಸದ ಕ್ಷಣ. ಅದರಿಂದ ಯೋಗ, ವಿಶೇಷವಾಗಿ ಮೈಸೂರು ಯೋಗದ ಮೌಲ್ಯ ಹೆಚ್ಚಿಸುತ್ತದೆ. ಯೋಗ ಗುರು ಕೃಷ್ಣ ಪಟ್ಟಾಭಿ ಜೋಯಿಸ್ ಅವರ ಪರಿಶ್ರಮದಿಂದಾಗಿ ಮೈಸೂರು ಅಷ್ಟಾಂಗ ಯೋಗದ ನೆಲೆಯಾಗಿದೆ ಎಂದರು.

ಯೋಗ ಗುರು ಕೆ.ಪಟ್ಟಾಭಿ ಜೋಯಿಸ್ ಅವರ ಮೊಮ್ಮಗನಾದ ಶರತ್ ಜೋಯಿಸ್ ವಿಶ್ವ ಖ್ಯಾತಿಯ ಅಷ್ಟಾಂಗ ಯೋಗ ಸಂಸ್ಥೆ 'ಕೃಷ್ಣ ಪಟ್ಟಾಭಿ ಜೋಯಿಸ್ ಅಷ್ಟಾಂಗ ಯೋಗ ಇನ್‌ಸ್ಟಿಟ್ಯೂಟ್' ಅನ್ನು ನಡೆಸುತ್ತಿದ್ದು, ಯೋಗ ಬೋಧನೆಯಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಜೆಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಡಿ.ಶ್ರೀಹರಿ ಅವರು ಪ್ರತಿಕ್ರಿಯೆ ನೀಡಿ, ಕಳೆದ 8 ವರ್ಷಗಳ ನಿರಂತರ ಪ್ರಯತ್ನದಿಂದಾಗಿ ಪ್ರಧಾನಮಂತ್ರಿಗಳು ಮೈಸೂರಿಗೆ ಆಗಮಿಸುತ್ತಿದ್ದಾರೆ. ಆದ್ದರಿಂದ ಮೈಸೂರು ಮಾತ್ರವಲ್ಲ, ಕರ್ನಾಟಕ ರಾಜ್ಯಕ್ಕೇ ಹೆಮ್ಮೆ ತರುತ್ತದೆ. ಅದಕ್ಕೆ ಕಾರಣರಾಗಿರುವ ಸಂಸದ ಪ್ರತಾಪ್ ಸಿಂಹರಿಗೆ ಧನ್ಯವಾದಗಳು ಎಂದರು.



ಸಿ.ನಾರಾಯಣಗೌಡ ಶರದ್ ಜೋಷಿ ಶ್ರೀಹರಿ

ಯೋಗ ಪ್ರದರ್ಶನಕ್ಕೆ ಪ್ರತೀ ವರ್ಷ ಮೈಸೂರಲ್ಲಿ ಯೋಗ ಶಾಲೆ, ಶೈಕ್ಷಣಿಕ ಸಂಸ್ಥೆ, ಅಧಿಕಾರಿಗಳು, ರಾಜಕೀಯ ಮುಖಂಡರು, ಮಾಧ್ಯಮಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದರಿಂದ ಪ್ರಧಾನಿಗಳನ್ನು ಆಹ್ವಾನಿಸಲಾಗಿದೆ ಎಂದು ಅವರು ತಿಳಿಸಿದರು.

ಕೋವಿಡ್ ಸೋಂಕಿನಿಂದಾಗಿ ಎರಡು ವರ್ಷ ಹೊರತುಪಡಿಸಿದರೆ, ಮೈಸೂರಲ್ಲಿ ಪ್ರತೀ ವರ್ಷ ಯೋಗ ದಿನಾಚರಣೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೊದಲ ವರ್ಷ 10,000 ಮಂದಿ ಸೇರಿದ್ದು, ಕಳೆದ ವರ್ಷ 1 ಲಕ್ಷಕ್ಕೂ ಹೆಚ್ಚು ಮಂದಿ ಆನ್‌ಲೈನ್‌ನಲ್ಲಿ ಭಾಗವಹಿಸಿದ್ದರು ಎಂದ ಶ್ರೀಹರಿ ಅವರು, ಪ್ರಧಾನಮಂತ್ರಿಗಳು ಆಗಮಿಸುತ್ತಿರುವುದರಿಂದ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಮೈಸೂರಲ್ಲಿ 3 ಸ್ಥಳಗಳನ್ನು ಸೂಚಿಸಿದ್ದಾರೆ.

1.50 ಲಕ್ಷ ಮಂದಿ ಸೇರಬಹುದಾದ ಮೈಸೂರು ರೇಸ್ ಕ್ಲಬ್, 10,000 ಮಂದಿ ಸಾಮರ್ಥ್ಯದ ಅರಮನೆ ಆವರಣ ಹಾಗೂ ಮಳೆ ಬಂದಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣವನ್ನು ಅವರು ಸಲಹೆ ನೀಡಿದ್ದು, ಸ್ಥಳದ ಬಗ್ಗೆ ಆಯುಷ್ ಸಚಿವಾಲಯ, ಪ್ರಧಾನಮಂತ್ರಿಗಳ ಕಾರ್ಯಾಲಯ ಮತ್ತು ವಿಶೇಷ ಭದ್ರತಾ ಪಡೆ (SPG) ನಿರ್ಧರಿಸಲಿದೆ ಎಂದು ತಿಳಿಸಿದರು.



ಮೈಸೂರಿನ ಮುಸ್ಲಿಂ ವೃತ್ತಿಪರರ ಸಂಘದ ವತಿಯಿಂದ ಪ್ರಪ್ರಥಮ ಬಾರಿಗೆ ಉದಯಗಿರಿಯ ಸಿಟಿಜನ್ ಕಾನ್ವೆಂಟ್‌ನಲ್ಲಿ ಉದ್ಯೋಗ ಮೇಳ ಏರ್ಪಡಿಸಲಾಗಿತ್ತು. ರಘುಲಾಲ್ ಅಂಡ್ ಕೋ ಮತ್ತು ರಘುಲಾಲ್ ಸರ್ಜಿಕಲ್ಸ್‌ನ ರಘುಲಾಲ್ ರಾಘವನ್ (ಮಧ್ಯದವರು) ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂಘಟಕ ಅಮಾನುಲ್ಲಾ ಖಾನ್, ಕಟಾರಿಯಾ ಜ್ಯುವೆಲರ್ಸ್‌ನ ಮಹೇಂದ್ರ ಜೈನ್, ಸಿಟಿಜನ್ಸ್ ಕಾನ್ವೆಂಟ್ ಪ್ರಿನ್ಸಿಪಾಲ್ ಡಾ.ಮಹಾ ಜಬೀನ್, ಚಾರ್ಟರ್ಡ್ ಅಕೌಂಟೆಂಟ್ ಕುಮಾರ್ಪಾಲ್ ಜೈನ್, ಎಎಂಪಿ ಕೋ-ಆರ್ಡಿನೇಟರ್ ಅಜ್ಮಲ್, ಕಾನ್ವೆಂಟ್‌ನ ಕೋ-ಆರ್ಡಿನೇಟರ್ ಅಬ್ದುಲ್ ಮುಹೀಬ್ ಉಪಸ್ಥಿತರಿದ್ದರು.

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಮತಯಾಚನೆ

ಮೈಸೂರು, ಮೇ 22(ಆರ್‌ಕೆಬಿ)–ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಭಾನುವಾರ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ನಗರ ಪ್ರದೇಶದಲ್ಲಿ ಪದವೀಧರ ಮತದಾರರನ್ನು ಭೇಟಿ ಮಾಡಿ ಬಿರುಸಿನ ಪ್ರಚಾರ ನಡೆಸಿದರು.

ಲಿಂಗಾಂಬುದಿ ಉದ್ಯಾನವನ, ನಿವೇದಿತಾನಗರದ ಸುಬ್ಬರಾವ್ ಉದ್ಯಾನವನ, ರಾಮಕೃಷ್ಣನಗರದ ಷಟಲ್ ಬ್ಯಾಡ್ಮಿಂಟನ್ ಮೈದಾನ ಸೇರಿದಂತೆ ವಿವಿಧೆಡೆ ಮತದಾರರನ್ನು ಭೇಟಿ ಮಾಡಿ ಮತ ಯಾಚಿಸಿದರು.

ಈ ವೇಳೆ ಕೇಂದ್ರ ಸರ್ಕಾರ ಇಂಧನ ದರ ಕಡಿತ ಮಾಡಿರುವ ಬಗ್ಗೆ ಮತದಾರರು ಅಭ್ಯರ್ಥಿಯೊಂದಿಗೆ ಹರ್ಷ ವ್ಯಕ್ತಪಡಿಸಿದರು. ಬಹುತೇಕ ಮತದಾರರು ಬಿಜೆಪಿಗೆ ಪ್ರಥಮ ಪ್ರಾಶಸ್ತ್ಯ ಮತ ನೀಡುವುದಾಗಿ ಅಭ್ಯರ್ಥಿಗೆ ಭರವಸೆ ನೀಡಿ, ಶುಭ ಹಾರೈಸಿದರು.



ಜಯದೇವ ಆಸ್ಪತ್ರೆ ವೈದ್ಯ ಡಾ.ಸದಾನಂದ್, ಡಾ. ಸಂತೋಷ, ಡಾ.ಕೇಶವ, ಶಿಕ್ಷಣ ಇಲಾಖೆಯ ಬಸವರಾಜ್ ಇನ್ನಿತರ ಪ್ರಮುಖರ ಮನೆಗಳಿಗೂ ಅವರು ಭೇಟಿ ನೀಡಿ ತಮಗೆ ಮತ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬಿಎಂ.ರಘು, ಮಾಜಿ ಅಧ್ಯಕ್ಷ ಎಂ.ಶಿವಕುಮಾರ್, ಪಾಲಿಕೆ ಸದಸ್ಯೆ ಲಕ್ಷ್ಮಿ ಕಿರಣ್ ಮಾದೇಗೌಡ, ಆರ್.ಕೆ.ಶರತ್, ಚುನಾವಣಾ ಸಂಚಾಲಕ ಎಂ.ಕೆ.ಶಂಕರ್, ಹೆಚ್.ಜಿ.ರಾಜಮಣಿ, ವಿಜಯ ಮಂಜುನಾಥ್, ರಾಕೇಶ್ ಭಟ್, ಹೇಮಾ ಗಂಗಪ್ಪ, ಗಿರೀಶ್, ಪ್ರತಾಪ್, ಬಸವಣ್ಣ, ಹಿರಿಯಣ್ಣ, ಬಸವ ಲಿಂಗಪ್ಪ, ಶಿವಕುಮಾರ್, ಚಂದ್ರಶೇಖರ್, ಕಾಂತರಾಜ್ ಅರಸ್, ನಾಗರಾಜ್ ಜನ್ನು, ಗೀತಾ ಮಹೇಶ್, ವಿನುತಾ, ರಮ್ಯಾ ಪುನೀತ್, ನವೀನ್ ಇನ್ನಿತರರು ಉಪಸ್ಥಿತರಿದ್ದರು.

ಆರ್‌ಸಿ, ಡಿಸಿಯಿಂದ ಮತ ಎಣಿಕೆ ಕೇಂದ್ರ ಪರಿಶೀಲನೆ

ಮೈಸೂರು, ಮೇ 22(ಆರ್‌ಕೆ)–ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣಾ ಮತ ಎಣಿಕೆ ನಡೆಯಲಿರುವ ಮೈಸೂರಿನ ವಾಲ್ಮೀಕಿ ರಸ್ತೆಯ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರದಲ್ಲಿ ಚುನಾವಣಾಧಿಕಾರಿ, ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ. ಪ್ರಕಾಶ್ ಮತ್ತು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಸ್ಥಳ ಪರಿಶೀಲನೆ ನಡೆಸಿದರು.




ಸ್ಟ್ರಾಂಗ್ ರೂಂ, ಮತ ಎಣಿಕೆ ಹಾಲ್‌ಗಳು, ಮಾಧ್ಯಮ ಕೊಠಡಿ, ವೀಕ್ಷಕರ ಕೊಠಡಿ, ವಾಹನ ನಿಲುಗಡೆ ಸ್ಥಳ, ಪ್ರವೇಶ-ನಿರ್ಗಮನ ಭದ್ರತಾ ವ್ಯವಸ್ಥೆ, ಸಿಸಿ ಕ್ಯಾಮರಾಗಳ ಸೌಲಭ್ಯಗಳ ಕುರಿತಂತೆ ಪರಿಶೀಲಿಸಿದ ಅಧಿಕಾರಿಗಳು, ಮತ ಎಣಿಕೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧೀನಾಧಿಕಾರಿಗಳಿಗೆ ಸಲಹೆ-ಸೂಚನೆಗಳನ್ನು ನೀಡಿದರು.

ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಸೀಲ್ ಮಾಡಿದ ಮತಪೆಟ್ಟಿಗೆಗಳನ್ನು ಪೊಲೀಸ್ ಭದ್ರತೆಯೊಂದಿಗೆ ತಂದು ಕ್ರಮ ಸಂಖ್ಯೆ ಅನುಸಾರ ಸ್ಟ್ರಾಂಗ್ ರೂಂನಲ್ಲಿ ಸುರಕ್ಷಿತವಾಗಿರಿಸುವುದು, ದಿನದ 24 ಗಂಟೆಯೂ ಸ್ಟ್ರಾಂಗ್ ರೂಂಗೆ ಪೊಲೀಸ್ ಸರ್ಪಗಾವಲಿರಿಸುವ ಬಗ್ಗೆಯೂ ಪೊಲೀಸ್ ಅಧಿಕಾರಿಗಳಿಗೆ ಪ್ರಾದೇಶಿಕ ಆಯುಕ್ತರು ಸೂಚನೆ ನೀಡಿದರು.

ಗೋಪಾಲಗೌಡ ಶಾಂತವೇರಿ ಆಸ್ಪತ್ರೆಯಲ್ಲಿ ಇಂದಿನಿಂದ ವಿಶೇಷ ಚಿಕಿತ್ಸಾ ಶಿಬಿರ


ಮೈಸೂರು, ಮೇ 22–ಮೈಸೂರಿನ ನಜರ್‌ಬಾದ್‌ನಲ್ಲಿರುವ ಗೋಪಾಲಗೌಡ ಶಾಂತವೇರಿ ಸ್ಮಾರಕ ಸಮೂಹ ಆಸ್ಪತ್ರೆಯಲ್ಲಿ ಮೇ 23ರಿಂದ 25ರವರೆಗೆ 3 ದಿನಗಳ ಕಾಲ ಕ್ಯಾನ್ಸರ್ ಮತ್ತು ಗ್ಯಾಸ್ಟ್ರೋ ಲಿವರ್ ವಿಶೇಷ ಚಿಕಿತ್ಸಾ ಶಿಬಿರವನ್ನು ಪ್ರತಿ ದಿನ ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಏರ್ಪಡಿಸಲಾಗಿದೆ.



ಗ್ಯಾಸ್ಟ್ರೋ ಎಂಟ್ರೋಲಾಜಿಸ್ಟ್ ಸೂಪರ್ ಸ್ಪೆಷಲಿಸ್ಟ್ ಡಾ.ನಿಶ್ಚಯ್ ಆರ್. ಹಾಗೂ ಸರ್ಜಿಕಲ್ ಆಂಕಾಲಜಿ ಸೂಪರ್ ಸ್ಪೆಷಾಲಿಸ್ಟ್ ಡಾ.ಜಯಕಾರ್ತಿಕ್ ವೈ ತಪಾಸಣೆ ನಡೆಸಲಿದ್ದಾರೆ. ಗ್ಯಾಸ್ಟ್ರೋ ಹಾಗೂ ಲಿವರ್ ಸಮಸ್ಯೆಯಿಂದ ಬಳಲುತ್ತಿರುವವರು ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಿಕೆಸಿ ವಿದ್ಯಾರ್ಥಿನಿ ಅನನ್ಯಗೆ 619 ಅಂಕ

ಮೈಸೂರು, ಮೇ 22–ಮೈಸೂರಿನ ಸಿಕೆಸಿ ವಿದ್ಯಾರ್ಥಿನಿ ಎಂ.ಅನನ್ಯ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 619 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕನ್ನಡದಲ್ಲಿ 123, ಇಂಗ್ಲಿಷ್–99, ಹಿಂದಿ–100, ಗಣಿತ–100, ವಿಜ್ಞಾನ–98 ಮತ್ತು ಸಮಾಜ ವಿಜ್ಞಾನದಲ್ಲಿ 99 ಅಂಕ ಪಡೆದು ಈ ಸಾಧನೆ ಮಾಡಿದ್ದಾರೆ. ಅನನ್ಯ ಪ್ರತಿಮಾ ಮತ್ತು ಮಲ್ಲೆಸ್ವಾಮಿ ಅವರ ಪುತ್ರಿ. ಜೊತೆಗೆ ಹಿರಿಯ ಚಲನಚಿತ್ರ ನಟ ದಿವಂಗತ ರತ್ನಾಕರ್ ಅವರ ಸೊಸೆ ಗಾಯಕಿ ಡಾ. ಪ್ರೀತಂ ರಾಘವೇಂದ್ರ ಅವರಿಗೂ ಸಂಬಂಧಿಯಾಗಬೇಕು.



ಮೋನಿಕಾಗೆ 614 ಅಂಕ

ಮೈಸೂರು, ಮೇ 22– ಶ್ರೀರಾಂಪುರದ ನಿರ್ಮಲ ಪ್ರೌಢಶಾಲೆಯ ವಿದ್ಯಾರ್ಥಿನಿ ಮೋನಿಕಾ ಜಿ.ಎಸ್. 614 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 123, ಇಂಗ್ಲಿಷ್–97, ಹಿಂದಿ–100, ಗಣಿತ–99, ವಿಜ್ಞಾನ–95 ಮತ್ತು ಸಮಾಜ ವಿಜ್ಞಾನದಲ್ಲಿ 100 ಅಂಕ ಪಡೆದು ಸಾಧನೆ ಮಾಡಿದ್ದಾರೆ. ಮೋನಿಕಾ ಗೋಪಾಲಪುರದ ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಶಿವಕುಮಾರ್ ಮತ್ತು ಸವಿತಾ ದಂಪತಿ ಪುತ್ರಿ.



ಸಾಮರ್ಥ್ಯ ವೃದ್ಧಿಯಿಂದ ಸಮರ್ಥ ಸೇವೆಗೆ ನಾಂದಿ
ಮಿಷನ್ ಕರ್ಮಯೋಗಿ ತರಬೇತಿ ಪಡೆದವರೊಂದಿಗೆ ಡಾ.ಬಾಲಸುಬ್ರಮಣ್ಯಂ ಸಂವಾದ

ಮೈಸೂರು,ಮೇ 22(ಎಸ್‌ಬಿಡಿ)– 'ಮಿಷನ್ ಕರ್ಮಯೋಗಿ' ಯೋಜನೆಯಡಿ ತರಬೇತಿ ಪಡೆಯುತ್ತಿರುವ ಮೈಸೂರಿನ ರೈಲ್ವೆ ನೌಕರರೊಂದಿಗೆ ಕೇಂದ್ರ ಸಾಮರ್ಥ್ಯ ನಿರ್ಮಾಣ ಆಯೋಗದ ಮಾನವ ಸಂಪನ್ಮೂಲ ಸದಸ್ಯ, ಮೈಸೂರಿನ ಡಾ.ಆರ್. ಬಾಲಸುಬ್ರಮಣ್ಯಂ ಸಂವಾದ ನಡೆಸಿದರು.

ಮೈಸೂರಿನ ಅಶೋಕಪುರಂನಲ್ಲಿರುವ ನೈಋತ್ಯ ರೈಲ್ವೆ ತರಬೇತಿ ಸಂಸ್ಥೆಗೆ ಭೇಟಿ ನೀಡಿದ್ದ ಡಾ.ಆರ್.ಬಾಲಸುಬ್ರಮಣ್ಯಂ, ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಿದರಲ್ಲದೆ, ಈಗಾಗಲೇ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಸಿಬ್ಬಂದಿಯ ಅಭಿಪ್ರಾಯ ಸಂಗ್ರಹಿಸಿದರು.

ಈ ವೇಳೆ ಮಾತನಾಡಿದ ಅವರು, ಮೈಸೂರು ವಿಭಾಗೀಯ ರೈಲ್ವೇ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಅವರ ನೇತೃತ್ವದಲ್ಲಿ ವಿಭಾಗದ ಮುಂಚೂಣಿ ಸಿಬ್ಬಂದಿ ಸಾಮರ್ಥ್ಯ ವೃದ್ಧಿಸುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ. ಸಾರ್ವಜನಿಕರೊಂದಿಗೆ ನಿತ್ಯ ಸಂಪರ್ಕವುಳ್ಳ ಮುಂಚೂಣಿ ಸಿಬ್ಬಂದಿಗೆ ತರಬೇತಿಯಿಂದ ಅನುಕೂಲವಾಗಿದೆ. ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ 'ಸೇವಾಭಾವ' ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ರೈಲ್ವೇ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ಎ.ದೇವಸಹಾಯಂ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ.ಮಂಜುನಾಥ್ ಕನಮಡಿ, ಹಿರಿಯ ವಿಭಾಗೀಯ ಕಾರ್ಮಿಕ ಶಾಖೆಯ ಅಧಿಕಾರಿ ಪ್ರಶಾಂತ್ ಮಾಸ್ತಿಹೊಳಿ, ಸಹಾಯಕ ವಾಣಿಜ್ಯ ವ್ಯವಸ್ಥಾಪಕ ನೈನಿ ರಂಗನಾಥ ರೆಡ್ಡಿ ಇದ್ದರು.



ಮೈಸೂರಿನ ಅಶೋಕಪುರಂನಲ್ಲಿರುವ ನೈಋತ್ಯ ರೈಲ್ವೆ ತರಬೇತಿ ಸಂಸ್ಥೆಯಲ್ಲಿ ಕೇಂದ್ರ ಸಾಮರ್ಥ್ಯ ನಿರ್ಮಾಣ ಆಯೋಗದ ಮಾನವ ಸಂಪನ್ಮೂಲ ಸದಸ್ಯ ಡಾ.ಆರ್.ಬಾಲಸುಬ್ರಮಣ್ಯಂ, ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಮೇ 30ರವರೆಗೆ ತರಬೇತಿ: ನೈಋತ್ಯ ರೈಲ್ವೆ ಮೈಸೂರು ವಿಭಾಗವು ಮಿಷನ್ ರೈಲ್ ಕರ್ಮಯೋಗಿ ಕಾರ್ಯಕ್ರಮದಡಿ 600ಕ್ಕೂ ಹೆಚ್ಚು ಮುಂಚೂಣಿ ಸಿಬ್ಬಂದಿಗೆ ತರಬೇತಿ ನೀಡುವ ಉದ್ದೇಶ ಹೊಂದಿದ್ದು, ಮೇ 3ರಿಂದಲೇ ತರಬೇತಿ ಆರಂಭಿಸಲಾಗಿದೆ. ಮೈಸೂರು, ಅರಸೀಕೆರೆ, ಸಕಲೇಶಪುರ ಮತ್ತು ಚಿಕ್ಕಜಾಜೂರು ನಿಲ್ದಾಣ ಸೇರಿ ಒಟ್ಟು 4 ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಸಾರ್ವಜನಿಕರೊಂದಿಗೆ ನೇರ ಸಂವಹನ ನಡೆಸುವ ಟಿಕೆಟ್ ಪರೀಕ್ಷಕರು, ಬುಕಿಂಗ್ ಮತ್ತು ಮೀಸಲಾತಿ ಸಿಬ್ಬಂದಿ, ಸ್ಟೇಷನ್ ಮಾಸ್ಟರ್‌ಗಳು ಮತ್ತು ವಾಣಿಜ್ಯ ಸಿಬ್ಬಂದಿ ಸೇರಿ ಈವರೆಗೆ ಸುಮಾರು 400 ಸಿಬ್ಬಂದಿ 9 ತಂಡಗಳಲ್ಲಿ ತರಬೇತಿ ಪಡೆದಿದ್ದು, ಅವರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ತಿಂಗಳಾಂತ್ಯಕ್ಕೆ ಇನ್ನುಳಿದ 200 ಸಿಬ್ಬಂದಿಗೂ ತರಬೇತಿ ನೀಡಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಮುಂಚೂಣಿ ಸಿಬ್ಬಂದಿಯ ದೃಷ್ಟಿಕೋನವನ್ನು ನಾಗರಿಕ ಸ್ನೇಹಿಯಾಗಿ ಪರಿವರ್ತಿಸುವುದು, ಸಿಬ್ಬಂದಿ ಸೇವಾ ಸಾಮರ್ಥ್ಯ ವೃದ್ಧಿಸುವುದರ ಜೊತೆಗೆ ಅವರ ವೈಯಕ್ತಿಕ ಕಾರ್ಯಕ್ಷಮತೆಯ ಸುಧಾರಣೆ ಈ ತರಬೇತಿ ಪ್ರಮುಖ ಉದ್ದೇಶವಾಗಿದೆ.

ಮಿಷನ್ ಕರ್ಮಯೋಗಿ: ನಾಗರಿಕ ಸೇವಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ಷಮತೆ ವೃದ್ಧಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ 'ಮಿಷನ್ ಕರ್ಮಯೋಗಿ' ಯೋಜನೆಯನ್ನು ಅನುಷ್ಠಾನಗೊಳಿಸಿದೆ. ನಾಗರಿಕ ಸೇವೆಯಲ್ಲಿರುವವರು ಸಮಾಜದ ಸವಾಲುಗಳನ್ನು ಎದುರಿಸಲು ಸಮರ್ಥರಾಗಿರಬೇಕು, ಹೊಸತನದ ತುಡಿತ, ಚುರುಕುತನ, ವಿಧೇಯತೆ, ವೃತ್ತಿಪರತೆ, ಪ್ರಗತಿಪರತೆ, ಪಾರದರ್ಶಕತೆ ಮತ್ತು ತಾಂತ್ರಿಕ ಜ್ಞಾನ, ರಚನಾತ್ಮಕ ಹಾಗೂ ಸೃಜನಶೀಲತೆ ಹೊಂದಿರಬೇಕು. ಈ ನಿಟ್ಟಿನಲ್ಲಿ ವಿಶೇಷ ಯೋಜನೆ ಜಾರಿಗೆ ತಂದಿದ್ದು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ತಜ್ಞರ ಸಹಯೋಗದಲ್ಲಿ ಸೂಕ್ತ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ ಸಾಮರ್ಥ್ಯ ನಿರ್ಮಾಣ ಆಯೋಗ (ಸಿಬಿಸಿ) ರಚಿಸಲಾಗಿದ್ದು, ಮೈಸೂರಿನ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ ಡಾ.ಬಾಲಸುಬ್ರಮಣ್ಯಂ (ಬಾಲು) ಮಾನವ ಸಂಪನ್ಮೂಲ ಸದಸ್ಯರಾಗಿರುವುದು ಗಮನಾರ್ಹ. ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಆದಿಲ್ ಜೈನುಲ್ಬಾಯಿ ಅಧ್ಯಕ್ಷರು, ಬೃಹತ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಮಾಜಿ ಕಮಿಷನರ್ ಪ್ರವೀಣ್ ಪರದೇಶಿ ಆಡಳಿತದ ಸದಸ್ಯ ಹಾಗೂ ಹೇಮಂಗ್ ಜಾನಿ ಕಾರ್ಯದರ್ಶಿಯಾಗಿದ್ದಾರೆ.

ಸಂಬಂಧಿಕರ ಮನೆಯಲ್ಲೇ ಮಹಿಳೆಯ ಚಿನ್ನಾಭರಣ ಕಳವು

ಮೈಸೂರು, ಮೇ 22–ಮದುವೆಗಾಗಿ ಮೈಸೂರಿನ ಸಂಬಂಧಿಕರ ಮನೆಗೆ ಬಂದಿದ್ದ ಮಹಿಳೆಯೋರ್ವರ ಚಿನ್ನಾಭರಣ ಕಳುವಾಗಿರುವ ಬಗ್ಗೆ ಜೆ.ಪಿ.ನಗರ 2ನೇ ಹಂತದಲ್ಲಿ ವರದಿಯಾಗಿದೆ. ಬೆಂಗಳೂರಿನ ಕಲ್ಯಾಣನಗರ ನಿವಾಸಿ ಶ್ರೀಮತಿ ಸುಜಾತ(52) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಮೈಸೂರಿನ ಜೆ.ಪಿ.ನಗರದಲ್ಲಿರುವ ಇವರ ನಾದಿನಿ ದಾಕ್ಷಾಯಣಿ ಅವರ ಮಗ ವಿಕ್ರಮ ಎಂಬುವರ ಮದುವೆಗಾಗಿ ಮೈಸೂರಿಗೆ ಬಂದಿದ್ದರು. ನಾದಿನಿ ಕುಟುಂಬದ ಜೊತೆ ಮಂಗಳೂರಿಗೆ ತೆರಳಿ ಮದುವೆ ಮುಗಿಸಿಕೊಂಡು ಮೈಸೂರಿಗೆ ಹಿಂತಿರುಗಿ ಅವರ ಮನೆಯಲ್ಲೇ ಉಳಿದುಕೊಂಡಿದ್ದರು. ಮೇ 13ರಂದು ಅವರ ಕಿಟ್‌ನ ಬಾಕ್ಸ್‌ನಲ್ಲಿಟ್ಟಿದ್ದ ಒಂದು ಮುತ್ತಿನ ಹಾರ, ನೆಕ್ಲೇಸ್, 3 ಜೊತೆ ಓಲೆ, ಒಂದು ಜೊತೆ ಕಿವಿಯ ರಿಂಗ್, ಒಂದು ಉಂಗುರ ಕಳುವಾಗಿದೆ. ಮನೆಯಲ್ಲಿರುವವರನ್ನು ಕೇಳಿದರೆ ಯಾರೂ ಅದನ್ನು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಮನೆಯಲ್ಲಿ ನಾದಿನಿ ದಾಕ್ಷಾಯಣಿ, ಶಿವರಾಮು, ವಿನಯ್, ನವ್ಯಶ್ರೀ, ವಿಕ್ರಮ್, ವಾಣಿಶ್ರೀ, ವಿಠಲ್, ವನಜ, ಮಲ್ಲಿಕಾರ್ಜುನ, ಶಿವಮ್ಮ, ಸೋಮಶೇಖರ್, ರತ್ನ, ಪ್ರಕಾಶ್, ಮನೆ ಕೆಲಸದಾಕೆ ಸರಸ್ವತಿ ಮತ್ತು ಮಹದೇವಮ್ಮ ಎಂಬುವರಿದ್ದು, ಇವರ ಮೇಲೆ ತಮಗೆ ಅನುಮಾನವಿರುವುದರಿಂದ ಅವರನ್ನು ವಿಚಾರಿಸಿ ತನ್ನ ಚಿನ್ನಾಭರಣವನ್ನು ಪತ್ತೆ ಮಾಡಿಕೊಡಬೇಕು ಎಂದು ಸುಜಾತ ಅವರು ಮೇ 20 ರಂದು ವಿದ್ಯಾರಣ್ಯಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಸ್ಕೂಟರ್–ಬೈಕ್ ಡಿಕ್ಕಿ: ಓರ್ವ ಸವಾರ ಸಾವು, ಮತ್ತೋರ್ವನಿಗೆ ತೀವ್ರ ಗಾಯ

ಮೈಸೂರು, ಮೇ 22–ಸ್ಕೂಟರ್ ಮತ್ತು ಬೈಕ್ ಡಿಕ್ಕಿಯಾದ ಪರಿಣಾಮ ಓರ್ವ ಸವಾರ ಸಾವನ್ನಪ್ಪಿ, ಮತ್ತೋರ್ವ ಸವಾರ ತೀವ್ರವಾಗಿ ಗಾಯಗೊಂಡ ಘಟನೆ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ಮೇ 20ರಂದು ರಾತ್ರಿ ಸಂಭವಿಸಿದೆ.

ಕುವೆಂಪುನಗರ 2ನೇ ಹಂತದ ಬಿ.ಪವನ್(21) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಕುವೆಂಪುನಗರ ಕೆ–ಬ್ಲಾಕ್‌ನ ಸೋಮಶೇಖರ್(52) ತೀವ್ರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಮಶೇಖರ್ ಸುಜುಕಿ ಆ್ಯಕ್ಸಿಸ್ ಸ್ಕೂಟರ್ (ಕೆಎ 09 ಇಡಬ್ಲ್ಯು 2778) ಮತ್ತು ಪವನ್ ಟಿವಿಎಸ್ ಅಪ್ಪಾಚಿ ಮೋಟಾರ್ ಬೈಕ್ (ಕೆಎ 12 ಆರ್ 2093) ರಲ್ಲಿ ಅಂದು ರಾತ್ರಿ 9.15ರಲ್ಲಿ ಆದಿಚುಂಚನಗಿರಿ ರಸ್ತೆಯಲ್ಲಿ ಉದಯ ಟಿವಿ ರಸ್ತೆ ಕಡೆ ತೆರಳುತ್ತಿದ್ದರು. ಕಾಗಿನೆಲೆ ವಿದ್ಯಾಸಂಸ್ಥೆ ಬಳಿ ಸೋಮಶೇಖರ್ ತಮ್ಮ ಸ್ಕೂಟರ್ ಅನ್ನು ಏಕಾಏಕಿ ಬಲಕ್ಕೆ ತಿರುಗಿಸಿದ ಪರಿಣಾಮ ಅವರ ಹಿಂದೆ ವೇಗವಾಗಿ ಬರುತ್ತಿದ್ದ ಪವನ್ ಬೈಕ್, ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಸವಾರರು ತೀವ್ರವಾಗಿ ಗಾಯಗೊಂಡಿದ್ದಾರೆ. ಇಬ್ಬರನ್ನೂ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ ಚಿಕಿತ್ಸೆ ಫಲಕಾರಿಯಾಗದೆ ಪವನ್ ರಾತ್ರಿ 11.10ರಲ್ಲಿ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡಿರುವ ಸೋಮಶೇಖರ್ ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಟ್ರಯಲ್ ರೈಡ್ ನೆಪದಲ್ಲಿ ಬೈಕ್ ಕದ್ದೊಯ್ದ ಖದೀಮ

ಕೊಳ್ಳೇಗಾಲ, ಮೇ 22–ಬೈಕ್ ಖರೀದಿಸುವುದಾಗಿ ತಿಳಿಸಿ ಟ್ರಯಲ್ ರೈಡ್ ನೆಪದಲ್ಲಿ ಬೈಕ್ ಅನ್ನೇ ಅಪಹರಿಸಿದ ಘಟನೆ ಕೊಳ್ಳೇಗಾಲ ಪಟ್ಟಣದ ಶಿವ ಲಾಡ್ಜ್ ಬಳಿ ನಡೆದಿದೆ. ಹನೂರು ತಾಲೂಕು ಕೆಂಪಯ್ಯನಹಟ್ಟಿ ಗ್ರಾಮದ ಪೈಂಟರ್ ಎಂ.ಅನಿಲ್ ಬೈಕ್ ಕಳೆದುಕೊಂಡವರಾಗಿದ್ದು, ಕಳೆದ 25 ದಿನದ ಹಿಂದೆ ಮಹದೇಶ್ವರ ಬೆಟ್ಟಕ್ಕೆ ಹೋದಾಗ ಮೈಸೂರಿನವರೆಂದು ಹೇಳಿಕೊಂಡು ಕಾರ್ತಿಕ್ ಎಂಬಾತ ಪರಿಚಯವಾಗಿದ್ದು, ಇವರ ಬೈಕ್ ಅನ್ನು ನೋಡಿ ಅದನ್ನು ತಾನು ಖರೀದಿ ಮಾಡುವು ದಾಗಿ ಇಚ್ಛಿಸಿರುವುದಾಗಿ ತಿಳಿಸಿ ಮೊಬೈಲ್ ನಂಬರ್ ನೀಡಿದ್ದಾನೆ. ಮೇ 5ರಂದು ಕಾರ್ತಿಕ್ ಮೊಬೈಲ್‌ಗೆ ಕರೆ ಮಾಡಿ ಅನಿಲ್ ತನ್ನ ಪಲ್ಸರ್–220 ಬೈಕ್ (ಕೆಎ 10 ಸಿಡಿ 6054) ಮಾರಾಟ ಮಾಡಲಿರುವುದಾಗಿ ತಿಳಿಸಿದ್ದು, ಕಾರ್ತಿಕ್ ಕೊಳ್ಳೇಗಾಲಕ್ಕೆ ಬರುವಂತೆ ಕರೆದಿದ್ದಾನೆ. ಮರುದಿನ ಅನಿಲ್ ಬೈಕ್‌ನೊಂದಿಗೆ ಕೊಳ್ಳೇಗಾಲದ ಶಿವ ಲಾಡ್ಜ್ ಬಳಿ ತೆರಳಿದಾಗ ಟ್ರಯಲ್ ನೋಡುವುದಾಗಿ ಬೈಕ್ ತೆಗೆದುಕೊಂಡು ಹೋದ ಕಾರ್ತಿಕ್ ಮತ್ತೆ ಬರಲೇ ಇಲ್ಲ ಎಂದು ಕೊಳ್ಳೇಗಾಲ ಪಟ್ಟಣ ಠಾಣೆಗೆ ಮೇ 21ರಂದು ಅನಿಲ್ ದೂರು ನೀಡಿದ್ದಾರೆ.

ಅಂಗನವಾಡಿ ಬೀಗ ಮುರಿದು ಸಿಲಿಂಡರ್, ಆಹಾರ ಪದಾರ್ಥ ಕಳವು


ಸಾಲಿಗ್ರಾಮ, ಮೇ 22–ಅಂಗನವಾಡಿ ಕೇಂದ್ರದ ಬಾಗಿಲು ಮುರಿದು ಗ್ಯಾಸ್ ಸಿಲಿಂಡರ್ ಮತ್ತು ಆಹಾರ ಪದಾರ್ಥಗಳನ್ನು ಕಳವು ಮಾಡಿರುವ ಘಟನೆ ಇಲ್ಲಿಗೆ ಸಮೀಪದ ನರಚನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಗಿರಿಜಾವತಿ ಅವರು ಮೇ 20ರ ಸಂಜೆ ಅಂಗನವಾಡಿ ಕೇಂದ್ರಕ್ಕೆ ಬೀಗ ಹಾಕಿಕೊಂಡು ತೆರಳಿದ್ದು, ಮರು ದಿನ ಬೆಳಗ್ಗೆ ಬಂದು ನೋಡಿದಾಗ ಕೇಂದ್ರದ ಬೀಗ ಮುರಿದು ಗ್ಯಾಸ್ ಸಿಲಿಂಡರ್, ಹಾಲಿನ ಪೌಡರ್, ಶೇಂಗಾ, ಕಡಲೆಕಾಳು, ಹೆಸರುಕಾಳು, ತೊಗರಿಬೇಳೆ, ಸಕ್ಕರೆ ಮುಂತಾದವುಗಳನ್ನು ಕಳವು ಮಾಡಿರುವ ಬಗ್ಗೆ ಗೊತ್ತಾಗಿದೆ. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪಯೋಗಿಸಿದ ಪಠ್ಯಪುಸ್ತಕ ಸಂಗ್ರಹಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ವಿತರಣೆ

ಮೈಸೂರು, ಮೇ 22– ಸಮಾಜ ಸೇವಾ ಕಾರ್ಯವನ್ನೇ ಧ್ಯೇಯವಾಗಿಸಿಕೊಂಡಿರುವ ಭಾರತೀಯ ಜೈನ್ ಸಂಘಟನ್ ನಿಮ್ಮಿಂದ ವಿದ್ಯಾದಾನ ಕಾರ್ಯಕ್ರಮದ ಮೂಲಕ ಪ್ರಥಮ ಪಿಯು ಹಾಗೂ ಮುಂದಿನ ತರಗತಿಗಳ ವಿದ್ಯಾರ್ಥಿಗಳು ಉಪಯೋಗಿಸಿದ ಪಠ್ಯ ಪುಸ್ತಕಗಳನ್ನು ಸಂಗ್ರಹಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ವಿತರಣೆ ಮಾಡುತ್ತಿದೆ. ಕುಮಾರಿ ನಶಾ ಜೈನ್ ಅವರು ಕಾರ್ಯಕ್ರಮದ ಸಂಘಟಕರಾಗಿದ್ದಾರೆ.

ಮೇ 29ರಿಂದ ಪಠ್ಯಗಳನ್ನು ಸಂಗ್ರಹಿಸಲಾಗುತ್ತದೆ. ಮತ್ತೆ ಮೂರು ಸುತ್ತಿನಲ್ಲಿ ಜೂ.5, 12 ಮತ್ತು 19ರಂದು ಬೆಳಗ್ಗೆ 9ರಿಂದ 12.30ರವರೆಗೆ ಶ್ರೀ ಸ್ಥಾನಕ ಜೈನ್ ಭವನ್, ಹಳ್ಳದ ಕೇರಿ, ಎಂ.ಜಿ.ರಸ್ತೆಯ ತೆರಾಪಂಥ್ ಭವನ್, ಇಟ್ಟಿಗೆ ಗೂಡಿನ ಕುಂತನಾಥ್ ಜೈನ್ ಮಂದಿರ್‌ನಲ್ಲಿ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತದೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತರು ಮಾಹಿತಿಗಾಗಿ ಸಂಪರ್ಕಿಸಿ ಮೊ.9844511361

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.05.2022 ಸೋಮವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಅಷ್ಟಮಿ, ನಕ್ಷತ್ರ : ಶತಭಿಷ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರ ಪೂಜೆ, ರುದ್ರ ಹೋಮ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ: ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಿಗೆ ಸನ್ಮಾನ, ವೇದನಿಧಿ– ವಿ.ಎಸ್. ಗುರುನಾಥ ಘನಪಾಠಿ, ಚೆನ್ನೈ(ಯಜುರ್ವೇದ, ಮೀಮಾಂಸ), ಶಾಸ್ತ್ರನಿಧಿ–ಶ್ರೀ ದೆಂದುಕೂರಿ ನಾರಾಯಣ ಶರ್ಮ, ವಿಜಯವಾಡ(ವ್ಯಾಕರಣ, ವೇದಾಂತ, ಮೀಮಾಂಸ, ನ್ಯಾಯ ಶಾಸ್ತ್ರ), ನಾದನಿಧಿ–ವಿ. ಮದುರೈ ಟಿ.ಎನ್.ಗೋಪಾಲನ್, ಚೆನ್ನೈ(ಕರ್ನಾಟಕ ಸಂಗೀತ), ವಿದ್ಯಾನಿಧಿ– ಪ್ರೊ. ಶ್ರೀನಿವಾಸ ವರಖೇಡಿ, ನವದೆಹಲಿ, ಆಸ್ಥಾನ ವಿದ್ವಾನ್– ಮಾಮಿಳ್ಳಪಲ್ಲಿ ಮೃತ್ಯುಂಜಯ ಪ್ರಸಾದ್, ತೆನಾಲಿ(ಶೈವಾಗಮ), ಆಸ್ಥಾನ ರಚಯಿತ– ನಾಗತಿಹಳ್ಳಿ ರಮೇಶ್, ಬೆಂಗಳೂರು(ಬರಹಗಾರ), ವಿಶ್ವ ಹಿಂದು–ನರೇಂದ್ರ ಚೌಧರಿ ಛೇರ್ಮನ್, ಭಕ್ತಿ ಟಿವಿ, ಹೈದರಾಬಾದ್, ಸಾನ್ನಿಧ್ಯ: ಭೀಮನಕಟ್ಟೆ ಮಠದ ಶ್ರೀ ರಘುವರೇಂದ್ರ ತೀರ್ಥ ಸ್ವಾಮೀಜಿ, ಕೂಡ್ಲಿ ಶೃಂಗೇರಿ ಮಠದ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಸ್ವಾಮೀಜಿ, ಸಂಜೆ 6.30ಕ್ಕೆ ವಿದ್ವಾನ್ ವಿಜಯ ಪ್ರಕಾಶ್ (ಲಯತರಂಗ) ಅವರಿಂದ ಭಜನೆ, ರವಿಚಂದ್ರ ಕುಲೂರ್ (ಕೊಳಲು), ಜಯಚಂದ್ರ ರಾವ್ (ಮೃದಂಗ,) ಗಿರಿಧರ್ ಉಡುಪ (ಘಟಂ), ಅರುಣ್ ಕುಮಾರ್(ಡ್ರಮ್ಸ್), ಪ್ರಮಥ್ ಕಿರಣ್ (ತಾಳವಾದ್ಯ)ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಸ್ನೇಹ ಸಿಂಚನ ಟ್ರಸ್ಟ್:** ಅಮ್ಮಂದಿರ ದಿನಾಚರಣೆ ಪ್ರಯುಕ್ತ ಸಾಧಕ ಮಹಿಳೆಯರಿಗೆ ಸನ್ಮಾನ, ಭಜನಾ ಸ್ಪರ್ಧೆ ವಿಜೇತರಿಗೆ ಬಹುಮಾನ, ಮಹಿಳೆಯರಿಗೆ ಮನರಂಜನಾ ಕಾರ್ಯಕ್ರಮಗಳು, ಆಟೋಟ ಸ್ಪರ್ಧೆಗಳು, ಉದ್ಘಾಟನೆ: ಸಮಾಜ ಸೇವಕ ರಘುರಾಂ ವಾಜಪೇಯಿ. ಅಧ್ಯಕ್ಷತೆ: ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಮ.ನ.ಲತಾ ಮೋಹನ್, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಇಲಾಖೆಯ ಮಂಜುಳಾ ಭದ್ರೇಗೌಡ, ಸಮಾಜ ಸೇವಕಿ ಗಾಯತ್ರಿ ಪಾಂಡೊಟಿ, ಅಭಿನಂದಿಸುವವರು: ಸಮಾಜ ಸೇವಕಿ ಡಾ.ಮಂಜುಳಾ ಮೋಹನ್, ಅಭಿನಂದಿತರು: ಕಲಕುಶಲ ಕಲಾವಿದೆ ಶ್ರೀಮತಿ ಲೀಲಮ್ಮ, ಮೈಸೂರಿನ ಅಂಗವಿಕಲ ಶಾಲೆ ಸಂಸ್ಥಾಪಕರಾದ ಶ್ರೀಮತಿ ನೇತ್ರಾವತಿ, ಸ್ಥಳ: ಜಯನಗರ ದ ನೇಗಿಲ ಯೋಗಿ ಸಮಾಜ ಸೇವಾ ಸಂಸ್ಥೆ, ಸಮಯ: ಬೆಳಗ್ಗೆ: 10.30


■ **ಗೋಪಾಲಗೌಡ ಶಾಂತವೇರಿ ಸ್ಮಾರಕ ಸಮೂಹ ಆಸ್ಪತ್ರೆ:** ಕ್ಯಾನ್ಸರ್ ಮತ್ತು ಗ್ಯಾಸ್ಟ್ರೋ ಹಾಗೂ ಲಿವರ್ ವಿಶೇಷ ಚಿಕಿತ್ಸಾ ಶಿಬಿರ, ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ, ಸ್ಥಳ: ಆಸ್ಪತ್ರೆಯ ಆವರಣ

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

ಹಂಪಾಪುರದಲ್ಲಿ ಇಂದು

■ **ದೇವಸ್ಥಾನ ಉದ್ಘಾಟನೆ :** ಸಂಪೂರ್ಣ ಜೀರ್ಣೋದ್ಧಾರಗೊಂಡ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನ ಉದ್ಘಾಟನೆ, ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಚಿಕ್ಕ ಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ, ಶ್ರೀ ಹೊಳೆ ಮಸಣಮ್ಮ, ಶ್ರೀ ಪವಾಡ ಮಾಲಾರಸಮ್ಮ ಮತ್ತು ಶ್ರೀ ಸಿದ್ದರಾಮೇಶ್ವರ ಹಾಗೂ ಚಿಕ್ಕಮ್ಮ ಚಿಕ್ಕದೇವಿಯವರ ಪೂಜೆ ಮತ್ತು ಉತ್ಸವ. ಸ್ಥಳ: ಹಂಪಾಪುರ, ದೊಡ್ಡಕವಲಂದೆ ಹೋಬಳಿ, ನಂಜನಗೂಡು ತಾಲೂಕು, ಸಮಯ: ಬೆಳಗ್ಗೆ 7.30

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ ಡಾ.ಎಸ್.ಜಿ.ಸುಶೀಲಮ್ಮ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮೃತಿಗಳು, ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು, ಲೇಖನ ಪ್ರಸ್ತುತಿ: ಡಿ.ಎನ್.ಶ್ರೀಪಾದ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ: ಎಂ.ಎ.ಶೋಭಾ, ವ್ಯಾಖ್ಯಾನ: ಡಾ.ಲತಾ ಮೈಸೂರು, 7.45–ನಿತ್ಯ ವಿಜ್ಞಾನ–ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ, ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ:– ದಿವಾಕರ ಹೆಗಡೆ, 9.35–ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ ಆಕಾಶವಾಣಿಯೊಂದಿಗೆ", 10.00 ಲಯಸಂಭ್ರಮ–ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಎಸ್.ಸುಬ್ರಹ್ಮಣ್ಯ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.05–ವನಿತಾ ವಿಹಾರ, ಪುಷ್ಪಾ ಮುರಗೋಡು ಅವರಿಂದ ಸಣ್ಣ ಕಥೆ, 2. ಲಲಿತಾ ಪಾಟೀಲ್ ಅವರಿಂದ ಕವನಗಳ ವಾಚನ, 12.30 –ಭಕ್ತಿಗೀತೆಗಳು–ರಮೇಶ್ ಕುಲಕರ್ಣಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, 12.45– ನಮ್ಮ ಆರೋಗ್ಯ– ಹೃದಯ ಶಸ್ತ್ರ ಚಿಕಿತ್ಸೆ ಅಗತ್ಯ ಕುರಿತು ಡಾ..ಶ್ಯಾಮಪ್ರಸಾದ ಶೆಟ್ಟಿ ಅವರೊಂದಿಗೆ ಮಾತುಕತೆ, 1.20–ಭಾವಗೀತೆಗಳು –ಲಲಿತಾ ಹೆಚ್.ಎಂ. 3.00– ತಿಟ್ಟೇ ಕೃಷ್ಣ ಅಯ್ಯಂಗಾರ್–ಹಾಡುಗಾರಿಕೆ, 4.00–ಮಹಿಳಾರಂಗ – ಅಭ್ಯುದಯ ಮಹಿಳಾ ಸಂಘದ ಸ್ವಾವಲಂಬಿ ಸದಸ್ಯರೊಂದಿಗೆ ಮಾತುಕತೆ, 4.30–ಝೇಂಕಾರ–ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50–ಕೃಷಿರಂಗ–ಕಿಸಾನ್‌ವಾಣಿ –ಹೈನು ರಾಸುಗಳ ನಿರ್ವಹಣೆ ಕುರಿತು ಡಾ.ರಕ್ಷಿತ್ ರಾಜ್, ಅವರೊಡನೆ ಸಂದರ್ಶನ. ಸಂದರ್ಶಕರು: ಎಸ್.ಸುಬ್ರಹ್ಮಣ್ಯ, 7.45 ಬುದ್ಧಿ ತೋರಿದ ಬೆಳಕು–ಮಾತನಾಡುತ್ತಾರೆ ವೀರ ಹನುಮಾನ್, 9.30–ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು

ಸಹಸ್ರಾರು ಭಕ್ತರ 'ಜೈಗುರು ದತ್ತ... ಜೈ ಶ್ರೀಮನ್ನಾರಾಯಣ...' ಜೈಕಾರದ ನಡುವೆ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ 63 ಅಡಿ ಎತ್ತರದ ಹನುಮ ದ್ವಾರ ಉದ್ಘಾಟನೆ

ಮೈಸೂರು,ಮೇ 22(ಪಿಎಂ)– ಸಹಸ್ರಾರು ಭಕ್ತರ 'ಜೈಗುರು ದತ್ತ... ಜೈ ಶ್ರೀಮನ್ನಾರಾಯಣ...' ಜೈಕಾರದ ನಡುವೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಆವರಣದಲ್ಲಿ 63 ಅಡಿ ಎತ್ತರದಲ್ಲಿ ಭವ್ಯವಾಗಿ ನಿರ್ಮಿಸಿರುವ ನೂತನ ಹನುಮ ದ್ವಾರ (ಮುಖ್ಯದ್ವಾರ) ಭಾನುವಾರ ಉದ್ಘಾಟನೆಗೊಂಡಿತು.

ಶಕ್ತಿ, ಧೈರ್ಯ ಮತ್ತು ರಕ್ಷಣೆಯ ಪ್ರತೀಕವಾದ ಹನುಮನ 14 ಮೂರ್ತಿಗಳು ಈ ನೂತನ ದ್ವಾರದ ಗೋಪುರದಲ್ಲಿವೆ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ರೂಪಿಸಿದ ವಿನ್ಯಾಸದಂತೆ ಈ ದ್ವಾರ ನಿರ್ಮಿಸಲಾಗಿದೆ. ದೇವಾಲಯ ವಾಸ್ತು ಶಿಲ್ಪಿಗಳಾದ ಸುಬ್ರಹ್ಮಣ್ಯ ಸ್ಥಪತಿ, ರಾಜ ಸ್ಥಪತಿಯವರ ನೇತೃತ್ವದಲ್ಲಿ ಈ ದ್ವಾರ ನಿರ್ಮಾಣಗೊಂಡಿದೆ. 1995ರಿಂದ ಈ ಶಿಲ್ಪಿಗಳು ಆಶ್ರಮದ ವಾಸ್ತುಶಿಲ್ಪದ ಕೆಲಸಗಳನ್ನು ಮಾಡುತ್ತಿದ್ದಾರೆ. ಟ್ರಿನಿಡಾಡ್‌ನಲ್ಲಿ 85 ಅಡಿ ಎತ್ತರದ ಹನುಮ ಪ್ರತಿಮೆ ನಿರ್ಮಿಸಿದ ಕೀರ್ತಿಯನ್ನೂ ಈ ಶಿಲ್ಪಿಗಳು ಹೊಂದಿದ್ದಾರೆ.

ಹನುಮ ದ್ವಾರದ ಗೋಪುರವು ಬಿಸ್ಕತ್ (ಹಳದಿ ಬಣ್ಣ) ಬಣ್ಣದಲ್ಲಿ ಮೂಡಿಬಂದಿದ್ದರೆ, ಇಲ್ಲಿನ ಹನುಮನ ಮೂರ್ತಿಗಳು ಕೇಸರಿ ಬಣ್ಣದಲ್ಲಿವೆ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಪ್ರಿಯವಾದ ದೇವರಲ್ಲಿ ಹನುಮ ಪ್ರಮುಖ. ಶ್ರೀಗಳ 80ರ



ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನೂತನ ಹನುಮ ದ್ವಾರ ಉದ್ಘಾಟಿಸಿದ ಬಳಿಕ ನಾದ ಮಂಟಪದತ್ತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವ ದೃಶ್ಯ.

ವರ್ಧಂತಿಯಲ್ಲಿ ಭವ್ಯ ಹನುಮ ದ್ವಾರ ನಿರ್ಮಿಸಬೇಕೆಂಬುದು ಭಕ್ತರ ಸಂಕಲ್ಪವಾಗಿತ್ತು. ಅದರಂತೆ ತಲೆ ಎತ್ತಿರುವ ಹನುಮದ್ವಾರ ಲೋಕಾರ್ಪಣೆಗೊಂಡಿತು. ಹನುಮನ ವೇಷಧಾರಿಗಳ 'ಜೈಶ್ರೀರಾಮ್...' ಘೋಷಣೆ ನಡುವೆ ದ್ವಾರಕ್ಕೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಮೊದಲಿಗೆ ಪೂಜೆ ಸಲ್ಲಿಸಿದರು. ಬಳಿಕ ಶ್ರೀಗಳು ದ್ವಾರದ ನಾಮಫಲಕದ ಪರದೆ ಸರಿಸುವ ಮೂಲಕ ಉದ್ಘಾಟನೆ ನೆರವೇರಿಸಿದರು.

ಬಳಿಕ ಮಾತನಾಡಿದ ಶ್ರೀಗಳು, ಯಾರ್‍ಯಾರೋ ಏನೇನೋ ಕಟ್ಟಿ ಸಂತೋಷಪಡುತ್ತಾರೆ. ನಮ್ಮ ಆಶ್ರಮದಲ್ಲಿ ಹನುಮ ದ್ವಾರ ನಿರ್ಮಿಸಿ ಸಂತಸಪಡುತ್ತಿದ್ದೇವೆ. ಅಂದರೆ ಸ್ವಾಮೀಜಿಗೆ (ತಮಗೆ) ಚಿಕ್ಕದಾಗಲಿ, ದೊಡ್ಡದಾಗಲಿ ಎರಡೂ ಒಂದೇ. ಮನುಷ್ಯರ ವಿಚಾರದಲ್ಲೂ ಅದೇ ರೀತಿ ಸಮಾನತೆ ಭಾವ ನಿಮ್ಮ ಸ್ವಾಮೀಜಿಗಿದೆ (ತಮಗೆ). ಸ್ವಾಮೀಜಿಗೆ ಹನುಮ ಕನಸಿನಲ್ಲಿ ಬಂದು ಹೇಳಿದಂತೆ ಈ ದ್ವಾರ ನಿರ್ಮಾಣಗೊಂಡಿದೆ ಎಂದು ತಿಳಿಸಿದರು.

ಬಳಿಕ ಆಶ್ರಮದ ನವೀಕೃತ ನಾದ ಮಂಟಪ ಉದ್ಘಾಟಿಸಲಾಯಿತು. ಇದನ್ನು ಐದೂವರೆ ಕೋಟಿ ರೂ. ವೆಚ್ಚದಲ್ಲಿ ಶಬ್ದ ಮತ್ತು ಸಂಗೀತಕ್ಕೆ ಪೂರಕವಾಗಿರುವಂತೆ ವಿನ್ಯಾಸಗೊಳಿಸಿ ನವೀಕರಿಸಲಾಗಿದೆ. ಮೇಲ್ಛಾವಣಿಯನ್ನು ನಾದಕ್ಕೆ ಪೂರಕವಾಗಿರುವಂತೆ ಸಜ್ಜುಗೊಳಿಸಿದ್ದು, ಧ್ವನಿಯಲ್ಲಿ ಹೆಚ್ಚು ನಿಖರತೆ ಹೊಮ್ಮುವಂತೆ ವಿನ್ಯಾಸಗೊಳಿಸಲಾಗಿದೆ. ಧ್ವನಿ ವಿನ್ಯಾಸಕ ವಿದ್ಯಾಧರ್ ನೇತೃತ್ವದಲ್ಲಿ ಮಂಟಪಕ್ಕೆ ಧ್ವನಿ ವಿನ್ಯಾಸ ತಂತ್ರಜ್ಞಾನವನ್ನು ನೂತನವಾಗಿ ಅಳವಡಿಸಲಾಗಿದೆ.

ಸಮಾಜದಲ್ಲಿ ಸಂಸ್ಕಾರ ಪಸರಿಸುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಹೈದರಾಬಾದಿನ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಬಣ್ಣನೆ

ಮೈಸೂರು: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಸಮಾಜದಲ್ಲಿ ದೈವಿಕ ಶಕ್ತಿಯನ್ನು ಜಾಗೃತಗೊಳಿಸಿ, ಸಾಮರಸ್ಯ ಮೂಡಿಸುತ್ತಿದ್ದಾರೆ. ಜೊತೆಗೆ ದೇವಸ್ಥಾನಗಳನ್ನು ನಿರ್ಮಿಸಿ, ಸಮಾಜದಲ್ಲಿ ಸಂಸ್ಕಾರ ಪಸರಿಸುತ್ತಿದ್ದಾರೆ ಎಂದು ಹೈದರಾಬಾದಿನ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಬಣ್ಣಿಸಿದರು. ಆಶ್ರಮದ ನಾದ ಮಂಟಪದಲ್ಲಿ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವದ ಸಭಾ ಕಾರ್ಯಕ್ರಮ ಉದ್ಘಾಟಿಸಿ, ಸ್ವಾಮೀಜಿಯವರ ಕೈಗೆ ಸುದರ್ಶನ ಯಂತ್ರದ ಕಂಕಣ ಧಾರಣೆ ಮಾಡಿ ಮಾತನಾಡಿದ ಅವರು, ಹಲವು ದಶಕಗಳಿಂದ ಸಮಾಜದಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಬೆಳೆಸುವ ಮಹತ್ಕಾರ್ಯ ವನ್ನು ಶ್ರೀಗಳು ಮಾಡುತ್ತಿದ್ದಾರೆ ಎಂದು ನುಡಿದರು.



ಜನಸಮುದಾಯದಲ್ಲಿ ಸಂಸ್ಕಾರ ಬೆಳೆಸುವ ನಿಟ್ಟಿನಲ್ಲಿ ಶ್ರೀಗಳು 15 ದೇವಾಲಯಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ತಮ್ಮ 80ನೇ ಜನ್ಮದಿನದ ಅಂಗವಾಗಿ ಸ್ಥಾಯಿ ಕರ್ಮಚಾರಿಗಳ ಸಮುದಾಯಕ್ಕಾಗಿ ಮೈಸೂರಿನ ಬಂಬೂ ಬಜಾರ್‌ನಲ್ಲಿ ಪಟ್ಟಲದಮ್ಮ ದೇವಾಲಯ ನಿರ್ಮಿಸಿದ್ದಾರೆ. ಈ ದೇವಾಲಯದಲ್ಲಿ ಪೌರ ಕರ್ಮಿಕರನ್ನು ಗುರುತಿಸಿ ಅವರೇ ಪೂಜೆ ಸಲ್ಲಿಸುವಂತಹ ವ್ಯವಸ್ಥೆ ಮಾಡಿದ್ದಾರೆ. ಸಂಸ್ಕೃತಿ ಮತ್ತು ಸಂಸ್ಕಾರ ಬೆಳೆಸುವ ನಿಜವಾದ ಕಾರ್ಯ ಎಂದರೆ ಇದೇ ಆಗಿದೆ. ಅಂತಹ ಸತ್ಕಾರ್ಯಕ್ಕೆ ಶ್ರೀಗಳು ಭಾಜನರಾಗಿದ್ದಾರೆ ಎಂದು ಹೇಳಿದರು. ತಮ್ಮ ಹಿರಿಯ ಶ್ರೀಗಳು ನಡೆಸುತ್ತಿರುವ ಎಲ್ಲಾ ಸತ್ಕಾರ್ಯಗಳಲ್ಲಿ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರೂ ತೊಡಗಿ ಮುನ್ನಡೆಯುತ್ತಿದ್ದಾರೆ ಎಂದರಲ್ಲದೆ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ 80ನೇ ವರ್ಷದ ಜನ್ಮದಿನದ ಶುಭಕಾಮನೆಗಳನ್ನು ತಿಳಿಸಿದರು.


ಕೋಟಿ ವೆಚ್ಚದಲ್ಲಿ ವೃತ್ತ ಅಭಿವೃದ್ಧಿಪಡಿಸಿ ಶ್ರೀಗಳ ಹೆಸರು ನಾಮಕರಣ

ಜಯನಗರ ಸಿಹೆಚ್‌ಸಿಯಲ್ಲಿ ಆಶ್ರಮದ ಸಹಯೋಗದಲ್ಲಿ ನಾದಚಿಕಿತ್ಸೆ ವಿಭಾಗ ಆರಂಭ

ಮೈಸೂರು,ಮೇ 22(ಪಿಎಂ)– ಮೈಸೂರಿನಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ವೃತ್ತ ಅಭಿವೃದ್ಧಿಪಡಿಸಿ, ಅದಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಹೆಸರು ನಾಮಕರಣ ಮಾಡಲಾಗುವುದು. ಜೊತೆಗೆ ಜಯನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ (ಸಿಹೆಚ್‌ಸಿ) ಆಶ್ರಮದ ಸಹಯೋಗದೊಂದಿಗೆ ನಾದಚಿಕಿತ್ಸೆ ವಿಭಾಗ ಪ್ರಾರಂಭಿಸಲಾಗುವುದು ಎಂದು ಶಾಸಕ ಎಸ್.ಎ.ರಾಮದಾಸ್ ಪ್ರಕಟಿಸಿದರು.



ಶ್ರೀಗಳ 80ನೇ ವರ್ಧಂತಿ ಅಂಗವಾಗಿ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಮೇಕೆದಾಟಿನಿಂದ ಮೈಸೂರಿನವರೆಗೆ ಪಾದಯಾತ್ರೆ ನಡೆಸಿದ್ದಾರೆ. ಕಿರಿಯ ಶ್ರೀಗಳು ಪಾದಯಾತ್ರೆಯಲ್ಲಿ ಮೈಸೂರಿಗೆ ಪ್ರವೇಶ ಪಡೆದ ವೃತ್ತವನ್ನು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ, ಶ್ರೀಗಳ ಹೆಸರು ನಾಮಕರಣ ಮಾಡಲಾಗುವುದು. ಈ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದು, ಅವರು ಆದೇಶ ಹೊರಡಿಸಲಿದ್ದಾರೆ ಎಂದು ತಿಳಿಸಿದರು. ಜೊತೆಗೆ ಶ್ರೀಗಳ 80ನೇ ವರ್ಧಂತಿ ಪ್ರಯುಕ್ತ ಮೈಸೂರಿನ ಜಯನಗರ ಸಿಹೆಚ್‌ಸಿಯಲ್ಲಿ ನಾದಚಿಕಿತ್ಸೆ ವಿಭಾಗ ಆರಂಭಿಸಲಾಗುವುದು. ಈ ವಿಭಾಗವು ಬೆಂಗಳೂರು ನಿಮ್ಹಾನ್ಸ್, ಆರೋಗ್ಯ ಇಲಾಖೆ ಮತ್ತು ಆಶ್ರಮದ ಸಂಯುಕ್ತಾಶ್ರಯದಲ್ಲಿ ವೈಜ್ಞಾನಿಕವಾಗಿ ಕಾರ್ಯ ನಿರ್ವಹಿಸಲಿದೆ. ಈ ಯೋಜನೆ 1 ಕೋಟಿ ರೂ. ನೀಡಲು ಪ್ರಧಾನಿಗಳು ಸಮ್ಮತಿಸಿದ್ದಾರೆ ಎಂದು ಹೇಳಿದರು.



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವದ ಉದ್ಘಾಟನಾ ಸಮಾರಂಭ ನಡೆಯಿತು. (ಎಡದಿಂದ ಬಲಕ್ಕೆ) ಮೇಯರ್ ಸುನಂದಾ ಪಾಲನೇತ್ರ, ಶಾಸಕ ರಾಮದಾಸ್, ಸಚಿವ ಎಸ್.ಟಿ.ಸೋಮಶೇಖರ್, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಹೈದರಾಬಾದಿನ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಮತ್ತು ಅವರ ಶಿಷ್ಯರಾದ ಶ್ರೀ ತ್ರಿದಂಡಿ ಅಹೋಬಲ ರಾಮಾನುಜ ಜೀಯರ್ ಸ್ವಾಮೀಜಿ, ಮುಡಾ ಅಧ್ಯಕ್ಷ ರಾಜೀವ್ ಚಿತ್ರದಲ್ಲಿದ್ದಾರೆ.

ಕೋವಿಡ್ ವೇಳೆ ಶ್ರೀಗಳ ಕೊಡುಗೆ ಅಪಾರ

ಮೈಸೂರು: ಕೋವಿಡ್ ಸಂದರ್ಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಕೊಡುಗೆ ಅಪಾರ. ಸೇವಾ ಕಾರ್ಯಗಳನ್ನು ಮಾಡಲು ದೇವರು ಅವರಿಗೆ ಇನ್ನು ಹೆಚ್ಚಿನ ಶಕ್ತಿ ನೀಡಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಆಶಿಸಿದರು. ಶ್ರೀಗಳಿಗೆ 80ನೇ ವರ್ಧಂತಿಯ ಶುಭಾಶಯ ಕೋರಿದ ಅವರು, ಸ್ವಾಮೀಜಿಯವರ ಪಕ್ಕದಲ್ಲಿ ಕುಳಿತು ಮಾತನಾಡುವುದೇ ಒಂದು ಪುಣ್ಯ. ಮೈಸೂರಿನ ಉಸ್ತುವಾರಿ ಸಚಿವನಾದ ಬಳಿಕ ಕೋವಿಡ್ ಸಂದರ್ಭದಲ್ಲಿ ಸ್ವಾಮೀಜಿಗಳನ್ನು ಭೇಟಿ ಮಾಡಿ ಸಹಕಾರ ಕೋರಿದಾಗ ಅವರು ಕೂಡಲೇ ಸ್ಪಂದಿಸಿದರು. ಅಪಾರ ಪ್ರಮಾಣದಲ್ಲಿ ಆಹಾರ ಸಾಮಗ್ರಿಗಳನ್ನು ನೀಡಿ ಜಿಲ್ಲಾಡಳಿತದೊಂದಿಗೆ ಸಹಕರಿಸಿದರು. ಅದಕ್ಕೆ ನಾವು ಅಭಾರಿಯಾಗಿದ್ದೇವೆ ಎಂದು ನುಡಿದರು.

ಸ್ವಾಮೀಜಿಯವರ ಆಶೀರ್ವಾದದಿಂದ ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳು ಆಗುತ್ತಿವೆ. ಸೇವಾ ಕಾರ್ಯಗಳನ್ನು ಮುಂದುವರೆಸಲು ಅವರಿಗೆ ಇನ್ನಷ್ಟು ಶಕ್ತಿ ದೊರೆಯಲಿ. ಮುಖ್ಯಮಂತ್ರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿತ್ತು ಆದರೆ ಅವರ ವಿದೇಶ ಪ್ರವಾಸದ ಹಿನ್ನೆಲೆಯಲ್ಲಿ ಅದು ಸಾಧ್ಯವಾಗಲಿಲ್ಲ. ತಮ್ಮ ಪರವಾಗಿ ಶುಭಾಶಯ ತಿಳಿಸಲು ಮುಖ್ಯಮಂತ್ರಿಗಳು ನನಗೆ ತಿಳಿಸಿದ್ದಾರೆ ಎಂದರು.

ಆರಂಭದಲ್ಲೇ ಸಂಪೂರ್ಣ ಭಾರ ದೇವರ ಮೇಲೆ ಹಾಕುವುದು ಸಲ್ಲ

ಭಗವಂತ ಕೊಟ್ಟ ಶಕ್ತಿ-ಯುಕ್ತಿ ಬಳಸಿ, ಪ್ರಯತ್ನಿಸಬೇಕು ; ಸತ್ಕಾರ್ಯ ಕೈಬಿಡಬಾರದು, ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ ಆಶೀರ್ವಚನ

ಮೈಸೂರು,ಮೇ 22(ಪಿಎಂ)– ಯಾವುದೇ ವಿಚಾರವಾದರೂ ಸಂಪೂರ್ಣವಾಗಿ ದೇವರ ಮೇಲೆ ಭಾರ ಹಾಕಬಾರದು. ದೇವರು ಕೊಟ್ಟ ಶಕ್ತಿ–ಯುಕ್ತಿ ಬಳಸಿ ನಮ್ಮ ಪ್ರಯತ್ನ ಮುಂದುವರೆಸಬೇಕು. ಅದಾಗ್ಯೂ ಸಫಲತೆ ಕಾಣದಿದ್ದಾಗ ದೇವರ ಮೊರೆ ಹೋಗಬೇಕು. ಜೊತೆಗೆ ಸತ್ಕಾರ್ಯ ಕೈಬಿಡಬಾರದು ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹೇಳಿದರು. ತಮ್ಮ 80ನೇ ವರ್ಧಂತಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿ ಅವರು ಮಾತನಾಡಿದರು. ಸೋಂಬೇರಿ ಗಳಾಗದೇ ಪ್ರಯತ್ನ ಮಾಡಬೇಕು. ಸ್ವಾಮೀಜಿಯಲ್ಲಿ (ತಮ್ಮಲ್ಲಿ) ಭಕ್ತಿ ತೋರಿಸಿ, ಸತ್ಕಾರ್ಯ ಕೈಬಿಟ್ಟರೆ ಪ್ರಯೋಜನವಿಲ್ಲ ಎಂದರು. ಆನಂದವೇ ಪರಬ್ರಹ್ಮ, ಇದನ್ನು ತಿಳಿಯ ಬೇಕಾದರೆ ಸತ್ಕಾರ್ಯ ಮಾಡಬೇಕು. ಸಂಸ್ಕಾರ, ದಾನ–ಧರ್ಮ ಮೈಗೂಡಿಸಿಕೊಳ್ಳಬೇಕು. ನನ್ನನ್ನು ಕಂಡ ಕೂಡಲೇ ಪುಣ್ಯ ಸಿಕ್ಕಿತು ಎಂದು ತಿಳಿದುಕೊಂಡರೆ ಸಾಲದು. ಪುಣ್ಯ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ನಾನು ಶಾಶ್ವತ ಆಧ್ಯಾತ್ಮಿಕ ಆನಂದ ಪಡೆದಿದ್ದೇನೆ. ಅದು ನಿಮಗೂ ಸಿಗಲಿ ಎಂದು ಹಾರೈಸುತ್ತೇನೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಶ್ರೀಗಳು ತಿಳಿಸಿದರು.



ಒಂದನೇ ಪುಟದಿಂದ

ದತ್ತಪೀಠದಿಂದ ಮಹತ್ವದ ಹೆಜ್ಜೆ; ಮೋದಿ

ಕಾರ್ಯರೂಪಕ್ಕೆ ತರಲು ಮಠಗಳ ಸಹಕಾರ ಬಹುಮುಖ್ಯ ಎಂದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಶುಭವಾಗಲಿ. ನಾನು ಅವರ ಅನುಯಾಯಿಯಾಗಿದ್ದೇನೆ. ಹನುಮ ದ್ವಾರವೂ ಇಂದು ಉದ್ಘಾಟನೆಯಾಗಿರುವುದು ಸಂತಸದ ವಿಚಾರ. ಎಲ್ಲರಿಗೂ ಸ್ವಾಮೀಜಿಗಳು ಒಳ್ಳೆಯದನ್ನು ಮಾಡುತ್ತಿದ್ದಾರೆ. ಗುರುದೇವ ದತ್ತನ ಪ್ರೇರಣೆಯಿಂದ ಶ್ರೀಗಳ ಜನ ಕಲ್ಯಾಣ ಕಾರ್ಯಗಳು ಮುಂದುವರೆಯಲಿ. ಸಂತರು, ಸಜ್ಜನರು, ವಿಭೂತಿ ಪುರುಷರ ಕಾರ್ಯಗಳು ಇತರರಿಗೆ ಪ್ರೇರಣೆಯಾಗಲಿದ್ದು, ಇದಕ್ಕೆ ಶ್ರೀ ಗಣಪತಿ ಸ್ವಾಮೀಜಿಯವರು ಪ್ರತ್ಯಕ್ಷ ಉದಾಹರಣೆ ಎಂದು ಬಣ್ಣಿಸಿದರು.

ಆಶ್ರಮದಲ್ಲಿ ಆಧ್ಯಾತ್ಮಿಕತೆಯ ಜೊತೆಗೆ ಆಧುನಿಕತೆಯೂ ಮೇಳೈಸಿದೆ. ಲೋಕಲ್ ಟು ಗ್ಲೋಬಲ್‌ವರೆಗೂ ಶ್ರೀ ಸ್ವಾಮೀಜಿಯವರ ಕಾರ್ಯಕ್ಷಮತೆ ಎದ್ದು ಕಾಣುತ್ತಿದೆ. ಅವರಿಗೆ ಮತ್ತೊಮ್ಮೆ ಶುಭಕಾಮನೆಗಳು ಎಂದು ತಿಳಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಅವರ ಶಿಷ್ಯರೂ ಆದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮಗಳು ನಡೆದವು. ಶ್ರೀ ರಾಮಾನುಜಾಚಾರ್ಯರ ಬೃಹತ್ ಪ್ರತಿಮೆ ನಿರ್ಮಾಣದ ಖ್ಯಾತಿಗೆ ಭಾಜನರಾದ ಹೈದರಾಬಾದಿನ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಮತ್ತು ಅವರ ಶಿಷ್ಯರಾದ ಶ್ರೀ ತ್ರಿದಂಡಿ ಅಹೋಬಲ ರಾಮಾನುಜ ಜೀಯರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್, ಆಶ್ರಮದ ಟ್ರಸ್ಟಿಯೂ ಆದ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ವೇದಿಕೆಯಲ್ಲಿದ್ದರು. ಸಹಸ್ರಾರು ಭಕ್ತರು ಹಾಜರಿದ್ದರು.

ಚಾರ್ ಧಾಮ್ ಯಾತ್ರೆ: ಮೃತರ ಸಂಖ್ಯೆ 57ಕ್ಕೆ ಏರಿಕೆ

ಡೆಹ್ರಾಡೂನ್, ಮೇ 22– ಉತ್ತರಾಖಂಡದ ಚಾರ್ ಧಾಮ್ ಯಾತ್ರೆಯಲ್ಲಿ ಈವರೆಗೂ ಮೃತಪಟ್ಟವರ ಸಂಖ್ಯೆ 57ಕ್ಕೆ ಏರಿಕೆಯಾಗಿದೆ. ಉತ್ತರಾಖಂಡದಲ್ಲಿ ಈ ವರ್ಷದ ಚಾರ್ ಧಾಮ್ ಯಾತ್ರೆ ಇದೇ ಮೇ 3ರಂದು ಆರಂಭವಾಗಿತ್ತು. ಈ ಪೈಕಿ ಯಾತ್ರೆ ಕೈಗೊಂಡಿರುವ ಯಾತ್ರಾರ್ಥಿಗಳ ಪೈಕಿ ಈವರೆಗೆ 57 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಆರೋಗ್ಯ ಸೇವೆಗಳ ನಿರ್ದೇಶನಾಲಯದ ಡಾ. ಶೈಲಜಾ ಭಟ್ ಅವರು, ಮೇ 3ರಿಂದ ಚಾರ್ ಧಾಮ್ ಯಾತ್ರೆ ಆರಂಭವಾಗಿದ್ದು, ಈವರೆಗೆ 57 ಯಾತ್ರಾರ್ಥಿಗಳು ಮೃತಪಟ್ಟಿದ್ದಾರೆ. ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿತ ಸಮಸ್ಯೆ ಹಾಗೂ ಮೌಂಟೇನ್ ಸಿಕ್‌ನೆಸ್ ತೊಂದರೆಗಳು ಇಂತಹ ಸಾವಿಗೆ ಕಾರಣ ಎಂದು ತಿಳಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು. ಮೇ 22– ನಗರದ ಟೆರೇಷಿಯನ್ ಬಾಲಕಿಯರ ಪ್ರೌಢ ಶಾಲೆಯ ವಿದ್ಯಾರ್ಥಿನಿ ಐಶ್ವರ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 619 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾರೆ. ಕನ್ನಡದಲ್ಲಿ–124, ಇಂಗ್ಲಿಷ್–99 ಹಿಂದಿ–99, ಸಮಾಜ ವಿಜ್ಞಾನದಲ್ಲಿ–100, ಗಣಿತದಲ್ಲಿ 97 ಹಾಗೂ ವಿಜ್ಞಾನದಲ್ಲಿ 100 ಅಂಕ ಗಳಿಸಿದ್ದಾಳೆ. ಈಕೆ ಮೈಸೂರು ನಗರ ಜನಜಾಗೃತಿ ಸಮಿತಿ ಅಧ್ಯಕ್ಷ ಎಂ.ಎಲ್.ರಾಜು, ಸಂಗೀತಾ ದಂಪತಿ ಪುತ್ರಿ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 22– ಟಿ.ಹೊಸಹಳ್ಳಿಯ ಶ್ರೀ ಜ್ಞಾನಭಾರತಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಹೆಚ್.ಆರ್. ಯಶೋಧ ಎಸ್‌ಎಸ್‌ಎಲ್‌ಸಿಯಲ್ಲಿ 557 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಟಿ.ಹೊಸಹಳ್ಳಿ ಗ್ರಾಮದ ರಾಮು ಮತ್ತು ಚಂದ್ರಕಲಾ ದಂಪತಿ ಪುತ್ರಿ.



ಬಿ.ಆರ್.ಕೃಷ್ಣಮೂರ್ತಿ ನಿಧನ

ಮೈಸೂರು, ಮೇ 22–ಮೂಲತಃ ಗುಂಡ್ಲುಪೇಟೆ ತಾಲೂಕು ಬೇಗೂರು ಗ್ರಾಮದವರಾಗಿದ್ದು, ಮೈಸೂರಿನ ಜೆ.ಪಿ.ನಗರದಲ್ಲಿ ವಾಸವಿದ್ದ ನಿವೃತ್ತ ಶಿಕ್ಷಕ ಬಿ.ಆರ್.ಕೃಷ್ಣಮೂರ್ತಿ(65) ಅವರು ಇಂದು ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ನಾಳೆ (ಸೋಮವಾರ) ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



'ಟೆಕ್ ಭಾರತ್–2022' ಕೃಷಿ, ಆಹಾರ ಸಂಸ್ಕರಣಾ ಮೇಳಕ್ಕೆ ತೆರೆ



ಮೈಸೂರು, ಮೇ 22(ಎಂಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಲಘು ಉದ್ಯೋಗ ಭಾರತಿ, ಐಎಂಎಸ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮೂರು ದಿನಗಳ 'ಟೆಕ್ ಭಾರತ್–2022 ಕೃಷಿ, ಆಹಾರ ಸಂಸ್ಕರಣೆ ಮೇಳ ಹಾಗೂ ವಸ್ತುಪದರ್ಶನಕ್ಕೆ ಯಶಸ್ವಿ ತೆರೆ ಬಿದ್ದಿತು.

ಇ–ಟ್ರೇಡಿಂಗ್, ಆನ್‌ಲೈನ್ ಮಾರುಕಟ್ಟೆ, ಸಪ್ಲೈ ಚೈನ್, ಅಗ್ರಿಕಲ್ಚರಲ್ ವೇಸ್ಟ್ ಮ್ಯಾನೇಜ್‌ಮೆಂಟ್, ರೀ ಸೈಕ್ಲಿಂಗ್, ಹಣ್ಣು ಮತ್ತು ತರಕಾರಿ ಬೆಳೆ, ಸಿರಿಧಾನ್ಯ ಸೇರಿದಂತೆ ಕೃಷಿಯಲ್ಲಿ ಇತ್ತೀಚಿನ ತಂತ್ರಜ್ಞಾನ ಕುರಿತು ಸಮಗ್ರ ಮಾಹಿತಿ ನೀಡಿದ 3ನೇ ಆವೃತ್ತಿಯ 'ಟೆಕ್ ಭಾರತ್' ವಸ್ತುಪ್ರದರ್ಶನ ಅಪಾರ ಮೆಚ್ಚುಗೆ ವ್ಯಕ್ತವಾಯಿತು. ಕೃಷಿ ಮತ್ತು ಆಹಾರ ಕ್ಷೇತ್ರದಲ್ಲಿ ತೊಡಗಿರುವ ಹಾಗೂ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ 100ಕ್ಕೂ ಹೆಚ್ಚು ಸಂಸ್ಥೆಗಳು, 400ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು, 250 ಡೆಲಿಗೇಟ್ಸ್‌ಗಳು ವಸ್ತುಪ್ರದರ್ಶನ ಪ್ರಯೋಜನ ಪಡೆದುಕೊಂಡರು.

ಮೇಳಗಳು ನಡೆಯುತ್ತಿರಬೇಕು: ವಿವಿಧ ಬಗೆಯ ಆಹಾರ ಪದಾರ್ಥಗಳ ಜೊತೆಗೆ ಮಾಹಿತಿಯನ್ನು ನೀಡಿದ 'ಟೆಕ್ ಭಾರತ್' ವಸ್ತುಪ್ರದರ್ಶನ ಮತ್ತೆ ಮತ್ತೆ ನಡೆಯುತ್ತಿರಬೇಕು. ಕಲಬೆರಕೆ ಇಲ್ಲದ ಆಹಾರ ಪದಾರ್ಥಗಳ ಮಾಹಿತಿ ಪಡೆದಿರುವುದಲ್ಲದೇ ಕೊಂಡುಕೊಂಡಿದ್ದೇವೆ. ಸಿಎಫ್‌ಟಿಆರ್‌ಐನಲ್ಲಿ ನಡೆದ ಮೊದಲ ಬೃಹತ್ ಮೇಳವನ್ನು ತುಂಬಾ ಅಚ್ಚುಕಟ್ಟಾಗಿ ಆಯೋಜನೆ ಮಾಡಿದ್ದಾರೆ ಎಂದು ಮೈಸೂರಿನ ಒಂಟಿಕೊಪ್ಪಲು ನಿವಾಸಿಗಳಾದ ಶ್ರೀನಿವಾಸಲು, ಪ್ರವೀಣಾ ಹಾಗೂ ರೈಲ್ವೆ ಕ್ವಾಟ್ರಸ್‌ನ ಸುಭಾಸಿನಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವ್ಯಾಪಾರವೂ ಚೆನ್ನಾಗಿ ಆಗಿದೆ: ಮೂರು ದಿನಗಳ 'ಟೆಕ್ ಭಾರತ್' ವಸ್ತುಪ್ರದರ್ಶನದಲ್ಲಿ ವ್ಯಾಪಾರ ಚೆನ್ನಾಗಿ ನಡೆಯುವ ಜೊತೆಗೆ ಗ್ರಾಹಕರೊಂದಿಗಿನ ಸಂಪರ್ಕ ಹೆಚ್ಚಾಗಿದೆ. ವಸ್ತುಪ್ರದರ್ಶನದಿಂದ ಸಾಕಷ್ಟು ಮಂದಿ ವ್ಯಾಪಾರಸ್ಥರಿಗೆ ಅನುಕೂಲವಾಗಿದೆ. ಮಳಿಗೆ ಹಾಕಿ ಹೂಡಿದ ಬಂಡವಾಳ ವಾಪಸ್ ಆಗಿದೆ ಎಂದು ಮಳಿಗೆದಾರರಾದ ಗಣಪತಿ, ರಮ್ಯ, ಆರಾಧ್ಯ, ಶೋಭಾ, ಸಿಂಧು ಹರ್ಷ ವ್ಯಕ್ತಪಡಿಸಿದರು.

ಪ್ರತಿನಿತ್ಯ 3 ಸಾವಿರಕ್ಕೂ ಹೆಚ್ಚು ಮಂದಿ: 3 ದಿನಗಳ 'ಟೆಕ್ ಭಾರತ್' ವಸ್ತುಪ್ರದರ್ಶನಕ್ಕೆ ಅಭೂತಪೂರ್ವ ಯಶಸ್ಸು ದೊರೆತಿದೆ. ಪ್ರತಿನಿತ್ಯ 3–4 ಸಾವಿರ ಜನ ಭೇಟಿ ನೀಡಿದ್ದಾರೆ. ಮಳಿಗೆದಾರರಿಗೆ ವ್ಯಾಪಾರ ಚೆನ್ನಾಗಿ ನಡೆದಿದ್ದು, ನಮ್ಮ ವಿದ್ಯಾರ್ಥಿಗಳಿಗೂ ಆಹಾರ ಪದಾರ್ಥಗಳ ಮಾರುಕಟ್ಟೆಯ ಕುರಿತು ಅರಿವು ಮೂಡಿದೆ. ಮೇಳದ ಯಶಸ್ಸು ನೋಡಿದರೆ ಪ್ರತಿವರ್ಷ ಆಯೋಜನೆ ಮಾಡಬೇಕು ಅನಿಸುತ್ತಿದೆ. ಈ ಕುರಿತು ನಮ್ಮ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದರು. ವಿಜ್ಞಾನಿಗಳಾದ ಪಿ. ಮನಿಲಾಲ್, ಡಾ.ಬಿ.ವಿ.ಸತ್ಯೇಂದ್ರರಾವ್, ರಾಜೇಶ್ ಮ್ಯಾಟೆ, ಡಾ.ಪರಗಿ ರಮೇಶ್ ಮತ್ತಿತರರಿದ್ದರು.

ಶಾಸಕ ತನ್ವೀರ್ ಸೇಠ್ ಪುತ್ರಿ ವಿವಾಹ



ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಪುತ್ರಿ ಪರ್ವೀನ್ ಸೇಠ್ ಹಾಗೂ ಸುಖೀಲ್ ಸೇಠ್ ವಿವಾಹ ಮಹೋತ್ಸವ ಬೆಂಗಳೂರಿನ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ಶನಿವಾರ ನೆರವೇರಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಆರ್.ಅಶೋಕ್, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ.ರಾಜೀವ್ ಮತ್ತಿತರ ಗಣ್ಯರು ದಂಪತಿಗೆ ಶುಭ ಹಾರೈಸಿದರು. ಮಾಜಿ ಸಿಎಂ ಸಿದ್ದರಾಮಯ್ಯ, ರಾಜ್ಯ ಜೆಡಿಎಸ್ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಕೇಂದ್ರ ಸಚಿವ ಡಾ.ಕೆ.ರಹಮಾನ್ ಖಾನ್ ಹಾಗೂ ಕಾಂಗ್ರೆಸ್ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಸೇರಿದಂತೆ ಅನೇಕ ಗಣ್ಯಾತಿಗಣ್ಯರು ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಮ ಸಮಾಜ ನಿರ್ಮಿಸಿದ ಮಹಾಪುರುಷ ಬಸವಣ್ಣ

ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ಮೇ 22(ಎಂಕೆ)– ಮೈಸೂರಿನ ವಿಜಯನಗರ 4ನೇ ಹಂತದ 1ನೇ ಘಟ್ಟದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಶರಣರ ಸಂಘದ ವತಿಯಿಂದ 'ಬಸವ ಜಯಂತಿ' ಆಚರಿಸಲಾಯಿತು.

ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಭಗವಾನ್ ಬುದ್ಧರ ನಂತರದಲ್ಲಿ ಸಮಸಮಾಜ ನಿರ್ಮಾಣ ಮಾಡಲು ಕ್ರಾಂತಿಕಾರಕ ನಿರ್ಧಾರಗಳನ್ನು ತೆಗೆದುಕೊಂಡ ಮಹಾಪುರುಷ ಬಸವಣ್ಣ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಮಾಜದಲ್ಲಿರುವ ಅಸ್ಪೃಶ್ಯತೆ, ಮೇಲುಕೀಳು ಭೇದ ಭಾವಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು ಎಂದರು.

ಪ್ರತಿಯೊಬ್ಬರು ಜ್ಞಾನಿಗಳಾಗಬೇಕು. ಪ್ರಜ್ಞಾವಂತರಾಗಬೇಕು ಒಬ್ಬರನ್ನೊಬ್ಬರು ಪ್ರೀತಿಸುವ ಗೌರವಿಸುವ ಮಾನವೀಯತೆಯ ಗುಣಗಳನ್ನು ಬೆಳೆಸಿಕೊಂಡಾಗ ಮಾತ್ರ ಸಮಸಮಾಜ ನಿರ್ಮಾಣವಾಗುತ್ತದೆ. ಆದ್ದರಿಂದ ಬಸವಣ್ಣನವರ ತತ್ವ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಹೆಚ್.ಡಿ.ಕೋಟೆ ತಾಲೂಕು ಪುರಗ್ರಾಮದ ಶ್ರೀ ಬಸವೇಶ್ವರ ಪಟ್ಟದ ಮಠಾಧ್ಯಕ್ಷ ಶ್ರೀ ಚಂದ್ರಶೇಖರ ಸ್ವಾಮೀಜಿ, ಅರಕೆರೆ ವಿರಕ್ತಮಠಾಧ್ಯಕ್ಷ ಶ್ರೀ ಸಿದ್ದೇಶ್ವರ ಸ್ವಾಮೀಜಿ, ದಂಡಿಕೆರೆ ಶ್ರೀ ಮಹಾಂತಸ್ವಾಮಿ ಮಠಾಧ್ಯಕ್ಷ ಶ್ರೀ ಬಸವಲಿಂಗ ಸ್ವಾಮೀಜಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ, ಬಿ.ಕೆ. ನಾಗರಾಜು, ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷ ಎನ್.ಬಿ.ರಾಜು, ಖಜಾಂಚಿ ಎಂ.ಬಸವರಾಜು, ಕಾರ್ಯದರ್ಶಿ ಎಂ.ಡಿ.ಚಂದ್ರಶೇಖರ್, ಶ್ರೀರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ಟ್ಯೂಬ್ ಮಹಾದೇವ್ ಮತ್ತಿತರರು ಉಪಸ್ಥಿತರಿದ್ದರು.

ಉತ್ತರಪ್ರದೇಶದಲ್ಲಿ ಟ್ರಕ್‌ಗೆ ಕಾರು ಡಿಕ್ಕಿ, 8 ಮಂದಿ ದುರ್ಮರಣ

ಸಿದ್ಧಾರ್ಥನಗರ (ಉತ್ತರಪ್ರದೇಶ), ಮೇ 22– ಉತ್ತರಪ್ರದೇಶದ ಸಿದ್ಧಾರ್ಥ ನಗರದ ನೌಗಢ್–ಬನ್ಸಿ ರಸ್ತೆಯಲ್ಲಿ ನಿಂತಿದ್ದ ಟ್ರಕ್‌ಗೆ ಎಸ್‌ಯುವಿ ಕಾರೊಂದು ಡಿಕ್ಕಿ ಹೊಡೆದಿದ್ದು, ಪರಿಣಾಮ 8 ಮಂದಿ ದುರ್ಮರಣವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ.

ವಿವಾಹ ಕಾರ್ಯಕ್ರಮಕ್ಕೆ ಭೇಟಿ ನೀಡಿದ್ದ ಕುಟುಂಬಸ್ಥರು ಕಾರಿನಲ್ಲಿ ಬರುತ್ತಿದ್ದು, ಈ ವೇಳೆ ರಸ್ತೆಯಲ್ಲಿ ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಘಟನೆಯಲ್ಲಿ 8 ಮಂದಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ ಗಾಯಾಳುಗಳನ್ನು ಗೋರಖ್‌ಪುರದ ಬಿಆರ್‌ಡಿ ಆಸ್ಪತ್ರೆಗೆ ದಾಖಲಿಸಲಾಗಿದ್ದು,

ನಕ್ಕರೆ ಅದೇ ಸ್ವರ್ಗ

ಗುಂಡ : ಹೇರ್ ಕಟಿಂಗ್ ಮಾಡಪ್ಪಾ

ಅಂಗಡಿಯವ : ಯಾವ ಸ್ಟೈಲ್ ಮಾಡ್ಲೀ ಸಾರ್?

ಗುಂಡ : ಸ್ಟೈಲು ಗೀಲು ಬೇಡಪ್ಪಾ, ಹೆಂಡತಿ ಕೈಗೆ ಕೂದಲು ಸಿಗಬಾರದು ಅಷ್ಟೇ.

ಮೈಸೂರು ಮಿತ್ರ
ಸೋಮವಾರ, 23 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಭ್ಯತೆಯ ಮಾರ್ಗದಿಂದ ನೀನು ಜಗತ್ತನ್ನೇ ಪರಿವರ್ತಿಸಬಹುದು.

–ಮಹಾತ್ಮ ಗಾಂಧೀಜಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಾತು ಬೆಳ್ಳಿ, ಮೌನ ಬಂಗಾರ.

ನಿಮ್ಮ ಪತ್ರಗಳು

ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಶಿಸ್ತುಬದ್ಧವಾಗಿರಲಿ

ಮಾನ್ಯರೆ,


ಈ ಸಲದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪ್ರಕಟವಾಗಿದೆ. ಬಹಳ ವಿದ್ಯಾರ್ಥಿಗಳು ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಕೆಲವರು ಪೂರ್ತಿ ಅಂಕಗಳನ್ನು ಪಡೆದು ಔಟ್ ಆಫ್ ಔಟ್ ಎಂದು ವಿಜಯದ ನಗೆ ಬೀರಿದ್ದಾರೆ. ಸಂತಸದ ವಿಷಯವೇ. ಎಲ್ಲಾ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನ ಉಜ್ವಲ ವಾಗಲಿ, ಶುಭವಾಗಲಿ.

ವಿದ್ಯಾರ್ಥಿ ಸ್ನೇಹಿ ಮೌಲ್ಯಮಾಪನದಿಂದ ಹೆಚ್ಚು ಹೆಚ್ಚು ಅಂಕಗಳನ್ನು ಪಡೆದು ಹೆಚ್ಚು ಮಂದಿ ಉತ್ತೀರ್ಣರಾಗಿದ್ದಾರೆ. ಶಿಕ್ಷಣದ ಗುಣ ಮಟ್ಟ ಕುಸಿಯುತ್ತಿದೆಯೇ? ಇದು ವಿದ್ಯಾರ್ಥಿಗಳ ಬುದ್ಧಿಮತ್ತೆಯನ್ನು ಉನ್ನತೀಕರಿಸಲು ಸಹಕಾರಿಯೇ? ಅಥವಾ ಅಡಚಣೆಯೇ?

ಇತ್ತೀಚಿನ ದಿನಗಳಲ್ಲಿ ಕೇವಲ ಪರೀಕ್ಷೆಯಲ್ಲಿ ಪಡೆದ ಅಂಕಗಳೇ ಮಾನದಂಡವಾಗಿತ್ತು. ಇನ್ನು ಮುಂದಿನ ದಿನಗಳಲ್ಲಿ ಆ ಪರಿಕಲ್ಪನೆ ಕಡಿಮೆಯಾಗಿ ಕೇವಲ ಕೌಶಲ್ಯತೆಯ ಪ್ರತಿಭೆಗೆ ಮನ್ನಣೆ ದೊರಕುತ್ತದೆಯೇ? ಕಾದು ನೋಡಬೇಕಿದೆ. ಒಂದನೇ ತರಗತಿಯಿಂದ ಒಂಬತ್ತನೇ ತರಗತಿಯವರೆಗಿನ ಇರುವ ಪದ್ಧತಿ. ಯಾವ ವಿದ್ಯಾರ್ಥಿಯನ್ನು ನಪಾಸು ಮಾಡದಿರುವುದು ಸ್ವಾಗತಾರ್ಹ. ಆದರೆ ಹತ್ತನೇ ತರಗತಿಯ ಮೌಲ್ಯಮಾಪನ ಅತ್ಯಂತ ಶಿಸ್ತು ಮತ್ತು ಕಠಿಣವಾಗಿ ಮಾಡಿದರೆ ಒಳ್ಳೆಯದು. ಅದು ವಿದ್ಯಾರ್ಥಿಗಳಿಗೂ ಅನುಕೂಲ ಹಾಗೂ ಅವರ ಜ್ಞಾನವೃದ್ಧಿಗೆ ಸಹಕಾರಿ ಎಂದು ನನ್ನ ಅನಿಸಿಕೆ.

– ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು.

ಟೀಕೆಗಳ ಮಧ್ಯೆಯೂ ಸ್ವಾಗತಿಸೋಣ!



ಮಾನ್ಯರೇ

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬಳಲುತ್ತಿರುವ ಜನಸಾಮಾನ್ಯರ ನೆರವಿಗೆ ಧಾವಿಸಿರುವ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ದರದ ಮೇಲಿನ ತನ್ನ ಅಬಕಾರಿ ಸುಂಕ ಕಡಿತ ಮಾಡಿರುವುದು ಪ್ರಶಂಸನೀಯ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದ ದಿನನಿತ್ಯ ಬಳಸುವ ವಸ್ತುಗಳ ಬೆಲೆ ಗಗನಕ್ಕೇರಿದ್ದು ಇದರಿಂದ ಜನಸಾಮಾನ್ಯರ ಬದುಕು ದುಸ್ತರವಾಗಿತ್ತು.

ಪ್ರಸ್ತುತ ಕೇಂದ್ರ ಸರ್ಕಾರದ ತುಸು ಬೆಲೆ ಇಳಿಕೆಯ ನಿರ್ಧಾರದಿಂದ ಸಾರ್ವಜನಿಕರಲ್ಲಿ ಕೊಂಚ ನೆಮ್ಮದಿ ತರಿಸಿದೆ. ಆದರೂ ಪೈಸೆ ಪೈಸೆಗಳ ಮಟ್ಟದಲ್ಲಿ ವರ್ಷ ಗಟ್ಟಲೆ ಪೆಟ್ರೋಲ್ ಹಾಗೂ ಡಿಸೇಲ್ ಬೆಲೆ ಏರಿಸಿ, ಪ್ರಸ್ತುತ ಹತ್ತಾರು ರೂಪಾಯಿ ಕಡಿಮೆಯಾದರೇನು? ಎಂಬ ಜನ ಸಾಮಾನ್ಯರ ಟೀಕೆಗಳ ಸುರಿಮಳೆಗಳ ಮಧ್ಯೆಯೂ... ಬೆಲೆಏರಿಕೆಯಾದಾಗಲೂ ಎಡೆಬಿಡದೇ ಸರ್ಕಾರವನ್ನು ಟೀಕಿಸಿದ್ದ ನಾವುಗಳು, ಬೆಲೆ ಇಳಿಕೆಯಾದಾಗಲೂ ಸರ್ಕಾರವನ್ನು ಅಭಿನಂದಿಸೋಣ!

ಕೇಂದ್ರ ಸರ್ಕಾರ ತನ್ನ ಪಾಲಿನ ಅಬಕಾರಿ ಸುಂಕ ಕಡಿತ ಮಾಡಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆಯಾದರೂ, ರಾಜ್ಯ ಸರ್ಕಾರಗಳು ಕೂಡ ತಮ್ಮ ವ್ಯಾಪ್ತಿಯಲ್ಲಿ ಕರಭಾರ ಕಡಿಮೆ ಮಾಡಿ ಜನಸಾಮಾನ್ಯರ ಬದುಕು ಮತ್ತಷ್ಟು ಹಗುರವಾಗಲು ನೆರವಾಗಬೇಕಿದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಮೇಲಿನ ಕೇಂದ್ರ ಸರ್ಕಾರದ ಅಬಕಾರಿ ಸುಂಕ ಕಡಿತದ ನಿರ್ಧಾರ ಸ್ವಾಗತಾರ್ಹವಾದರೂ, ಹಿಂಗೆ ಇಳಿಸಿ ಹಂಗೆ ಏರಿಸುವ ದೂರಾಲೋಚನೆಯ(!?) ಈ ನಿರ್ಧಾರದಿಂದ ಸರ್ಕಾರಗಳು ದೂರ ಸರಿಯುವುದು ಉತ್ತಮ.

– ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಮನೆ ಕಳೆದುಕೊಂಡವರಿಗೆ ಶೀಘ್ರ ಪರಿಹಾರ ನೀಡಿ

ಮಾನ್ಯರೆ,

ರಾಜ್ಯದ ಹಲವಾರು ಭಾಗಗಳಲ್ಲಿ ವಿಪರೀತ ಮಳೆಯಾಗುತ್ತಿದೆ. ಇದರಿಂದ ಜೀವನಕ್ಕೆ ಆಧಾರವಾಗಿದ್ದ ಬೆಳೆಯು ನಾಶವಾಗಿ ರೈತರು ಕಂಗೆಡುತ್ತಿರುವ ಸಂದರ್ಭದಲ್ಲಿ ಹೆಚ್ಚಿನ ಮಳೆಯ ಕಾರಣ ಅನೇಕ ಗ್ರಾಮೀಣ ಭಾಗ ಮತ್ತು ನಗರ ಪ್ರದೇಶ ಒಳಗೊಂಡಂತೆ ಮನೆಗಳು ಮಳೆ ನೀರಿನ ಹಾನಿಗೆ ಒಳಗಾಗಿದೆ ಹಾಗೂ ಮನೆಯ ಕಟ್ಟಡಗಳು ಬಿದ್ದು ಹೋಗಿದೆ. ಈ ಕಾರಣದಿಂದ ಸರ್ಕಾರವು ಇಂತಹ ಹಾನಿಗೊಳಗಾದ ಜನರಿಗೆ ಪರಿಹಾರದ ಹಣ ಬಿಡುಗಡೆ ಮಾಡಿದರೆ ಸಾಮಾನ್ಯ ಜನರಿಗೆ ಅನುಕೂಲ ವಾಗುತ್ತದೆ ಮತ್ತು ಆಶ್ರಯ ಯೋಜನೆ ಅಡಿಯಲ್ಲಿ ಸುಮಾರು ಮೂರು ವರ್ಷಗಳಿಂದ ಈ ಸೌಲಭ್ಯ ಯಾರಿಗೂ ಸಹ ಸರಿಯಾಗಿ ದೊರೆತಿಲ್ಲ. ವಸತಿ ಸಚಿವರು ಕಲಾಪದಲ್ಲಿ ಮಾತ್ರ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ, ಎನ್ನುತ್ತಾರೆ. – ಇದಕ್ಕೆ ಉತ್ತರ ಸರ್ಕಾರ ನಾವು ಕೊಟ್ಟಿದ್ದೇವೆ ಎಂಬುದು. ಹಾಗಾದರೆ ಸ್ವಲ್ಪ ಹಣದಲ್ಲಿ ನಿರ್ಮಾಣ ಆಗಿರುವ ವಸತಿಗಳ ಸೌಲಭ್ಯಗಳ್ಯಾಕೆ ವಸತಿ ವಂಚಿತ ಜನರಿಗೆ ತಲುಪಿಲ್ಲ? ಇನ್ನಾದರೂ ಈ ಸೌಲಭ್ಯ ಪಡೆಯದೇ ಇರುವ ಜನರಿಗೆ ಈ ಸೌಲಭ್ಯವು ಮುಂದಿನ ದಿನಗಳಲ್ಲಿ ದೊರಕಲಿ ಇದರ ಒಗ್ಗೆ ರಾಜ್ಯದ ಮುಖ್ಯಮಂತ್ರಿಗಳು ಯೋಚಿಸಿ ಅತೀ ಶೀಘ್ರದಲ್ಲಿ ಹಣ ಬಿಡುಗಡೆ ಮಾಡಿ ವಸತಿ ಸೌಲಭ್ಯ ನೀಡುವುದಕ್ಕೆ ಮುಂದಾಗಲಿ.

– ನಾಗೇಶ್ ಕೆ., ಮಾನಸಗಂಗೋತ್ರಿ.

ಬಡವರ ಮದುವೆಗೊಂದು ಸಮುದಾಯ ಭವನ ಬೇಕು

ಮಾನ್ಯರೆ,

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮವು ಮುಂದುವರೆಯುತ್ತಿರುವ ಗ್ರಾಮವಾಗಿದೆ. ದೊಡ್ಡಬೇಲಾಳು ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಗ್ರಾಮದಲ್ಲಿ ಎಲ್ಲಾ ಕೋಮಿನ ಜನರು ವಾಸ ಮಾಡುತ್ತಿದ್ದಾರೆ. ಅಕ್ಕಪಕ್ಕದ ಗ್ರಾಮದ ಜನರು ಮದುವೆಗೆ ಅಂತ ಛತ್ರಕ್ಕೆ 40 ರಿಂದ 50 ಸಾವಿರ ರೂ. ವ್ಯಯಿಸುತ್ತಿದ್ದಾರೆ. ರಾವಂದೂರು, ಭೋಗನಹಳ್ಳಿ ಕ್ರಾಸ್‌ನಲ್ಲಿರುವ ಛತ್ರಗಳಿಗೆ ತುಂಬಾ ದುಂದು ವೆಚ್ಚ ಮಾಡುತ್ತಿದ್ದಾರೆ. ಅರೇನಹಳ್ಳಿಯ ಸುತ್ತಮುತ್ತಲ ಗ್ರಾಮಗಳಾದ ಆರ್. ಹೊಸಹಳ್ಳಿ, ಮಂಟಿಕೊಪ್ಪಲು, ದೊರೆಕೆರೆ, ನೀಲಂಗಾಲ, ಎನ್.ಶೆಟ್ಟಹಳ್ಳಿ, ಆರ್.ಡಿ. ಕೊಪ್ಪಲು, ಭೋಗನಹಳ್ಳಿ ಇಲ್ಲಿನ ಬಡವರಿಗೆಂದು ಅರೇನಹಳ್ಳಿಯ ದೊಡ್ಡಮ್ಮತಾಯಿ ದೇವಾಲಯದ ಪಕ್ಕದ ಗ್ರಾಮದ ಜಮೀನಿನಲ್ಲಿ ಪಿರಿಯಾಪಟ್ಟಣದ ಶಾಸಕರು ಒಂದು ಭವನ ನಿರ್ಮಾಣಕ್ಕೆ ಅನುದಾನ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಬಡವರಿಗೆ ಅತೀ ಕಡಿಮೆ ವೆಚ್ಚದಲ್ಲಿ ಮದುವೆ ಇತರ ಕಾರ್ಯಗಳು ನೆರವೇರುತ್ತವೆ.

– ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ, ಪಿ.ಪಟ್ಟಣ ತಾ.



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಬದುಕು ಮ್ಯಾಜಿಕ್ ಷೋ ಅಲ್ಲ; ರಿಯಾಲಿಟಿ ಷೋ ಆಗ್ಲಿ!

ಮನುಷ್ಯ ಭೂಮಿಯಲ್ಲಿ ಜನ್ಮ ತಾಳಿದ ಕ್ಷಣದಿಂದ ಸತ್ತು ಭೂಗರ್ಭ ಸೇರುವವರೆವಿಗೂ ಒಳ್ಳೆಯ ಸಮಯಕ್ಕಾಗಿ ನೋಡುವುದು, ಕಾಯುವುದು ವಾಡಿಕೆ. ಆದರೆ ಯಾವ ಪ್ರಾಣಿಯು ಒಳ್ಳೆಯ ಸಮಯಕ್ಕಾಗಿ ಕಾಯುತ್ತಾ, ತನ್ನ ಭವಿಷ್ಯದ ದಿನಗಳ ಕುರಿತಾಗಿ ಇತರರ ಬಳಿ ಕಣಿ ಕೇಳುತ್ತಾ ಕಾಲ ವ್ಯರ್ಥ ಮಾಡುವುದಿಲ್ಲ. ಪ್ರತಿಯೊಂದು ಪ್ರಾಣಿಪಕ್ಷಿಯು ತನ್ನ ಉಳಿವಿಕೆಗಾಗಿ ನಿತ್ಯವೂ ಹೋರಾಟ ಮಾಡುತ್ತದೆ. ಆದರೆ ಮನುಷ್ಯ ಮಾತ್ರ ತನ್ನ ಸುಸ್ಥಿತಿ ಅಥವಾ ದುಸ್ಥಿತಿಗೆ ಹಣೆಬರಹ, ವಿಧಿಲಿಖಿತ ಎಂಬ ವೇದಾಂತದ ಮಾತುಗಳನ್ನಾಡುತ್ತಾ, ಅದೃಷ್ಟ, ದುರಾದೃಷ್ಟ ಎಂದು ಭಾವಿಸುತ್ತಾ, ಜೀವನದಲ್ಲಿ ತೊಡಕುಗಳು ಹೆಚ್ಚಾದರೆ ಭಕ್ತಿಯಿಂದ ಪೂಜಿಸಿದ ದೇವರನ್ನೇ ದೂಷಿಸುವ ಮನೋಭಾವ ಹೊಂದಿರುತ್ತಾನೆ. ಕೆಲವರಿಗೆ ಎಲ್ಲವೂ ಕುಳಿತಲ್ಲಿಯೇ ಲಭ್ಯವಾಗಬೇಕು, ಪರಿಶ್ರಮವಿಲ್ಲದ ಫಲ ಬೇಕು. ಕುಳಿತು ತಿನ್ನುವವನಿಗೆ ಕುಡಿಕೆ ಹೊನ್ನು ಸಾಲದು ಎಂಬ ಮಾತಿನಂತೆ ಸೋಮಾರಿತನದಿಂದ ತಮ್ಮನ್ನು ದುಸ್ಥಿತಿಗೆ ಒಡ್ಡಿಕೊಂಡು ತಮ್ಮ 'ಹಣೆ ಬರಹ ಸರಿಯಿಲ್ಲ' ಎಂದು ಘೋಷಣೆ ಮಾಡುವ ಮಹಾನುಭಾವದರು ನಮ್ಮ ಮುಂದೆ ಅನೇಕರು ಇದ್ದಾರೆ.

'ಕಾಯಕವೇ ಕೈಲಾಸ' ಎಂಬ ಧ್ಯೇಯವಾಕ್ಯವನ್ನು ನಿತ್ಯವೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ತಮ್ಮ ವಿದ್ಯೆಗೆ ತಕ್ಕುದಾದ ಕೆಲಸ ಸಿಗದಿದ್ದರೂ, ತಮ್ಮ ಶಕ್ತಿ–ಯುಕ್ತಿಗೆ ಸಿಕ್ಕಿದ ಕೆಲಸವನ್ನು ಕಾಯ–ವಾಚ–ಮನಸಾ ಮಾಡುತ್ತಾ ಜೀವನದಲ್ಲಿ ಪ್ರಗತಿ ಕಂಡ ಅನೇಕ ಯುವಕರು ನಮ್ಮ ಕಣ್ಣ ಮುಂದೆ ಇದ್ದಾರೆ. ಬೆವರು ಹರಿಸಿ ದುಡಿದರೆ ಬದುಕು ಹಸನಾಗುವುದರಲ್ಲಿ ಸಂಶಯವಿಲ್ಲ. ಬೆವರಿಗೆ ಒಂದು ದಿವ್ಯವಾದ ಶಕ್ತಿಯಿದೆ. ಬೆವರಿಗೆ ಮಾತ್ರ ಹಣೆ ಬರಹವನ್ನು ಅಳಿಸುವ ಶಕ್ತಿಯಿದೆ ಎಂದು ನಂಬಿ ದುಡಿಯುವವ ಮಾತ್ರ ತನ್ನ ಹಣೆ ಬರಹವನ್ನು ತಾನೆ ಬರೆದುಕೊಳ್ಳುತ್ತಾನೆ. ಯಾವನು ತನ್ನ ಹಣೆಬರಹ ಸರಿಯಿಲ್ಲ ಎಂದು ಚಿಂತಿಸಿ ಕುಳಿತಿರುತ್ತಾನೆಯೋ, ಅವನು ಜನಗಣತಿಯಲ್ಲಿ ಬದುಕಿದ್ದರೂ ಜನಮಾನಸದಲ್ಲಿ ಸತ್ತುಹೋಗಿರುತ್ತಾನೆ.

ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಕಡಿಮೆ ಶ್ರಮದಲ್ಲಿ ಹೆಚ್ಚು ಸಂಪಾದಿಸು ಅಭಿಲಾಷೆ ಹೊಂದಿರುತ್ತಾನೆ. ಕೆಲವರಿಗೆ ಚಿಕ್ಕವಯಸ್ಸಿಗೆ ಅವರ ವಿದ್ಯೆಗೆ ತಕ್ಕಂತೆ ಸೂಕ್ತವಾದ ಕೆಲಸ ದೊರಕಿ ಅವರು ಜೀವನದಲ್ಲಿ ಮೇಲೆ ಬಂದಿರುತ್ತಾರೆ. ಅದು ಸಮಯ, ಸ್ಥಳ, ಸಂದರ್ಭ, ಅವಕಾಶ, ಸಾಮರ್ಥ್ಯ ಎಲ್ಲವನ್ನೂ ಅವಲಂಬಿಸಿರುತ್ತದೆ. ಕೆಲವರಿಗೆ ಸಾಮರ್ಥ್ಯವಿದ್ದರೂ ಅವಕಾಶಗಳು ಲಭ್ಯವಿರುವುದಿಲ್ಲ. ಅವರು ನಿರಾಶಾಭಾವದಿಂದ ತಮ್ಮನ್ನು ಇತರರೊಂದಿಗೆ ಹೋಲಿಸಿಕೊಂಡು 'ಹಣೆ ಬರಹದ' ಕುರಿತಾಗಿ ಭಾಷಣ ಮಾಡಲು ಪ್ರಾರಂಭಿಸುತ್ತಾರೆ. ಆದರೆ ಮತ್ತೆ ಕೆಲವರು ಅವಕಾಶ ಲಭ್ಯವಾಗದಿದ್ದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವ ಜಾಯಮಾನದವರಾಗಿರುತ್ತಾರೆ. ಅವರು ಸುಮ್ಮನೆ ಕೂರದೆ ತಮ್ಮ ಶಕ್ತಿಗೆ ಅನುಸಾರವಾಗಿ ಪರಿಶ್ರಮದಿಂದ ಕೆಲಸ ಮಾಡಲು ಪ್ರಾರಂಭಿಸುತ್ತಾರೆ. ಶ್ರಮಜೀವಿಗೆ ಅವಕಾಶಗಳ ಕೊರತೆಯಿಲ್ಲ. ಸೋಮಾರಿಗೆ ಅವಕಾಶಗಳಿದ್ದರೂ ಕಣ್ಣಿಗೆ ಕಾಣುವುದಿಲ್ಲ. ಮೈಮುರಿದು ದುಡಿಯುವ ಮನೋಭಾವ ಇಲ್ಲದವನಿಗೆ 'ಕುಣಿಯಲಾರದವಳಿಗೆ ನೆಲ ಡೊಂಕು' ಎಂಬ ನಾಣ್ಣುಡಿಯಂತೆ ಪ್ರತಿಯೊಂದರಲ್ಲೂ ಏನಾದರೂ ಸಮಸ್ಯೆಯನ್ನು ಹುಡುಕುತ್ತಾರೆ. ಯಾವ ಕೆಲಸ ಸಿಕ್ಕಿದರೂ ಶ್ರದ್ಧೆ, ಪ್ರಾಮಾಣಿಕತೆ, ಅರ್ಪಣಾ ಮನೋಭಾವ ದಿಂದ ಮಾಡದೆ, ತನ್ನ ಸ್ಟೇಟಸ್‌ಗೆ ತಕ್ಕುದಾದ ಕೆಲಸ ಇದಲ್ಲ ಎಂದ ಅನ್ಯಮನಸ್ಕರಾಗಿ ಕೆಲಸ ಮಾಡಿ, ಅಸಮರ್ಥ ಎನಿಸಿಕೊಂಡು ಬಿಡುತ್ತಾನೆ. ಸಮಸ್ಯೆ ಕುರಿತು ಚಿಂತಿಸುವಂತೆಯೇ ಸಾಧ್ಯತೆ ಕುರಿತು ಚಿಂತಿಸಿದರೆ ಏನಾದರೂ ಸಾಧಿಸಬಹುದು. ಪ್ರಯತ್ನವನ್ನೇ ಮಾಡದೇ ಸುಮ್ಮನೆ ಕಾಲಹರಣ ಮಾಡಿದರೆ ಬದುಕು ಸುಭಿಕ್ಷವಾಗದೆ ಶಿಕ್ಷೆಯಾಗಿಬಿಡುವ ಸಾಧ್ಯತೆ ಇರುತ್ತದೆ.

ಎಷ್ಟೋ ಜನ ತಮ್ಮ ಲೆವೆಲ್‌ಗೆ ತಕ್ಕುದಾದ ಕೆಲಸ ಸಿಕ್ಕಲಿಲ್ಲ ಎನ್ನುವ ಕಾರಣಕ್ಕೆ ಯಾವ ಕೆಲಸವನ್ನೂ ಮಾಡದೆ ಅಪ್ಪ–ಅಮ್ಮನ ದುಡಿಮೆ ಹಣದಲ್ಲಿ ನಾಲ್ಕು ಕತ್ತೆ ವಯಸ್ಸಾಗಿದ್ದರೂ ಬದುಕುತ್ತಿರುತ್ತಾರೆ. ಚಿಕ್ಕ ಕೆಲಸ ಮಾಡಲು ಅವಮಾನ ಎಂದುಕೊಳ್ಳುವ ಅವರು ನಿರುದ್ಯೋಗಿಯಾಗಿ,



> ಬೆವರು ಹರಿಸಿ ದುಡಿದರೆ ಬದುಕು ಹಸನಾಗುವುದರಲ್ಲಿ ಸಂಶಯವಿಲ್ಲ. ಬೆವರಿಗೆ ಒಂದು ದಿವ್ಯವಾದ ಶಕ್ತಿಯಿದೆ. ಬೆವರಿಗೆ ಮಾತ್ರ ಹಣೆ ಬರಹವನ್ನು ಅಳಿಸುವ ಶಕ್ತಿಯಿದೆ ಎಂದು ನಂಬಿ ದುಡಿಯುವವ ಮಾತ್ರ ತನ್ನ ಹಣೆ ಬರಹವನ್ನು ತಾನೆ ಬರೆದುಕೊಳ್ಳುತ್ತಾನೆ. ಯಾವನು ತನ್ನ ಹಣೆಬರಹ ಸರಿಯಿಲ್ಲ ಎಂದು ಚಿಂತಿಸಿ ಕುಳಿತಿರುತ್ತಾನೆಯೋ, ಅವನು ಜನಗಣತಿಯಲ್ಲಿ ಬದುಕಿದ್ದರೂ ಜನಮಾನಸದಲ್ಲಿ ಸತ್ತುಹೋಗಿರುತ್ತಾನೆ.

ದಂಡಪಿಂಡವಾಗಿ ಅಪ್ಪನ ದುಡಿಮೆಯಲ್ಲಿ ಕುಳಿತು ತಿನ್ನಲು ಅವಮಾನ ಎಂದು ಎಣಿಸುವುದಿಲ್ಲ. ಕಾಯಕ ಮಾಡದೇ ಪ್ರಸಾದ ಮಾಡುವುದು ಅಪರಾಧ ಎಂದು ಶರಣರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ನಿರುದ್ಯೋಗಕ್ಕೆ ಸರ್ಕಾರವನ್ನು ದೂರುತ್ತಲೋ, ವ್ಯವಸ್ಥೆಯನ್ನು ಬೈಯುತ್ತಲೋ ತಮ್ಮದೇ ರೀತಿಯ ಸೋಂಬೇರಿ ಪಟಾಲಂಗಳ ಜೊತೆಗೂಡಿ ಅನವಶ್ಯಕ ಹರಟೆ ಮಾಡುತ್ತಾ, ಕಾಲಹರಣ ಮಾಡುತ್ತಾ, ಮನೆಗೆ ಭಾರವಾಗಿ ಇರುವುದಲ್ಲದೆ, ದೇಶಕ್ಕೆ ಮಾರಕವಾಗಿ ಇರುತ್ತಾರೆ. ಮತ್ತೆ ಕೆಲವರು ತಾವು ಮಾಡುವ ಕೆಲಸದಿಂದ ಬರುವ ಸಂಪಾದನೆ ಸಾಲದು ಎಂಬುದನ್ನು ಮನಗಂಡು, ಬೆಳಗ್ಗೆ ಬೇಗ ಎದ್ದು, ಕೆಲಸಕ್ಕೆ ಹೋಗುವ ಮುನ್ನ ಪಾರ್ಟ್ ಟೈಂ ಕೆಲಸಗಳಾದ ಹಾಲು ವಿತರಣೆ, ಪೇಪರ್ ವಿತರಣೆ ಇತ್ಯಾದಿ ಕೆಲಸ ಗಿಟ್ಟಿಸಿ ಬೆವರು ಹರಿಸಿ ದುಡಿಯುತ್ತಾರೆ. ಅಂತಹ ಶ್ರಮಜೀವಿಗಳಿಗೆ ತಿಂದ ಅನ್ನ ಮೈಗೆ ಹತ್ತುತ್ತದೆ. ಬೆಳಗ್ಗೆ ಒಂಭತ್ತು ಗಂಟೆಯಾದರೂ ಏಳದೆ, ಸಂಜೆಯವರೆಗೆ ಸುಖಾಸುಮ್ಮನೆ ಕಾಲ ಹರಣ ಮಾಡಿ ಟೈಂ ಟೈಂಗೆ ಸರಿಯಾಗಿ ಮನೆಗೆ ಊಟತಿಂಡಿಗೆ ಹಾಜರಾಗುವ ನುಂಗಣ್ಣಗಳ ಸಂಖ್ಯೆ ಕಡಿಮೆ ಏನಿಲ್ಲ. ಅಂತಹ ಗುಂಡಣ್ಣಗಳು ಕಷ್ಟಪಟ್ಟು ದುಡಿಯುವ ಯುವಕರನ್ನು ಸೋಮಾರಿ ಕಟ್ಟೆಯ ಮೇಲೆ ಕುಳಿತು ಆಡಿಕೊಂಡರೂ ಆಶ್ಚರ್ಯಪಡಬೇಕಿಲ್ಲ.

ಇಂದು ಅನೇಕ ವಿಕಲಚೇತನರೂ ಸಹ ತಮ್ಮ ದೈಹಿಕ ಅಸಮರ್ಥತೆಯನ್ನು ದೂಷಿಸುತ್ತಾ ಸುಮ್ಮನೆ ಕೂರದೆ, ತಮ್ಮ ಕೈಲಾದ ಕೆಲಸವನ್ನು, ಕೈಯಲ್ಲಿ ಆಗದಿದ್ದರೆ ಕಾಲಿನಲ್ಲಾದರೂ ಏನಾದರೂ ಕೆಲಸ ಮಾಡುವ ಉದಾಹರಣೆಗಳನ್ನು ಕಾಣಬಹುದು. ಸಾಮಾಜಿಕ ಜಾಲತಾಣದಲ್ಲಿ ವಿಕಲಾಂಗರು ಪರಿಶ್ರಮದಿಂದ ದುಡಿಯುವ ಅನೇಕ ವಿಡಿಯೋಗಳು ಹರಿದಾಡುತ್ತಿರುತ್ತವೆ. ಅವುಗಳನ್ನು ವೀಕ್ಷಿಸುವ ಕೈಕಾಲು ಸುಸ್ಥಿತಿಯಲ್ಲಿರುವ ನಿರುದ್ಯೋಗಿಗಳು ಮರುಕ ವ್ಯಕ್ತಪಡಿಸುತ್ತಾರೆಯೇ ಹೊರತು ಅವುಗಳಿಂದ ಪ್ರಭಾವಿತರಾಗಿ ಕಾರ್ಯಪ್ರವೃತ್ತರಾಗುವುದಿಲ್ಲ. ಅನೇಕ ದುರಭ್ಯಾಸಗಳ ದಾಸರಾಗಿರುವ ನಿರುದ್ಯೋಗಿಗಳಲ್ಲಿ ಅನೇಕರು ಸಹವಾಸ ದೋಷದಿಂದ ಕಲಿತದ್ದಾಗಿ ದೂರುತ್ತಾರೆ. ಅವರೇಕೆ ಕಷ್ಟಪಟ್ಟು ದುಡಿಯುವವರ ಸಹವಾಸ ಮಾಡಿ ತಾವು ಇನ್ನೂ ಕಷ್ಟಪಟ್ಟು ದುಡಿಯುವ ಮನೋಭಾವ ಬೆಳಸಿಕೊಳ್ಳುವುದಿಲ್ಲ? ಬೆವರು ಸುರಿಸದೆಯೇ ಸುಮ್ಮನೆ ಕುಳಿತು ಉಣ್ಣುವ ಜನ ಸೂಕ್ಷ್ಮ ಸಂವೇದನೆಗಳನ್ನೇ ಕಳೆದುಕೊಂಡಿರುತ್ತಾರೆ. ಕನಿಷ್ಠಪಕ್ಷ ತನ್ನ ಅನ್ನವನ್ನು ತಾನು ಹುಟ್ಟಿಸಿಕೊಳ್ಳದಾದ ಮೇಲೆ ಮನುಷ್ಯ ಜನ್ಮ ಎಂಬುದು ವ್ಯರ್ಥ ಎಂಬ ಭಾವನೆ ಮೂಡದೇ ಇರುವುದು ದುರದೃಷ್ಟಕರ. ಪಾದರಕ್ಷೆ, ಬಟ್ಟೆ, ವಾಚು ಎಲ್ಲವನ್ನೂ ಬ್ರಾಂಡೆಡ್ ಹಾಕಬೇಕೆಂಬ ಅಭಿಲಾಷೆ ಹೊಂದಿರುವ ಅನೇಕ ಯುವಜನ ಅದಕ್ಕಾಗಿ ತನ್ನ ಬೆವರಿನ ಹಣ ಖರ್ಚು ಮಾಡುತ್ತಿದ್ದೇನೆಯೇ ಎಂದು ಆಲೋಚಿಸುವುದಿಲ್ಲ. ಅಪ್ಪನ ದುಡ್ಡಿನಲ್ಲಿ ಬ್ರಾಂಡೆಡ್ ಐಟಂಗಳನ್ನು ಧರಿಸಲು ಬಯಸುವವರು ತಮ್ಮ ದುಡಿಮೆಯ ಹಣ ಬಂದಾಗ ದುಬಾರಿ ಬೆಲೆಯದನ್ನು ಖರೀದಿಸಲು ಯೋಚಿಸುತ್ತಾರೆ.

'ಬೆವರು ಹರಿಸಿ ದುಡಿದು ತಿನ್ನುವುದು ಅವಮಾನಲ್ಲ, ಸ್ವಾಭಿಮಾನ' ಎಂಬುದು ಅನೇಕರ ಅರಿವಿಗೆ ಬಂದಿಲ್ಲ. ಕುಳಿತು ತಿನ್ನುವುದು ಅವಮಾನ ಎಂದು ತಿಳಿದರೆ ಮನೋಭಾವ ಬದಲಾಗುವ ಸಾಧ್ಯತೆ ಇದೆ. ಸ್ವಾಭಿಮಾನ ಇರುವವರು ಅನ್ಯರು ಏನು ಭಾವಿಸುತ್ತಾರೆ ಎಂದು ತಲೆಕೆಡಿಸಿಕೊಳ್ಳುವುದಿಲ್ಲ. ಆಡಿಕೊಳ್ಳುವವರೆಲ್ಲಾ ಅನ್ನ ಹಾಕುವುದಿಲ್ಲ. ಇಂದು ಆಡಿಕೊಳ್ಳುವವರು ಕಷ್ಟಪಟ್ಟು ದುಡಿದು ಮೇಲೆ ಬಂದವರನ್ನು ಕಂಡು ನಾಳೆ ಕೊಂಡಾಡುತ್ತಾರೆ. ಹಾಗಾಗಿ ಜನರ ಮಾತಿಗೆ ಅಷ್ಟು ಮನ್ನಣೆ ಕೊಡುವ ಅಗತ್ಯವಿಲ್ಲ. ಕಷ್ಟಪಟ್ಟು ದುಡಿಯುವವನ್ನು ಕಂಡು ಹೀಯಾಳಿಸುವ ಮಂದಿ ಅನೇಕರಿದ್ದಾರೆ. ಆಗ ಅವರ ಮಾತಿಗೆ ಕಿವುಡರಾದರೆ ಜೀವನದಲ್ಲಿ ಪ್ರಗತಿ ಕಾಣಬಹುದು. ಬದಲಿಗೆ ಅವರ ಮಾತನ್ನು ಗಂಭೀರವಾಗಿ ಪರಿಗಣಿಸಿ ಇರುವ ಕೆಲಸವನ್ನು ಕಳೆದುಕೊಂಡು ಕುಳಿತರೆ ಹೊಟ್ಟೆಗೆ ಅನ್ನದ ಬದಲು ಮಣ್ಣು ತಿನ್ನಬೇಕಾಗುತ್ತದೆ. ಸಾಧನೆ ಮಾಡುವ ಹಾದಿಯಲ್ಲಿ ಜನರ ಮಾತಿಗೆ ಕಿವುಡರಾಗಬೇಕು, ಸಾಧಿಸಿದ ಮೇಲೆ ಮೂಕರಾಗಬೇಕು.

ಒಳ್ಳೆಯ ದಿನಕ್ಕಾಗಿ ಕಾಯುತ್ತಾ ಕುಳಿತವನಿಗೆ ಕುಳಿತಲ್ಲಿಯೇ ವಯಸ್ಸಾಗಿಬಿಡುತ್ತದೆ. ಇಂದೇ ಒಳ್ಳೆಯ ದಿನ ಎಂದು ಭಾವಿಸಿ ಸಿಕ್ಕ ಕೆಲಸ ಮಾಡಲು ಹೊರಟವನಿಗೆ ಬದುಕು ಸುಂದರವಾಗಿರುತ್ತದೆ. ಅಗತ್ಯ ವಿದ್ಯಾರ್ಹತೆ ಇರುವವರೆಲ್ಲರಿಗೂ ಸರ್ಕಾರಿ ಕೆಲಸ ದೊರಕಲು ಸಾಧ್ಯವಿಲ್ಲ. ಸರ್ಕಾರಿ ಕೆಲಸ ಮಾಡುವವರು ಮಾತ್ರ ಭೂಮಿಯ ಮೇಲೆ ಬದುಕುತ್ತಿಲ್ಲ. ಸರ್ಕಾರಿ ಕೆಲಸ ದೊರಕದಿದ್ದಾಗ, ನಿರಾಶರಾಗದೆ ತಾವೆ ಒಂದು ಸಂಸ್ಥೆ, ಉದ್ಯಮ ಸ್ಥಾಪಿಸಿ ಹತ್ತಾರು ಜನರಿಗೆ ಉದ್ಯೋಗ ನೀಡಿರುವ ಅನೇಕ ಸಾಧಕರು ನಮ್ಮ ನಿಮ್ಮ ನಡುವೆ ಇದ್ದಾರೆ. ಅವರ ಪ್ರಯತ್ನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿರುತ್ತಾರೆ. ಆದರೆ ಅವರು ಪ್ರಯತ್ನದಿಂದ ಹಿಂದೆ ಸರಿಯುವುದಿಲ್ಲ. ಯಶಸ್ಸು ಕೇವಲ ಕನಸು ಕಂಡರೆ ಮಾತ್ರ ಲಭಿಸುವುದಿಲ್ಲ. ಕಂಡ ಕನಸ್ಸನ್ನು ನನಸು ಮಾಡುವ ಹಾದಿಯಲ್ಲಿ ಬರುವ ಸವಾಲುಗಳಿಗೆ ಎದೆ ಒಡ್ಡಿ ಎದುರಿಸಿದರೆ ಮಾತ್ರ ಯಸಸ್ಸು ಲಭ್ಯ. ಕೆಲವರು ಸಮಸ್ಯೆಗೆ ಎದೆ ಒಡ್ಡುವ ಬದಲು ಬೆನ್ನು ತೋರಿ ಸೋಲುತ್ತಾರೆ.

ಪರಿಶ್ರಮಕ್ಕೆ ಸುಲಭ ಮಾರ್ಗವಿಲ್ಲ. ಪರಿಶ್ರಮಿಗೆ ಬದುಕು ಭಾರವಲ್ಲ. ನಾಡಿನ ದಾರ್ಶನಿಕರು, ಸಾಧಕರು ಕಾಯಕದ ಬಗ್ಗೆ ಹತ್ತು ಹಲವು ಬಗೆಯಲ್ಲಿ ಪ್ರೇರಣದಾಯಕ ನುಡಿಗಳನ್ನಾಡಿದ್ದಾರೆ. ನಾಡು ಕಂಡ ಸರಳ ಸಜ್ಜನಿಕೆಯ ಇಂಜಿನಿಯರ್, ಮೈಸೂರು ಸಂಸ್ಥಾನದ ದಿವಾನರಾಗಿಯೂ ಸೇವೆ ಸಲ್ಲಿಸಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ದುಡಿಮೆ ಕುರಿತು ಹೀಗೆ ಹೇಳಿದ್ದಾರೆ "ದುಡಿ, ಮೈಮುರಿದು ದುಡಿ, ಹೆಚ್ಚು ಹೆಚ್ಚಾಗಿ ದುಡಿ, ಆ ನಿನ್ನ ದುಡಿಮೆಯಲ್ಲಿ ಕ್ರಮವಿರಲಿ, ನಿಯಮವಿರಲಿ, ಗುರಿ ಇರಲಿ, ವಿವೇಚನೆ ಇರಲಿ, ದಕ್ಷತೆ ಇರಲಿ". ಈ ಮಾತುಗಳನ್ನು ಧ್ಯೇಯವಾಕ್ಯವಾಗಿ ಸ್ವೀಕರಿಸಿದವರು ನಿಜಕ್ಕೂ ಕಾಯಕಯೋಗಿಗಳಾಗುತ್ತಾರೆ. ಏನಂತೀರಿ?

ಚಾ.ಬೆಟ್ಟಕ್ಕೆ ಸಾಗರೋಪಾದಿ ಹರಿದು ಬಂದ ಪ್ರವಾಸಿಗರು

- ವಿಶೇಷ ಟಿಕೆಟ್ ಪಡೆದು ದೇವಿ ದರ್ಶನ ಮಾಡಿದ 10 ಸಾವಿರ ಭಕ್ತರು
- ಒಂದೇ ದಿನ ದೇವಸ್ಥಾನಕ್ಕೆ 7 ಲಕ್ಷ, ಪಾರ್ಕಿಂಗ್ ಶುಲ್ಕ 1.30 ಲಕ್ಷ ರೂ ಸಂಗ್ರಹ



ಬೆಟ್ಟದ ವ್ಯೂವ್ ಪಾಯಿಂಟ್‌ನಿಂದ ಮೈಸೂರು ವೀಕ್ಷಿಸಿದ ಪ್ರವಾಸಿಗರು



ಚಾಮುಂಡಿ ಬೆಟ್ಟದಲ್ಲಿ ಭಾನುವಾರ ರಾತ್ರಿ ಕಂಡು ಬಂದ ವಾಹನ ದಟ್ಟಣೆ

ಮೈಸೂರು, ಮೇ 22(ಎಸ್‌ಬಿಡಿ)– ಮೈಸೂರಿನ ಪುಣ್ಯಕ್ಷೇತ್ರ ಚಾಮುಂಡಿಬೆಟ್ಟಕ್ಕೆ ಭಾನುವಾರ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡಿದ್ದ ಪರಿಣಾಮ ವಿಪರೀತ ಟ್ರಾಫಿಕ್ ಜಾಮ್ ಉಂಟಾಗಿತ್ತು.

ವಾರಾಂತ್ಯ ದಿನಗಳು, ಹಬ್ಬ ಇನ್ನಿತರ ವಿಶೇಷ ದಿನಗಳಲ್ಲಿ ಚಾಮುಂಡಿಬೆಟ್ಟದಲ್ಲಿ ವಾಹನ ದಟ್ಟಣೆ ಸಹಜ. ಆದರೆ ಇಂದು ಭಕ್ತರು ಹಾಗೂ ಪ್ರವಾಸಿಗರು ಸಾಗರೋಪಾದಿಯಲ್ಲಿ ಬಂದಿದ್ದ ಪರಿಣಾಮ ಕಿ.ಮೀ.ವರೆಗೆ ವಾಹನ ದಟ್ಟಣೆ ಉಂಟಾಯಿತು. ವೀವ್ ಪಾಯಿಂಟ್‌ನಿಂದಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಹು ಹಂತದ ಪಾರ್ಕಿಂಗ್ ಸಂಕೀರ್ಣ ಭರ್ತಿಯಾಗಿದ್ದಲ್ಲದೆ, ದೇವಿಕೆರೆ ಸಮೀಪದ ಖಾಲಿ ಜಾಗದಲ್ಲೂ ವಾಹನ ನಿಲುಗಡೆಗೆ ಅನುವು ಮಾಡಿಕೊಡಲಾಗಿತ್ತು. ಈ ನಿಗದಿತ ಸ್ಥಳದಲ್ಲೂ ಪಾರ್ಕಿಂಗ್ ಮಾಡಲಾಗದೆ ಸಾಕಷ್ಟು ಜನ ದೂರದಲ್ಲಿ ರಸ್ತೆ ಬದಿಯಲ್ಲೇ ವಾಹನ ನಿಲ್ಲಿಸಿ, ದೇವಾಲಯಕ್ಕೆ ನಡೆದುಕೊಂಡು ಹೋದರು.

ಚಾಮುಂಡಿಬೆಟ್ಟದ ನಿವಾಸಿಗಳು, ದೇವಸ್ಥಾನಕ್ಕೆ ಸಂಬಂಧಿಸಿದವರು ಹಾಗೂ ಗಣ್ಯ ವ್ಯಕ್ತಿಗಳ ವಾಹನಗಳಿಗೆ ಮಾತ್ರ ದೇವಾಲಯ ಸಮೀಪಕ್ಕೆ ಹೋಗಲು ಅವಕಾಶವಿದೆ. ಇಂದು ಅಂತಹವರೂ ವ್ಯೂವ್ ಪಾಯಿಂಟ್‌ನಿಂದ ದೇವಾಲಯದ ಬಳಿ ತಲುಪಲು ಅರ್ಧ ಗಂಟೆ ಬೇಕಾಯಿತು. ಖಾಸಗಿ ವಾಹನಗಳ ದಟ್ಟಣೆ ನಡುವೆ ನಗರ ಸಾರಿಗೆ ಬಸ್‌ಗಳು ಬೆಟ್ಟದ ನಿಲ್ದಾಣಕ್ಕೆ ಸಂಚರಿಸುವುದಕ್ಕೂ ಸಾಕಷ್ಟು ಸಮಯ ಬೇಕಾಯಿತು. ವಾಹನ ದಟ್ಟಣೆ ನಿರ್ವಹಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

10 ಸಾವಿರ ಮಂದಿ ವಿಶೇಷ ದರ್ಶನ: ವಾರಾಂತ್ಯ ಹಾಗೂ ವಿಶೇಷ ದಿನಗಳಲ್ಲಿ 10 ರಿಂದ 12 ಸಾವಿರ ಭಕ್ತರು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಆದರೆ ರಜೆ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯಗಳಿಂದ ಹೆಚ್ಚು ಜನ ಬರುತ್ತಿದ್ದಾರೆ. ಇಂದು ಸುಮಾರು 10 ಸಾವಿರ ಮಂದಿ ವಿಶೇಷ ದರ್ಶನದ ಟಿಕೆಟ್ ಪಡೆದು ದೇವರ ದರ್ಶನ ಮಾಡಿದ್ದಾರೆ. 100 ರೂ. ಟಿಕೆಟ್‌ನಿಂದ 5,97,600 ರೂ. ಹಾಗೂ 30 ರೂ. ಟಿಕೆಟ್‌ನಿಂದ 1,07,490 ರೂ. ಸೇರಿ ಒಟ್ಟು 7,05,090 ರೂ. ಸಂಗ್ರಹವಾಗಿದೆ. ಅಲ್ಲದೆ ಸಾವಿರಾರು ಜನ ಧರ್ಮ ದರ್ಶನ ಪಡೆದಿದ್ದು, ಒಟ್ಟಾರೆ ಇಂದು 15 ಸಾವಿರಕ್ಕೂ ಹೆಚ್ಚು ಜನ ದೇವಾಲಯಕ್ಕೆ ಆಗಮಿಸಿದ್ದರು ಎಂದು ಚಾಮುಂಡೇಶ್ವರಿ ದೇವಾಲಯದ ಸಿಇಓ ಯತಿರಾಜ್, 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಲಕ್ಷ ರೂ. ಮೀರಿದ ಪಾರ್ಕಿಂಗ್ ಶುಲ್ಕ: 800ರಿಂದ ಸಾವಿರ ವಾಹನಗಳ ನಿಲುಗಡೆ ಸಾಮರ್ಥ್ಯದ ಬಹು ಹಂತದ ಪಾರ್ಕಿಂಗ್ ಸಂಕೀರ್ಣ ಹಾಗೂ ದೇವಿಕೆರೆ ಸಮೀಪ ಖಾಲಿ ಜಾಗದಲ್ಲಿ ವಾಹನಗಳ ಪಾರ್ಕಿಂಗ್ ಮಾಡಲಾಗಿತ್ತು. ದ್ವಿಚಕ್ರ ವಾಹನಕ್ಕೆ 10 ರೂ., ಕಾರುಗಳಿಗೆ 40 ರೂ., ಟೆಂಪೋ ಟ್ರಾವಲರ್‌ಗೆ 60 ರೂ. ಹಾಗೂ ಬಸ್ಸುಗಳಿಗೆ 100 ರೂ. ಪಾರ್ಕಿಂಗ್ ಶುಲ್ಕವಿದ್ದು, ಇಂದು ಸಂಜೆವರೆಗೆ 1,30,930 ರೂ. ಸಂಗ್ರಹವಾಗಿತ್ತು ಎಂದು ಅವರು ಹೇಳಿದರು.

ಭಾನುವಾರ ಬೆಟ್ಟದಲ್ಲಿ ಜನ ಸಾಗರ
- 100 ರೂ. ಟಿಕೆಟ್‌ನಿಂದ 5,97,600 ರೂ.
- 30 ರೂ. ಟಿಕೆಟ್‌ನಿಂದ 1,07,490 ರೂ.
- ವಿಶೇಷ ದರ್ಶನದಿಂದ ಒಟ್ಟು 7,05,090 ರೂ. ಸಂಗ್ರಹ
- ಪಾರ್ಕಿಂಗ್ ಶುಲ್ಕದಿಂದ 1.31 ಲಕ್ಷ ರೂ. ಸಂಗ್ರಹ
- 15 ಸಾವಿರಕ್ಕೂ ಹೆಚ್ಚು ಜನ ದೇವಾಲಯ ಭೇಟಿ

ಸಂಜೆ ವೇಳೆಗೆ ಸಹಜ ಸ್ಥಿತಿ: ಮೈಸೂರಿನ ಇತರೆ ಪ್ರವಾಸಿ ತಾಣಗಳು ಹಾಗೂ ಕೆಆರ್‌ಎಸ್ ಭೇಟಿ ನೀಡುವ ಮುನ್ನವೇ ಪ್ರವಾಸಿಗರು ಚಾಮುಂಡಿಬೆಟ್ಟಕ್ಕೆ ಆಗಮಿಸುತ್ತಾರೆ. ಸ್ಥಳೀಯರು, ಸುತ್ತಮುತ್ತಲ ಜಿಲ್ಲೆಗಳ ಭಕ್ತರೂ ಕೂಡ ಬೆಳಗ್ಗೆಯೇ ದೇವರ ದರ್ಶನಕ್ಕೆ ಬರುತ್ತಾರೆ. ಪರಿಣಾಮ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಹೆಚ್ಚು ಜನ ಹಾಗೂ ವಾಹನ ದಟ್ಟಣೆ ಇರುತ್ತದೆ. ಈ ವೇಳೆ ವಾಹನಗಳನ್ನು ಪಾರ್ಕಿಂಗ್ ಮಾಡುವುದೇ ಕಷ್ಟಸಾಧ್ಯವಾಗುತ್ತದೆ. ಸಂಜೆ ವೇಳೆಗೆ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುವುದರಿಂದ ವಾಹನ ಸಂಚಾರ ಸಹಜ ಸ್ಥಿತಿಯಲ್ಲಿರುತ್ತದೆ. ಆದರೆ ಇಂದು ಸಂಜೆಯೂ ವಾಹನ ದಟ್ಟಣೆ ಕಂಡುಬಂದಿದ್ದು ವಿಶೇಷ ಎಂದು ಸ್ಥಳೀಯರು ತಿಳಿಸಿದರು.

ಕೊರೊನಾ ಕಾರಣದಿಂದ ಎರಡೂವರೆ ವರ್ಷಗಳಿಂದ ದೇವಾಲಯಗಳಿಗೆ ಭಕ್ತರ ಸಂಖ್ಯೆ ಕಡಿಮೆಯಿತ್ತು. ದೇವರ ದರ್ಶನಕ್ಕೂ ನಿರ್ಬಂಧವಿದ್ದ ಕಾರಣದಿಂದ ಪ್ರವಾಸಿಗರು ಹೆಚ್ಚಾಗಿ ಬರುತ್ತಿರಲಿಲ್ಲ. ಸೋಂಕು ಕಡಿಮೆಯಾಗಿ ನಿರ್ಬಂಧ ತೆರವಾಗಿ ದೇವಾಲಯ ಪ್ರವೇಶ ಮುಕ್ತವಾದ ನಂತರ ಹಂತಹಂತವಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಕೆಲವೆಡೆ ಬೇಸಿಗೆ ರಜೆ ಮುಕ್ತಾಯವಾಗಿದ್ದು, ಮತ್ತಷ್ಟು ಕಡೆ ಮುಕ್ತಾಯದ ಹಂತದಲ್ಲಿದೆ. ಹಾಗಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಿದರು.



ರಸ್ತೆ ಬದಿಯಲ್ಲಿ ಕಾರುಗಳನ್ನು ನಿಲ್ಲಿಸಿರುವುದು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ತಾಳಿ ಕಟ್ಟುವ ವೇಳೆ ವಧುವಿನ ಹೈಡ್ರಾಮ

ಮುರಿದು ಬಿದ್ದ ಮದುವೆ, ವರನ ಕುಟುಂಬಕ್ಕೆ ಖರ್ಚು-ವೆಚ್ಚ ನೀಡಲು ವಧು ಮನೆಯವರ ಒಪ್ಪಿಗೆ

ಮೈಸೂರು, ಮೇ 22(ಎಂಟಿವೈ)– ಪ್ರೀತಿಸಿದ ಯುವಕನನ್ನು ವರಿಸುವುದಕ್ಕಾಗಿ ಯುವತಿಯೊಬ್ಬಳು ಮಾಂಗಲ್ಯ ಧಾರಣೆ ವೇಳೆ ಕುಸಿದು ಬಿದ್ದು ಹೈಡ್ರಾಮಾ ಮಾಡಿದ ಘಟನೆ ಮೈಸೂರಿನ ಅಗ್ರಹಾರದ ಕಲ್ಯಾಣ ಮಂಟಪವೊಂದರಲ್ಲಿ ಭಾನುವಾರ ನಡೆದಿದ್ದು, ಕೊನೇ ಘಳಿಗೆಯಲ್ಲಿ ಮದುವೆ ಮುರಿದು ಬಿದ್ದಿದೆ.

ಮೈಸೂರಿನ ಕೆ.ಆರ್.ಮೊಹಲ್ಲಾದ ಬಡಾವಣೆಯೊಂದರ ಯುವತಿಯೊಂದಿಗೆ ಹೆಚ್.ಡಿ.ಕೋಟೆ ಗ್ರಾಮವೊಂದರ ಯುವಕನ ವಿವಾಹ ನಿಶ್ಚಯವಾಗಿತ್ತು. ಎರಡೂ ಕುಟುಂಬದ ಸದಸ್ಯರು ಶನಿವಾರ ಸಂಜೆಯೇ ವಿವಾಹ ನಿಗದಿಯಾಗಿದ್ದ ಕಲ್ಯಾಣ ಮಂಟಪಕ್ಕೆ ಆಗಮಿಸಿದ್ದರು. ಕಳೆದ ರಾತ್ರಿ ವಿವಾಹ ಪೂರ್ವ ಶಾಸ್ತ್ರೋಕ್ತದಲ್ಲಿ ಪಾಲ್ಗೊಂಡಿದ್ದ ಯುವತಿ ಭಾನುವಾರ ಬೆಳಗ್ಗೆಯೂ ಕೆಲವು ಶಾಸ್ತ್ರಗಳಲ್ಲಿ ಪಾಲ್ಗೊಂಡಿದ್ದರು. ಆದರೆ ಮಾಂಗಲ್ಯ ಧಾರಣೆ ವೇಳೆ ಆ ಯುವತಿ ಕುಸಿದು ಬಿದ್ದವಳಂತೆ ನಟಿಸಿದ್ದಾರೆ.

ಕೂಡಲೇ ವಧು–ವರರ ಕಡೆಯವರು ಆಕೆಗೆ ಕುಡಿಯಲು ನೀರು ಕೊಟ್ಟು ಸಂತೈಸುವ ಪ್ರಯತ್ನ ಮಾಡಿದ್ದಾರೆ. ಆದರೆ ಆಕೆ ಕೊನೇ ಘಳಿಗೆಯಲ್ಲಿ ನನಗೆ ಯುವಕ ಇಷ್ಟವಿಲ್ಲ, ಮದುವೆ ಆಗುವುದಿಲ್ಲ, ನಾನು ಯುವಕನೊಬ್ಬನನ್ನು ಇಷ್ಟಪಟ್ಟಿದ್ದೇನೆ. ಮದುವೆಯಾಗುವುದಾದರೆ ಆತನೊಂದಿಗೇ ಆಗುತ್ತೇನೆ ಬಿಗಿಪಟ್ಟು ಎಂದು ಹಿಡಿದಿದ್ದಾಳೆ. ಇದರಿಂದ ಮಂಗಳ ಕಾರ್ಯ ನಡೆಯಬೇಕಾಗಿದ್ದ ಕಲ್ಯಾಣ ಮಂಟಪದಲ್ಲಿ ಗೊಂದಲ ನಿರ್ಮಾಣವಾಗಿದೆ. ಕೆಲವೇ ನಿಮಿಷಗಳಲ್ಲಿ ಯುವಕ–ಯುವತಿಯ ಪೋಷಕರ ನಡುವೆ ಮಾತಿನ ಚಕಮಕಿ ನಡೆದಿದೆ. ಅಲ್ಲದೇ ಮದುವೆಗೆ ಬಂದಿದ್ದವರಿಗೆ ಉಣಬಡಿಸಲು ಸಿದ್ಧಪಡಿಸಿದ ಆಹಾರವೆಲ್ಲಾ ಪೋಲಾಗಿದೆ.

ಮದುವೆ ಮಂಟಪದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿರುವ ವಿಚಾರ ತಿಳಿದು ಸ್ಥಳಕ್ಕೆ ಕೆ.ಆರ್.ಪೊಲೀಸರು ಆಗಮಿಸಿ ಯುವತಿಯನ್ನು ಠಾಣೆಗೆ ಕರೆದೊಯ್ದರು. ಈ ವೇಳೆ ವರನ ಪೋಷಕರು, ನಾವು ಮದುವೆಗಾಗಿ 5 ಲಕ್ಷ ವೆಚ್ಚ ಮಾಡಿದ್ದೇವೆ. ಅದನ್ನು ಹುಡುಗಿಯ ಮನೆಯವರು ಭರಿಸಿಕೊಡಬೇಕು ಎಂದು ಆಗ್ರಹಿಸಿದರು.

ಕೆ.ಆರ್.ಪೊಲೀಸ್ ಠಾಣೆಯಲ್ಲಿ ವರ ಮತ್ತು ವಧುವಿನ ಮನೆಯವರೊಂದಿಗೆ ಸಂಧಾನ ಮಾಡುವ ಪ್ರಯತ್ನ ನಡೆಯಿತು. ಈ ವೇಳೆ ಠಾಣೆಯಲ್ಲಿ ಯುವತಿ ಇದ್ದರೂ, ಆಕೆಯ ಪೋಷಕರು ಮಾತ್ರ ಬರಲಿಲ್ಲ. ಅಂತಿಮವಾಗಿ ಯುವತಿಯ ಸಹೋದರ ಠಾಣೆಗೆ ಬಂದು ವರನ ಕಡೆಯವರು ಮಾಡಿರುವ ಖರ್ಚನ್ನು ಭರಿಸುವುದಾಗಿ ಭರವಸೆ ನೀಡಿ ತನ್ನ ಸಹೋದರಿಯನ್ನು ಆಟೋರಿಕ್ಷಾದಲ್ಲಿ ಕರೆದೊಯ್ದರು. ಬಳಿಕ ಈ ಪ್ರಕರಣ ಸುಖಾಂತ್ಯಗೊಂಡಿತು. ಈ ಸಂಬಂಧ ಎರಡೂ ಮನೆಯವರೂ ದೂರು ನೀಡದೇ ವಾಪಸ್ಸಾಗಿದ್ದಾರೆ. ಈ ನಡುವೆ ವಿವಾಹ ಮುರಿದು ಬಿದ್ದ ಯುವತಿಯು ತನ್ನ ಮನೆಯ ಸಮೀಪದಲ್ಲೇ ಇರುವ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದ ವಿಚಾರವನ್ನು ಬಹಿರಂಗಪಡಿಸಿದ್ದಾಳೆ. ಆ ಯುವಕನೊಂದಿಗೆ ಈ ಯುವತಿಯ ವಿವಾಹ ಮಾಡುವುದಾಗಿ ಯುವತಿಯ ಪೋಷಕರು ಠಾಣೆಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ.

ಸಂಗೀತ ವಿವಿಯಲ್ಲಿ ಅಸಹಿಷ್ಣುತೆ: ಅತಿಥಿ ಉಪನ್ಯಾಸಕಿ ಡಾ.ಚೇತನಾ ರಾಧಾಕೃಷ್ಣ ರಾಜೀನಾಮೆ

ಮೈಸೂರು, ಮೇ 22(ಎಂಕೆ)– ಕರ್ನಾಟಕ ರಾಜ್ಯ ಡಾ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಗುಂಪುಗಾರಿಕೆ, ಅಸಹಿಷ್ಣುತೆ, ಅಸಮಾಧಾನಕರ ವಾತಾವರಣ ನಿರ್ಮಾಣವಾಗಿದ್ದು, ಕರ್ತವ್ಯ ನಿರ್ವಹಣೆಗೆ ಪ್ರೋತ್ಸಾಹವೇ ಇಲ್ಲದಂತಾಗಿದೆ ಎಂದು ಸಂಗೀತ ವಿವಿಯ ಭರತನಾಟ್ಯ ವಿಭಾಗದ ಪೂರ್ಣಕಾಲಿಕ ಅತಿಥಿ ಉಪನ್ಯಾಸಕಿ ಡಾ.ಚೇತನಾರಾಧಾಕೃಷ್ಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಸಂಗೀತ ವಿವಿಯಲ್ಲಿ ಅಭದ್ರತೆಯ ಪರಿಸ್ಥಿತಿ ಉಂಟಾಗಿದ್ದು, ಮಾನಸಿಕ ಹಿಂಸೆಯ ವಾತಾವರಣ ಕಂಡು ಬಂದಿದೆ. ಅನೇಕ ವರ್ಷಗಳಿಂದ ವಿವಿಯಲ್ಲಿ ಕೆಲಸ ಮಾಡುತ್ತಿದ್ದ ಬೋಧಕೇತರ ಸಿಬ್ಬಂದಿಗಳಿಗೆ ಕಳೆದೊಂದು ವರ್ಷದಿಂದ ಸಂಬಳವಾಗಿಲ್ಲ. ಅರ್ಹತೆ ಇರುವ ಹಾಗೂ ಇಲ್ಲದಿರುವ ಬೋಧಕ ಸಿಬ್ಬಂದಿಗಳನ್ನು ಪರಿಗಣಿಸುವ ರೀತಿಯೇ ಬೇರೆ ಬೇರೆಯಾಗಿದೆ. ಗುಂಪುಗಾರಿಕೆ ಹೆಚ್ಚಾಗಿದ್ದು, ನೈತಿಕ ಬೆಂಬಲ ನೀಡುವವರೇ ಇಲ್ಲದಂತಾಗಿದ್ದಾರೆ. ಬೋಧಕೇತರ ಸಿಬ್ಬಂದಿ ಇಲ್ಲದಿರುವುದರಿಂದ ಅವರ ಕೆಲಸಗಳನ್ನು ನಾವೇ ಮಾಡುವಂತಾಗಿದೆ. ನಾವು ಮಾಡಿದ ಕೆಲಸಗಳಿಗೆ ಯಾವುದೇ ದಾಖಲೆಗಳು ಇಲ್ಲದಂತೆ ಮಾಡಿದ್ದು, ಅನೇಕ ತಿಂಗಳುಗಳಿಂದ ಹಾಜರಾತಿಯ ಪುಸ್ತಕವನ್ನೇ ಇಡುತ್ತಿಲ್ಲ. ಸಂಗೀತ ವಿವಿಯು ಅನೇಕ ಪ್ರತಿಭಾವಂತ ಕಲಾವಿದರಿಗೆ ಶ್ರೇಯಸ್ಸು ತರುವ ಸ್ಥಳವೆಂದು ತಿಳಿದಿದ್ದೆ. ಆದರೆ ಕೆಟ್ಟ ದಾರಿಯಲ್ಲಿ ನಡೆಯುತ್ತಿರುವ ಈ ವಿಶ್ವ ವಿದ್ಯಾನಿಲಯಕ್ಕೆ ಹೆಚ್ಚು ಆಯಸ್ಸು ಕೂಡ ಇರುವುದಿಲ್ಲ. ವಿವಿಯ ಎಲ್ಲಾ ಬೆಳವಣಿಗೆಗಳಿಂದ ಮನನೊಂದು ರಾಜೀನಾಮೆ ನೀಡುತ್ತಿದ್ದೇನೆ ಎಂದು ಡಾ.ಚೇತನಾರಾಧಾಕೃಷ್ಣ ತಮ್ಮ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಚೇತನ್‌ಕುಮಾರ್‌ಗೆ 625ಕ್ಕೆ 622 ಅಂಕ



ಮೈಸೂರು, ಮೇ 22– ಮಳವಳ್ಳಿ ಪಟ್ಟಣದ ರೋಟರಿ ಶಾಲೆಯ ವಿದ್ಯಾರ್ಥಿ ಚೇತನ್‌ಕುಮಾರ್ ಕೆ. ಅವರು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 622 ಅಂಕಗಳನ್ನು ಗಳಿಸಿ ಶಾಲೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಕನ್ನಡದಲ್ಲಿ 124, ಇಂಗ್ಲಿಷ್‌ನಲ್ಲಿ 100, ಹಿಂದಿ–100, ಗಣಿತ–100, ವಿಜ್ಞಾನ–98, ಸಮಾಜ ವಿಜ್ಞಾನದಲ್ಲಿ 100 ಅಂಕಗಳನ್ನು ಗಳಿಸಿ ಈ ಸಾಧನೆ ಮಾಡಿದ್ದಾರೆ. ಚೇತನ್ ಕುಮಾರ್ ಖಾಸಗಿ ಕಂಪನಿ ಉದ್ಯೋಗಿ ಕೆಂಪರಾಜ್ ಎನ್.ಪಿ. ಹಾಗೂ ಗೃಹಿಣಿ ರೂಪ ಅವರ ಪುತ್ರ. ಶಾಲಾ ಆಡಳಿತ ಮಂಡಳಿ ಈತನನ್ನು ಅಭಿನಂದಿಸಿದೆ.

ನಾಗಮಂಗಲ ಬಳಿ ಕ್ವಾರಿಗೆ ಜಾಗ ನೀಡದ ರೈತನ ಅಪಹರಿಸಿ ಹತ್ಯೆಗೈದು ಹೂತಿದ್ದ ಪ್ರಕರಣ

ಪಿಎಸ್‌ಐ ಶ್ರೀಧರ್ ಅಮಾನತಿಗೆ ಆಗ್ರಹಿಸಿ ಶವವನ್ನಿಟ್ಟುಕೊಂಡು ಪ್ರತಿಭಟನೆ

- ಗಣಿಗಾರಿಕೆ ಮುಂದೆ ಉದ್ವಿಗ್ನ ಪರಿಸ್ಥಿತಿ
- ನ್ಯಾಯಕ್ಕಾಗಿ ಪಟ್ಟು ಹಿಡಿದ ಗ್ರಾಮಸ್ಥರು, ಕುಟುಂಬಸ್ಥರು
- ಪೊಲೀಸ್ ಅಧಿಕಾರಿ ಮೇಲೆ ತಿರುಗಿಬಿದ್ದರು
- ಎರಡು ದಿನಗಳಲ್ಲಿ ಪಿಎಸ್‌ಐ ಅಮಾನತು: ಅಡಿಷನಲ್ ಎಸ್‌ಪಿ ಭರವಸೆಗೆ ಮಣಿದು ಅಂತ್ಯಸಂಸ್ಕಾರ ನೆರವೇರಿಸಿದ ಗ್ರಾಮಸ್ಥರು


ಶವದ ಮುಂದೆ ದಲಿತ ಸಂಘರ್ಷ ಸಮಿತಿ ಮತ್ತು ಕುಟುಂಬಸ್ಥರ ಪ್ರತಿಭಟನೆ.


ಶಾಸಕ ಸುರೇಶ್ ಗೌಡರಿಂದ ಪೊಲೀಸ್ ಅಧಿಕಾರಗಳಿಗೆ ತರಾಟೆ.


ಚೆಲುವರಾಯ ಸ್ವಾಮಿ ಬಳಿ ನ್ಯಾಯ ಕೇಳುತ್ತಿರುವ ಮೋಹನ್ ತಾಯಿ.


ಕ್ವಾರಿಯ ಸುತ್ತ ಹಾಕಿದ್ದ ತಡೆಗೋಡೆಯನ್ನು ತೆರವುಗೊಳಿಸುತ್ತಿರುವುದು.

ನಾಗಮಂಗಲ, ಮೇ 22(ಮಹೇಶ್)– ಪೊಲೀಸರ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಕ್ವಾರಿಗೆ ಜಾಗ ನೀಡದ ರೈತ ಎನ್.ಆರ್.ಮೋಹನ್ ಅವರ ಕೊಲೆಯಾಗಿದ್ದು, ಇದಕ್ಕೆ ಕಾರಣರಾದ ಸಬ್ ಇನ್ಸ್‌ಪೆಕ್ಟರ್ ಶ್ರೀಧರ್ ಅವರನ್ನು ಅಮಾನತುಪಡಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಮತ್ತು ಕುಟುಂಬಸ್ಥರು ಮೃತ ದೇಹವನ್ನಿಟ್ಟುಕೊಂಡು ಪ್ರತಿಭಟನೆ ನಡೆಸಿದ ಘಟನೆ ಇಂದು ನಾಗಮಂಗಲ ತಾಲೂಕು ಕೆಂಚಗೋನಹಳ್ಳಿ ಬಳಿ ಸಂಭವಿಸಿದೆ.

ಗಣಿಗಾರಿಕೆಗೆ ಭೂಮಿ ನೀಡದ ನರಗಲು ಗ್ರಾಮದ ರೈತ ಎನ್.ಆರ್.ಮೋಹನ್‌ನನ್ನು ಅಪಹರಿಸಿ ಕೊಲೆ ಮಾಡಲಾಗಿತ್ತು. ಶನಿವಾರ ಸಂಜೆ ಮರಣೋತ್ತರ ಪರೀಕ್ಷೆಯ ನಂತರ ಕುಟುಂಬಸ್ಥರಿಗೆ ಮೃತದೇಹವನ್ನು ಪೊಲೀಸರು ಹಸ್ತಾಂತರಿಸಿದ್ದರು. ಕುಟುಂಬಸ್ಥರು ಶವವನ್ನು ಆರೋಪಿಗಳು ನಡೆಸುತ್ತಿದ್ದ ಕೆಂಚಗೋನಹಳ್ಳಿ ಬಳಿಯ ಕ್ವಾರಿಯ ಹತ್ತಿರ ತಂದು ಸಬ್‌ಇನ್ಸ್‌ಪೆಕ್ಟರ್ ಶ್ರೀಧರ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾರಂಭಿಸಿದರು.

ವಿಷಯ ತಿಳಿದ ನರಗಲು ಮತ್ತು ಸುತ್ತ–ಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಕೆಂಚಗೋನಹಳ್ಳಿ ಬಳಿ ಜಮಾಯಿಸಿ ಅಂತಿಮ ದರ್ಶನ ಪಡೆದರು. ತಕ್ಷಣ ಪರಿಸ್ಥಿತಿಯನ್ನು ಅರಿತ ಪೊಲೀಸ್ ಅಧಿಕಾರಿಗಳು ಕೆಂಚಗೋನಹಳ್ಳಿ ಬಳಿ ಮತ್ತು ಮೃತನ ಊರಾದ ನರಗಲು ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ರಾತ್ರಿಯಾದ್ದರಿಂದ ಸುಮ್ಮನಿದ್ದ ಕುಟುಂಬಸ್ಥರು ಮತ್ತು ಗ್ರಾಮಸ್ಥರು ಬೆಳಗ್ಗೆಯಾಗುತ್ತಿದ್ದಂತೆ ಕ್ವಾರಿಯ ಬಳಿ ಸಬ್ ಇನ್ಸ್‌ಪೆಕ್ಟರ್ ಶ್ರೀಧರ್ ಅಮಾನತುಗೊಳಿಸುವವರೆಗೂ ಶವ ಸಂಸ್ಕಾರ ನಡೆಸುವುದಿಲ್ಲ ಎಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಲಾರಂಭಿಸಿದರು. ಬಿಗಿ ಭದ್ರತೆಯಲ್ಲಿ ನಿರತರಾಗಿದ್ದ ಪೊಲೀಸರು ಮನವೊಲಿಸಲು ಮುಂದಾದಾಗ ಅವರ ಮೇಲೂ ತಿರುಗಿಬಿದ್ದರು. ಇದರಿಂದ ಸ್ಥಳದಲ್ಲಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಿತ್ತು.

ವಿಷಯ ತಿಳಿದು ಸ್ಥಳಕ್ಕೆ ಬಂದ ಶಾಸಕ ಸುರೇಶ್ ಗೌಡರು ಬಂದೋಬಸ್ತ್‌ನಲ್ಲಿದ್ದ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಆರೋಪಿಗಳಿಂದ ಬಿಂಡಿಗನವಿಲೆ ಠಾಣೆಗೆ ಹತ್ತು ಟಿವಿಗಳನ್ನು ಪಡೆದಿರುವ ಬಗ್ಗೆ ದಾಖಲೆಯಿದೆ ಮೃತನ ಪತ್ನಿ ಯಮುನಾ ವಿಷಯ ತಿಳಿಸಿದರೂ, ನೀವು ಕ್ರಮ ಜರುಗಿಸದೆ ನಿರ್ಲಕ್ಷ್ಯ ವಹಿಸಿ ಅಮಾಯಕನ ಸಾವಿಗೆ ಕಾರಣರಾಗಿದ್ದೀರಿ. ಆರೋಪಿಗಳನ್ನು ಬಂಧಿಸಿದ ಮೇಲೂ ಸೆಕ್ಷನ್‌ಗಳನ್ನು ಹಾಕುವುದರಲ್ಲೂ ತಾರತಮ್ಯ ತೋರಿದ್ದೀರಿ. ಕೊಲೆ ಮಾಡಿಸಲು ಕಾರಣನಾದವನ ಮೇಲೆ ಸಲೀಸಾಗಿ ಜಾಮೀನು ಪಡೆದು ಹೊರ ಬರುವಂತೆ ಎಫ್‌ಐಆರ್ ಹಾಕಿದ್ದೀರಿ. ನೀವು ಸಹ ಈ ಕೊಲೆಯಲ್ಲಿ ಶಾಮೀಲಾಗಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

ಪಿಎಸ್‌ಐ ಶ್ರೀಧರ್‌ನನ್ನು ಅಮಾನತು ಮಾಡುವ ತನಕ ಅಂತ್ಯಕ್ರಿಯೆ ಮಾಡಲು ಜನ ಬಿಡುವುದಿಲ್ಲವೆಂದು ಪಟ್ಟು ಹಿಡಿದಿದ್ದಾರೆ ಎಂದು ತೀವ್ರ ತರಾಟೆಗೆ ತೆಗೆದುಕೊಂಡರು. ಅಲ್ಲಿದ್ದ ಸಾವಿರಾರು ಜನ ಸಹ ಅವರ ಮಾತಿಗೆ ದನಿಗೂಡಿಸಿದರು. ಈ ವೇಳೆ ಏನೋ ಹೇಳಲು ಮುಂದಾದ ಕೆ.ಆರ್.ಪೇಟೆಯ ಪೊಲೀಸ್ ಅಧಿಕಾರಿ ದೀಪಕ್ ಅವರನ್ನು ತರಾಟೆಗೆ ತೆಗೆದುಕೊಂಡು ಅವರ ಮೇಲೆ ಮುಗಿಬೀಳುತ್ತಿದ್ದಂತೆ ಕೆಲವರು ಎಲ್ಲರನ್ನೂ ಸಮಾಧಾನಪಡಿಸಿ ದೀಪಕ್ ಅವರನ್ನು ಬೇರೆಡೆಗೆ ಕರೆದುಕೊಂಡು ಹೋದರು. ನಂತರ ಶಾಸಕರು ಅಲ್ಲಿಂದ ತೆರಳಿದರು.

ಒಂದು ಹಂತದಲ್ಲಿ ಶಾಸಕ ಸುರೇಶ್ ಗೌಡರು ಬಂದಿರುವ ವಿಷಯ ತಿಳಿದ ಗ್ರಾಮಸ್ಥರು ಕ್ವಾರಿ ಸುತ್ತ ಹಾಕಿರುವ ಕಲ್ನಾರ್ ಷೀಟ್‌ಗಳನ್ನು ಕಿತ್ತುಹಾಕಲು ಮುಂದಾದರು. ವಿಷಯ ತಿಳಿಯುತ್ತಿದ್ದಂತೆ ತಾಲೂಕು ದಂಡಾಧಿಕಾರಿ ನಂದೀಶ್ ಆಗಮಿಸಿ ಜೆಸಿಬಿಯೊಂದನ್ನು ತರಿಸಿ ಸುತ್ತಲೂ ಹಾಕಿದ್ದ ಕಲ್ನಾರು ಶೀಟ್‌ಗಳನ್ನು ನೆಲಸಮ ಮಾಡಿಸಿದರು.

ಕುಮಾರ ಎಲ್ಲಿದ್ದಾನೆಂದು ಗೊತ್ತು: ಸುಮಾರು 12 ಗಂಟೆ ಹೊತ್ತಿಗೆ ಮಾಜಿ ಶಾಸಕ ಚೆಲುವರಾಯಸ್ವಾಮಿ ಯುವ ಮುಖಂಡ ವಿನಯ್ ಮತ್ತು ಬೆಂಬಲಿಗರೊಂದಿಗೆ ಮೋಹನ್ ಅವರ ದರ್ಶನ ಪಡೆದರು. ಈ ವೇಳೆ ಮೋಹನ್ ತಾಯಿ ಓಡಿ ಬಂದು ಅವರ ಕೈಹಿಡಿದುಕೊಂಡು ಕುಮಾರ (ಗಣಿಗಾರಿಕೆಗೆ ಜಮೀನು ನೀಡಿದ್ದ ವ್ಯಕ್ತಿ) ಎಲ್ಲಿದ್ದಾನೆಂದು ನಿಮಗೆ ಗೊತ್ತು, ನೀವು ಹೇಳಿದರೆ ಈಗಲೇ ಬರುತ್ತಾನೆ. ಅವನು ನಿಮ್ಮ ಕಡೆಯವನು ಎಂದು ನೇರವಾಗಿ ಆಪಾದಿಸಿದರು.

ಈ ಮಾತಿನಿಂದ ತಬ್ಬಿಬ್ಬಾದ ಚೆಲುವರಾಯ ಸ್ವಾಮಿ 'ನಾನು ಕೊಲೆ ಮಾಡು ಅಂತಾ ಹೇಳಿದ್ನಾ' ಅಂತ ಹೇಳಿ ಅವರಿಂದ ಬಿಡಿಸಿಕೊಂಡು ಹೋಗುವ ಪ್ರಯತ್ನ ಮಾಡಿದರು. ಕೊನೆಗೆ ಜಿಲ್ಲಾಧಿಕಾರಿಯನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಅನಧಿಕೃತ ಕ್ವಾರಿಯಲ್ಲಿ ಶಾಮೀಲಾಗಿರುವ ರಾಜಸ್ವ ನಿರೀಕ್ಷಕ ಮತ್ತು ಗ್ರಾಮಲೆಕ್ಕಿಗರ ಮೇಲೆ ಶಿಸ್ತು ಕ್ರಮ ಜರುಗಿಸಬೇಕೆಂದು ಒತ್ತಾಯ ಮಾಡಿ ಅಲ್ಲಿಂದ ತೆರಳಿದರು.

ಈ ಮಧ್ಯೆ ಏಕಾಏಕಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ಗ್ರಾಮಸ್ಥರೊಂದಿಗೆ ಮೋಹನನ ಶವದ ಮುಂದೆ ಕುಳಿತು ಧರಣಿ ನಡೆಸಲಾರಂಭಿಸಿದರು. ಪೊಲೀಸರು ಕೊಲೆ ಮಾಡಿದ ಎಲ್ಲ ಆರೋಪಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿದರು. ಮೋಹನ್ ತಾಯಿ ನನಗೆ ನ್ಯಾಯ ಕೊಡಿಸಿ ಎಂದು ಗೋಳಾಡಲಾರಂಭಿಸಿದರು.

ಮಧ್ಯಾಹ್ನ 3 ಘಂಟೆಯ ಹೊತ್ತಿಗೆ ಶಾಸಕ ಸುರೇಶ್‌ಗೌಡ ಅಡಿಷನಲ್ ಎಸ್‌ಪಿ ವೇಣುಗೋಪಾಲ್ ಅವರೊಂದಿಗೆ ಸ್ಥಳಕ್ಕೆ ಆಗಮಿಸುತ್ತಿದ್ದಂತೆ ಕುಟುಂಬಸ್ಥರು ಅವರನ್ನು ಸುತ್ತುವರೆದು ಮುಂದೆ ಏನು ಮಾಡಬೇಕೆಂದು ಪ್ರಶ್ನಿಸಿದರು. ಈ ವೇಳೆ ಅಡಿಷನಲ್ ಎಸ್ಪಿ ಮಾತಾಡಿ, ಇನ್ನು ಎರಡು ದಿನಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ಶ್ರೀಧರ್ ಅವರನ್ನು ಅಮಾನತುಪಡಿಸುವುದಾಗಿ ಭರವಸೆ ನೀಡಿದರು.

ಇನ್ನು ಎರಡು ದಿನದಲ್ಲಿ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಮಂಡ್ಯದ ಎಸ್‌ಪಿ ಕಚೇರಿಯ ಮುಂದೆ ಮೋಹನ್ ಕುಟುಂಬದೊಂದಿಗೆ ಧರಣಿ ಕೂರಬೇಕಾದ ಪ್ರಸಂಗ ಬರುತ್ತದೆಂದು ಗ್ರಾಮಸ್ಥರು ಎಚ್ಚರಿಕೆ ನೀಡಿ, ಅಡಿಷನಲ್ ಎಸ್ಪಿ ಅವರು ಕೊಟ್ಟ ಭರವಸೆ ಮೇರೆಗೆ ಶವಸಂಸ್ಕಾರ ಮಾಡಲು ಒಪ್ಪಿಕೊಂಡರು. ನಂತರ ಶಾಸ್ತ್ರಬದ್ಧವಾಗಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಈ ವೇಳೆ ಮೋಹನನ ಪತ್ನಿ ಮತ್ತು ಆತನ ತಾಯಿಯವರ ರೋಧನ ಮುಗಿಲು ಮುಟ್ಟಿತ್ತು. ಅವರ ಪಕ್ಕದಲ್ಲೇ ಇದ್ದ ಏನೂ ಅರಿಯದ ಮುಗ್ಧ ಕಂದಮ್ಮಗಳು ತಮಗೆ ಅರಿವಿಲ್ಲದಂತೆ ತಮ್ಮದೇ ಆದ ಲೋಕದಲ್ಲಿ ಮುಳುಗಿದ್ದು ಕಂಡು, ಸಾರ್ವಜನಿಕರು ಮಮ್ಮಲ ಮರುಗಿದರು.

ಆರೋಪಿಯ ಮನೆಯ ಪಕ್ಕದಲ್ಲೇ ಸಂಸ್ಕಾರ

ನರಗಲು ಗ್ರಾಮದ ಮೋಹನ್ ಕುಟುಂಬಸ್ಥರು ಮತ್ತು ಆತನ ಸ್ನೇಹಿತರು ಆರೋಪಿಯ ಮನೆಯ ಪಕ್ಕದಲ್ಲಿಯೇ ಮೋಹನನ ಸಂಸ್ಕಾರ ನೆರವೇರಿಸಿದರು.

ಸಂಜೆ ಎಂಟು ಗಂಟೆಯಾದರೂ ಆತನ ಮನೆಯ ಪಕ್ಕದಲ್ಲಿಯೇ ಬೆಂಕಿ ಇನ್ನೂ ಉರಿಯುತ್ತಿತ್ತು.

ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹುಟ್ಟುಹಬ್ಬ ಆಚರಣೆ



ಶ್ರೀರಂಗಪಟ್ಟಣ, ಮೇ 22(ವಿನಯ್ ಕಾರೇಕುರ)– ಶ್ರೀರಂಗಪಟ್ಟಣ ಕ್ಷೇತ್ರದ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರ 55ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಬೆಂಬಲಿಗರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು. ಪುರಸಭಾ ಸದಸ್ಯ ಎಂ.ಎಲ್. ದಿನೇಶ್ ನೇತೃತ್ವದಲ್ಲಿ ಪಟ್ಟಣ ಹಾಗೂ ತಾಲೂಕಿನ ವಿವಿಧ ಕಾಂಗ್ರೆಸ್‌ನ ಯುವ ಮುಖಂಡರು ಭಾಗವಹಿಸಿ ರೋಗಿಗಳಿಗೆ ಹಣ್ಣು ವಿತರಣೆ ಮಾಡಿದರು. ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರ ಹುಟ್ಟುಹಬ್ಬದ ಶುಭಾಶಯಗಳ ಹೇಳಲು ತವರು ಗ್ರಾಮ ಅರಕೆರೆ ಮನೆ ಬಳಿ ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಹಿತೈಷಿಗಳು ಹಾಗೂ ಅಭಿಮಾನಿಗಳು ಜಮಾಯಿಸಿದ್ದರಿಂದ ಮನೆ ಮುಂದಿನ ಆವರಣ ತುಂಬಿ ತುಳುಕುತ್ತಿತ್ತು. ನೂಕುನುಗ್ಗಲುಗಳ ನಡುವೆ ಅಭಿಮಾನಿಗಳು ಹಾರ ತುರಾಯಿ ಹಾಕಿ ಮಾಜಿ ಶಾಸಕರಿಗೆ ಶುಭಾಶಯ ಹೇಳಿದರು. ಪುರಸಭಾ ಸದಸ್ಯ ದಯಾನಂದ, ಮಾಜಿ ಅಧ್ಯಕ್ಷ ಎಲ್.ನಾಗರಾಜು, ಮಾಜಿ ಉಪಾಧ್ಯಕ್ಷ ವೆಂಕಟಸ್ವಾಮಿ, ಮಾಜಿ ಸದಸ್ಯರಾದ ಟಿ.ಕೃಷ್ಣ, ರಾಜೇಶ್ವರಿ ಭಾಸ್ಕರ್, ಕೃಷಿ ಪತ್ತಿನ ಮಾಜಿ ಅಧ್ಯಕ್ಷ ವೈ.ಶ್ರೀಕಂಠು, ಎಂ.ಲೋಕೇಶ್, ಕಸಾಪ ಖಜಾಂಚಿ ಕೆ.ಬಿ. ಬಸವರಾಜು, ಯುವ ಮುಖಂಡರಾದ ಗುಣಶೇಖರ್, ಜೈಕುಮಾರ್, ಗಂಜಾಂ ಬಾಲು, ಪೂರ್ಣಚಂದ್ರ, ಕಾಬೂಲ್, ಮಹೇಶ್ ಸೇರಿದಂತೆ ಇನ್ನಿತರರಿದ್ದರು.


ಮೈಸೂರಿಗೆ ಬೇಟಿ ನೀಡಿದ್ದ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಬಲಮುರಿ ಪ್ರವಾಸಿ ತಾಣಕ್ಕೆ ತಮ್ಮ ಕುಟುಂಬದೊಂದಿಗೆ ತೆರಳಿ ಬಲಮರಿ ಫಾಲ್ಸ್ ವೀಕ್ಷಿಸಿದರು.

ಹಳ್ಳಕ್ಕೆ ಗೂಡ್ ವಾಹನ ಉರುಳಿ ಚಾಲಕ ಸಾವು

ಶ್ರೀರಂಗಪಟ್ಟಣ, ಮೇ 22(ವಿನಯ್ ಕಾರೇಕುರ)– ಗೂಡ್ಸ್ ವಾಹನ ನಿಯಂತ್ರಣ ತಪ್ಪಿ ಹೆದ್ದಾರಿ ಬದಿಯ ಹಳ್ಳಕ್ಕೆ ಉರುಳಿದ ಪರಿಣಾಮ ಚಾಲಕ ಸ್ಥಳದಲ್ಲೆ ಸಾವನ್ನಪ್ಪಿದ ಘಟನೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮಹಾರಾಷ್ಟ್ರ ಮೂಲದ ಸತಾರ ಗ್ರಾಮದ ಭಗವಾನ್ ನಾರಾಯಣ ಬೋಸ್ಲೆ(47) ಮೃತಪಟ್ಟವರಾಗಿದ್ದಾರೆ. ಮೈಸೂರಿನಿಂದ ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ ಗೂಡ್ಸ್ ಟೆಂಪೋ ತಾಲೂಕಿನ ಕೆ. ಶೆಟ್ಟಹಳ್ಳಿ ಬಳಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ಉರುಳಿದಾಗ ಈ ದುರಂತ ಜರುಗಿದೆ.


ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ರಮೇಶ್ ಬಂಡಿಸಿದ್ದೇಗೌಡ ದಂಪತಿ ಹಾಗೂ ಅವರ ತಾಯಿಯನ್ನು ಅಭಿನಂದಿಸಿದರು.


ಮೈಸೂರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬೋಗಾದಿ ಗ್ರಾಮ ಹಾಗೂ ಸುತ್ತಮುತ್ತಲ ಬಡಾವಣೆಗಳ ಪದವೀಧರರ ಮನೆಗಳಿಗೆ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಾಂತರ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡ ಅರುಣ್ ಕುಮಾರ್ ಗೌಡ, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ರವಿ, ಬೋಗಾದಿ ಗ್ರಾಪಂ ಮಾಜಿ ಅಧ್ಯಕ್ಷ ಹಾಲಿನ ಪುಟ್ಟೇಗೌಡ, ಈರಪ್ಪ, ಗೋಪಾಲ ಗೌಡ, ಗ್ಯಾರೇಜ್ ಪುಟ್ಟು, ಪವನ್ ಕುಮಾರ್‌ಗೌಡ, ಭಾಗ್ಯಶ್ರೀ ಭಟ್, ಎಪಿಎಂಸಿ ಸದಸ್ಯ ಮರಿಸ್ವಾಮಿ ನಾಯಕ ಮತ್ತಿತರರು ಭೇಟಿ ನೀಡಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಮತಯಾಚಿಸಿದರು.

ವಿಶ್ವನಾಥ್ ಇಡೀ ವಿಶ್ವಕ್ಕೆ ಸಲಹೆ ನೀಡುತ್ತಾರೆ

- ತಮ್ಮ ಮೇಲಿನ ಟೀಕೆಗೆ ಉಸ್ತುವಾರಿ ಸಚಿವ ಸೋಮಶೇಖರ್ ತಿರುಗೇಟು
- ಪ್ರಧಾನಿ ಮೈಸೂರಿಗೆ ಆಗಮನ: ಶೀಘ್ರದಲ್ಲೇ ಅಧಿಕಾರಿಗಳ ತಂಡ ಭೇಟಿ

ಮೈಸೂರು, ಮೇ 22(ಎಸ್‌ಬಿಡಿ)– ವಿಶ್ವನಾಥ್ ಅವರು ನನಗೆ ಮಾತ್ರವಲ್ಲ, ಇಡೀ ದೇಶ ಹಾಗೂ ಪ್ರಪಂಚಕ್ಕೇ ಸಲಹೆ ನೀಡುತ್ತಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರಿಗೆ ತಿರುಗೇಟು ನೀಡಿದರು.

ಮಳೆ ಅನಾಹುತದ ಬಗ್ಗೆ ವೀಕ್ಷಣೆ ನಡೆಸದೆ ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲಿ ಹೋದರು? ಎಂಬ ವಿಶ್ವನಾಥ್ ಅವರ ಹೇಳಿಕೆಗೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ಭಾನುವಾರ ಪ್ರತಿಕ್ರಿಯಿಸಿದ ಸಚಿವ ಎಸ್.ಟಿ. ಸೋಮಶೇಖರ್, ವಿಶ್ವನಾಥ್ ಅವರು ಸೋಮಶೇಖರ್ ಒಬ್ಬರಿಗೇ ಅಲ್ಲ, ಭಾರತ ಹಾಗೂ ಇಡೀ ವಿಶ್ವಕ್ಕೆ ಸಲಹೆ ನೀಡುತ್ತಿದ್ದಾರೆ. ಅವರ ಸಲಹೆಗಳನ್ನು ನಾನು ಹೃದಯ ಪೂರ್ವಕವಾಗಿ ಸ್ವೀಕರಿಸುತ್ತೇನೆ. ಆದರೆ ಅವರು ಜಿಲ್ಲಾ ಉಸ್ತುವಾರಿ ಆಗಿದ್ದಾಗ ಎಷ್ಟು ಬಾರಿ ಜಿಲ್ಲಾ ಪ್ರವಾಸ ಮಾಡಿದ್ದರೋ ನನಗೆ ಗೊತ್ತಿಲ್ಲ. ಆದರೆ ಎಷ್ಟು ಬಾರಿ ಮೈಸೂರು ನಗರ ಹಾಗೂ ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ, ಎಷ್ಟು ಸರ್ಕಾರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ ಎಂಬ ಮಾಹಿತಿ ಪಡೆದುಕೊಳ್ಳಲಿ. ನನ್ನಷ್ಟು ಉಸ್ತುವಾರಿ ಸಚಿವರೂ ಜಿಲ್ಲಾ ಪ್ರವಾಸ ಮಾಡಿಲ್ಲ ಎಂದು ತಿಳಿಸಿದರು.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮೈಸೂರಿನ ಉಸ್ತುವಾರಿ ಸಚಿವನಾಗಿ ಯಾವೊಂದು ಸರ್ಕಾರಿ ಸಭೆ ನಡೆಸುವಂತಿಲ್ಲ. ಮಳೆಯಿಂದ ಅನಾಹುತವಾದ ಸ್ಥಳಕ್ಕೆ ಭೇಟಿ ನೀಡುವುದಕ್ಕೂ ಚುನಾವಣಾ ಆಯೋಗ ಅನುಮತಿ ನೀಡಿಲ್ಲ. ಸಂಸದರಾಗಿ, ಶಾಸಕರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಪಾರ ಅನುಭವ ಹೊಂದಿರುವ ವಿಶ್ವನಾಥ್ ಅವರಿಗೆ ಈ ಬಗ್ಗೆ ಮಾಹಿತಿ ಇರುತ್ತದೆ. ಜಿಲ್ಲಾಧಿಕಾರಿಗಳು ಮಳೆಯಿಂದ ಹಾನಿಯಾಗಿರುವ ಬಗ್ಗೆ ಪರಿಶೀಲನೆ ನಡೆಸಿ, ಶೀಘ್ರ ಪರಿಹಾರ ವಿತರಣೆಗೆ ಕ್ರಮ ವಹಿಸಿದ್ದಾರೆ. ಮುಖ್ಯಮಂತ್ರಿಗಳು ನಿನ್ನೆ ವರ್ಚುವಲ್ ಮೂಲಕ ಮೈಸೂರು ಜಿಲ್ಲಾಧಿಕಾರಿಗಳಿಂದ ಮಳೆ ಹಾನಿ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು, 48 ಗಂಟೆಯಲ್ಲಿ ಪರಿಹಾರ ಕಲ್ಪಿಸುವಂತೆ ಸೂಚನೆ ನೀಡಿದ್ದಾರೆ. ಅತೀ ಹೆಚ್ಚು ಹಾನಿಯಾಗಿರುವ 2 ತಾಲೂಕುಗಳಲ್ಲಿ ತುರ್ತು ಕ್ರಮ ವಹಿಸುವಂತೆ ತಿಳಿಸಿದ್ದಾರೆ ಎಂದರು.

ಸಂಸದ ಪ್ರತಾಪ್ ಸಿಂಹ ಅವರ ಕೋರಿಕೆಯನ್ನು ಮನ್ನಿಸಿ ಪ್ರಧಾನಿ ಮೋದಿ ಅವರು ಜೂ.21ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೈಸೂರಿಗೆ ಆಗಮಿಸುತ್ತಿದ್ದಾರೆ. ರಾಜ್ಯ ಹಾಗೂ ಕೇಂದ್ರದ ಅಧಿಕಾರಿಗಳು ಸದ್ಯದಲ್ಲೇ ಮೈಸೂರಿಗೆ ಆಗಮಿಸಿ, ಪೂರ್ವ ಸಿದ್ಧತೆಯನ್ನು ಪರಿಶೀಲಿಸಲಿದ್ದಾರೆ. ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಹಾಗೂ ನಾನು ಈಗಾಗಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಮೈಸೂರಿಗೆ ವಿಶೇಷ ಅನುದಾನ ಕೇಳಿದ್ದೇವೆ. ಸ್ವಿಡ್ಜರ್‌ಲ್ಯಾಂಡ್‌ನ ದಾವೂಸ್‌ನಲ್ಲಿ ನಡೆಯುವ ವಿಶ್ವ ಆರ್ಥಿಕ ವೇದಿಕೆ ಶೃಂಗಸಭೆಯಿಂದ ವಾಪಸ್ಸಾದ ಬಳಿಕ ಮತ್ತೆ ಭೇಟಿ ಮಾಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಮೈಸೂರಿನ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಅನುದಾನಕ್ಕೆ ಒತ್ತಾಯಿಸುತ್ತೇವೆ ಎಂದು ಸಚಿವರು ತಿಳಿಸಿದರು.

ಸಿ.ಆರ್.ಶೀಟ್ ಸರಬರಾಜು ಮಾಡುವುದಾಗಿ 8 ಲಕ್ಷ ಪಡೆದು ವಂಚನೆ: ವ್ಯಕ್ತಿ ವಿರುದ್ಧ ಕೇಸ್

ಮೈಸೂರು, ಮೇ 19–ಸಿ.ಆರ್.ಶೀಟ್‌ಗಳನ್ನು ಸರಬರಾಜು ಮಾಡುವುದಾಗಿ ಹೇಳಿ, ಹಾರ್ಡ್‌ವೇರ್ ಅಂಗಡಿ ಮಾಲೀಕನಿಗೆ ಬೆಂಗಳೂರಿನ ವ್ಯಕ್ತಿಯೋರ್ವ 8 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಗಾಯತ್ರಿಪುರಂ ನಿವಾಸಿ ಪರ್ವೀಸ್ ಖಾನ್ ಎಂಬುವರು ಕೆ.ಟಿ.ಸ್ಟ್ರೀಟ್‌ನಲ್ಲಿ ಖಾನ್ ಹಾರ್ಡ್‌ವೇರ್ಸ್ ಎಂಬ ಅಂಗಡಿಯನ್ನು ಹೊಂದಿದ್ದಾರೆ. ಇವರು ಕಳೆದ ಫೆ.18ರಂದು ಬೆಂಗಳೂರಿನ ಟಿ.ಮರಿಯಪ್ಪ ರಸ್ತೆಯಲ್ಲಿರುವ GK ISPAT ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯ ಗೋಪಾಲ್ ಅಗರ್‌ವಾಲ್ ಎಂಬುವರ ಬಳಿ 1400 ಸಿ.ಆರ್.ಶೀಟ್‌ಗಳನ್ನು ಸರಬರಾಜು ಮಾಡುವ ಬಗ್ಗೆ ಮಾತುಕತೆ ನಡೆಸಿ ಬಂದಿದ್ದಾರೆ. ಅಗರ್‌ವಾಲ್ ಹೇಳಿದಂತೆ ಮುಂಗಡ ಹಣವಾಗಿ ಫೆ.19ರಂದು ಅವರ ಖಾತೆಗೆ 8 ಲಕ್ಷ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ರವಾನಿಸಿದ್ದಾರೆ. ನಂತರ ಆರ್.ಸಿ.ಶೀಟ್‌ಗಳನ್ನು ಕಳುಹಿಸಿಕೊಡುವಂತೆ ಹಲವಾರು ಬಾರಿ ಹೇಳಿದರೂ ಸಬೂಬು ಹೇಳುತ್ತಿದ್ದ ಅವರು, ನಂತರ ತಮ್ಮ ಕರೆಗಳನ್ನೇ ಸ್ವೀಕರಿಸದೆ, ಹಣ ಪಡೆದು ಮೋಸ ಮಾಡಿದ್ದಾರೆ ಎಂದು ಪರ್ವೀಸ್ ಖಾನ್ ಮೇ 17 ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಡಾ.ಶೋಭಿತ್ ರಂಗಪ್ಪಗೆ 'ಜಸ್ಸೋ ಫೆಲೋಷಿಪ್'

ಮೈಸೂರು, ಮೇ 22(ಎಂಕೆ)– ಆದಿಚುಂಚನಗಿರಿ ವಿಶ್ವ ವಿದ್ಯಾನಿಲಯ ಇನ್ಸ್ಟಿಟ್ಯೂಟ್ ಆಫ್ ಮಾಲಿಕ್ಯೂಲರ್ ವಿಭಾಗದ ನಿರ್ದೇಶಕ ಡಾ.ಶೋಭಿತ್ ರಂಗಪ್ಪ ಅವರಿಗೆ ಜಪಾನ್ ಸರ್ಕಾರದ 'ಜಸ್ಸೋ ಫೆಲೋಷಿಪ್'(JASSO Fellowship) ದೊರೆತಿದೆ.



ಡಾ.ಶೋಭಿತ್ ರಂಗಪ್ಪ, ಅಂತರರಾಷ್ಟ್ರೀಯ ಸಂಶೋಧನಾ ಜರ್ನಲ್‌ಗಳಲ್ಲಿ 75ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವುದರ ಜೊತೆಗೆ ಕ್ಯಾನ್ಸರ್ ಔಷಧ ಸಂಶೋಧನೆಯಲ್ಲಿ 5 ಪೇಟೆಂಟ್‌ಗಳನ್ನು ಪಡೆದಿದ್ದಾರೆ. ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಶ್ರೇಷ್ಠ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಹಾಗೂ ಪೂರ್ಣಿಮಾ ದೇವಿ ದಂಪತಿ ಪುತ್ರರಾದ ಡಾ.ಶೋಭಿತ್ ಅವರಿಗೆ ಲಭಿಸಿರುವ ಪ್ರತಿಷ್ಠಿತ ಫೆಲೋಷಿಪ್‌ನಿಂದಾಗಿ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಗರಿಮೆ ಹೆಚ್ಚಿದೆ ಎಂದು ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ವಿ.ಶೇಖರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮೇ 30ರಿಂದ ಸರ್ಕಾರಿ ನೌಕರರ ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆ

ಮೈಸೂರು, ಮೇ 22(ಎಂಕೆ)– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಮೇ 30ರಿಂದ ಜೂ.1ರವರೆಗೆ 'ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ–2022' ಏರ್ಪಡಿಸಲಾಗಿದೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಕ್ರೀಡಾಕೂಟವನ್ನು ಮೇ 30ರಂದು ಸಂಜೆ 4 ಗಂಟೆಗೆ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳ ಭಾಗವಹಿಸುವ ನಿರೀಕ್ಷೆ ಇದ್ದು, ಟ್ರ್ಯಾಕ್ ಸೂಟ್ ಮತ್ತು ಕ್ಯಾಪ್ ವಿತರಣೆ ಜೊತೆಗೆ ಊಟೋಪಚಾರ, ವಿಜೇತ ಕ್ರೀಡಾಪಟುಗಳು ಬಹುಮಾನ ವಿತರಣೆ ಹಾಗೂ 'ಸಂಗೀತ ರಸ ಸಂಜೆ' ಕಾರ್ಯಕ್ರಮವನ್ನು ಆಯೋಜಿಸಿಲಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಗೋವಿಂದರಾಜು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಕ್ಕಲಿಗರ ಸಂಘದ ನೂತನ ನಿರ್ದೇಶಕರಿಗೆ ಅಭಿನಂದನೆ



ಮೈಸೂರು,ಮೇ 22(ಜಿಎ)– ರಾಜ್ಯ ಒಕ್ಕಲಿಗರ ಸಂಘಕ್ಕೆ ನೂತನವಾಗಿ ನಿರ್ದೇಶಕರಾಗಿ ಆಯ್ಕೆಯಾಗಿರುವವರನ್ನು ವಿಶ್ವ ಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರಿನ ಜೆ.ಪಿ. ನಗರದ ಡಾ.ಪುಟ್ಟರಾಜು ಗವಾಯಿ ಕ್ರೀಡಾಂಗಣದ ಆವರಣದಲ್ಲಿರುವ ಯೋಗ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಅವರು ರಾಜ್ಯ ಒಕ್ಕಲಿಗರ ಸಂಘದ ನೂತನ ನಿರ್ದೇಶಕರಾದ ಡಾ.ಎಂ.ಬಿ. ಮಂಜೇಗೌಡ ಹಾಗೂ ಕಾರ್ಯದರ್ಶಿಯೂ ಆದ ಸಿ.ಜಿ. ಗಂಗಾಧರ್ ಅವರನ್ನು ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ನನಗೂ ಮತ್ತು ಒಕ್ಕಲಿಗರ ಸಂಘ ನಡುವೆ ಅವಿನಾಭಾವ ಸಂಬಂಧವಿದೆ. ಏಕೆಂದರೆ ನನ್ನ ಚುನಾವಣೆ ಸಂದರ್ಭದಲ್ಲಿ ಜೊತೆಗಿದ್ದು ಗೆಲುವಿಗೆ ಶ್ರಮಿಸಿದ್ದರು. ಈ ಆಯ್ಕೆ ಆಗಿರುವ ನಿರ್ದೇಶಕರು ಸಂಘದ ಹಿಂದಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಒಕ್ಕಲಿಗರ ಸಮುದಾಯಕ್ಕೆ ಉತ್ತಮ ಯೋಜನೆಗಳನ್ನು ನೀಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್.ಕೃಷ್ಣ ಹಾಗೂ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 22– ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ 2022–23 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ನಂತರ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಮೆಷನ್ ಟೂಲ್ ಟೆಕ್ನಾಲಜಿ , ಸ್ವಯಂಚಾಲಿತ ಇಂಜಿನಿಯರಿಂಗ್ (ಆಟೋಮೊಬೈಲ್) ಮತ್ತು ಕಮರ್ಷಿಯಲ್ ಪ್ರಾಕ್ಟಿಸ್ ಕನ್ನಡ ಮತ್ತು ಇಂಗ್ಲಿಷ್ ಈ ಮೂರು ವಿಭಾಗಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದ್ದು ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

ಆಸಕ್ತ ಅಭ್ಯರ್ಥಿಗಳು ಜೂನ್ 11ರೊಳಗಾಗಿ ಕಚೇರಿಯ ಸಮಯದಲ್ಲಿ ಬಂದು ಅರ್ಜಿ ಸಲ್ಲಿಸಲು ತಿಳಿಸಿದೆ. ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ಮೇಲೆ ಪ್ರವೇಶವನ್ನು ನೀಡಲಾಗುವುದು. ಸಿವಿಲ್ ವಿಭಾಗ, ಗಣಕಯಂತ್ರ ವಿಭಾಗ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗ, ಎಲೆಕ್ಟಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗ ಮತ್ತು ಮೆಕ್ಯಾನಿಕಲ್ (ಜನರಲ್) ವಿಭಾಗಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ನೀಡುವುದರಿಂದ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಇಲ್ಲಿಗೆ ಮೇ 26ರೊಳಗಾಗಿ ಸಂಜೆ 6.30 ಗಂಟೆಯ ಒಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅಥವಾ ನಿಗದಿಪಡಿಸಿರುವ ಸಮೀಪದ ಸಹಾಯ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು .

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ dtetech.karnataka.gov.in/kartechnical or dtek.karnataka.gov.in or www.cetonline.karnataka.gov.in/kea ಮೂಲಕ ವೀಕ್ಷಿಸಬಹುದು ಎಂದು ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಗ್ರೇಡ್–2 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ದಕ್ಷ ಯಜ್ಞ ನಾಟಕ ಪ್ರದರ್ಶನ

ಮೈಸೂರು, ಮೇ 22–ಮೈಸೂರು ತಾಲೂಕು ವರುಣಾ ಹೋಬಳಿ ಕೇರ್ಗಳ್ಳಿಯ ಶ್ರೀ ಹೊಂಬಾಳಮ್ಮ ಶ್ರೀ ಸಿದ್ದರಾಮೇಶ್ವರ ಕಲಾ ಸಂಘದಿಂದ ಮೇ 23ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ನಿರ್ದೇಶಕ, ಹಿರಿಯ ರಂಗ ಕಲಾವಿದ ಕೆ.ನಾಗರಾಜು ಅಭಿನಂದನಾ ಸಮಾರಂಭದ ನಿಮಿತ್ತ ವಂಡರಬಾಳು ಟಿ.ಎಸ್.ಲಿಂಗರಾಜೇ ಅರಸ್ ವಿರಚಿತ 'ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ' ನಾಟಕ ಪ್ರದರ್ಶನವನ್ನು ಪುರಭವನದಲ್ಲಿ ಏರ್ಪಡಿಸಲಾಗಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಟಕ ಪ್ರದರ್ಶನ ಉದ್ಘಾಟಿಸಲಿದ್ದು, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಜಿ.ಟಿ.ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್ ಗೌಡ, ಜಿಪಂ ಮಾಜಿ ಅಧ್ಯಕ್ಷ ಮತ್ತು ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ತಾಪಂ ಮಾಜಿ ಸದಸ್ಯ ಎಂ.ಕೆಂಚಪ್ಪ ಮೊದಲಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿದ್ಯುತ್ ಸ್ಪರ್ಶ: 11 ತಿಂಗಳ ಮಗು ಸಾವು

ಯಳಂದೂರು, ಮೇ 22(ವಿ.ನಾಗರಾಜು)– ವಿದ್ಯುತ್ ಸ್ಪರ್ಶದಿಂದ 11 ತಿಂಗಳ ಮಗು ಸಾವನ್ನಪ್ಪಿರುವ ಘಟನೆ ತಾಲೂಕಿನ ವೈ.ಕೆ.ಮೋಳೆ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ನಿವಾಸಿ ರಂಗಸ್ವಾಮಿ ಹಾಗೂ ಲಕ್ಷ್ಮಿ ದಂಪತಿ ಮಗು ಗಗನ್ ಮೃತಪಟ್ಟ ಮಗು.

ಘಟನೆಯ ವಿವರ: ಭಾನುವಾರ ಬೆಳಿಗ್ಗೆ ಮಗುವಿಗೆ ಪೋಷಕರು ಸ್ನಾನ ಮಾಡಿಸಿ, ಕೊಠಡಿಯಲ್ಲಿ ಮಲಗಿಸಿದ್ದಾರೆ. ಆದರೆ, ಮಗು ಮಲಗಿದ್ದ ಕೊಠಡಿಯಲ್ಲಿ ವಿದ್ಯುತ್ ಸ್ವಿಚ್ ಹಾಸಿಗೆಯ ಸಮೀಪವೇ ಇತ್ತು. ಮಗು ನಿದ್ರೆಯಿಂದ ಎದ್ದು, ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ಸ್ವಿಚ್‌ಗೆ ಕೈ ಹಾಕಿದೆ. ಪರಿಣಾಮ ವಿದ್ಯುತ್ ಸ್ಪರ್ಶದಿಂದ ಮಗು ಕಿರುಚಿದೆ. ಕೂಡಲೇ ಮಗುವಿನ ಅತ್ತೆ ಪವಿತ್ರ ಮಗುವನ್ನು ರಕ್ಷಿಸಲು ಯತ್ನಿಸಿದ್ದಾರೆ. ಆದರೆ, ಇವರಿಗೂ ವಿದ್ಯುತ್ ಸ್ಪರ್ಶವಾಗಿದೆ. ಕೂಡಲೇ ಮನೆಯ ಇತರೆ ಸದಸ್ಯರು ಮನೆಯ ಮೇನ್ ಸ್ವಿಚ್ ಆಫ್ ಮಾಡಿ, ಮಗು ಹಾಗೂ ಪವಿತ್ರ ಅವರನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆ ಫಲಿಸದೆ ಮಗು ಸಾವನ್ನಪ್ಪಿದೆ. ಇವರ ಅತ್ತೆ ಪವಿತ್ರ ಚೇತರಿಸಿಕೊಳ್ಳುತ್ತಿದ್ದಾರೆ. ಈ ದಂಪತಿಗೆ ಗಗನ್ ಒಬ್ಬನೇ ಮಗನಾಗಿದ್ದು, ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಈ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಕೊಳ್ಳೇಗಾಲ, ಮೇ 22– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ತಾಲೂಕಿನ ನರೀಪುರ ಬಳಿ ಭಾನುವಾರ ನಡೆದಿದೆ. ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಮದ ಮಹದೇವಸ್ವಾಮಿ ಮೃತಪಟ್ಟವರು. ಗಾಯಗೊಂಡ ಹಿಂಬದಿ ಸವಾರ ನಂಜುಂಡಸ್ವಾಮಿ ಅವರನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಯ ವಿವರ: ಮಹದೇವಸ್ವಾಮಿ ಹಾಗೂ ಈತನ ಸಂಬಂಧಿ ಕೆಲಸ ನಿಮಿತ್ತ ಉಮ್ಮತ್ತೂರು ಗ್ರಾಮದಿಂದ ಕೊಳ್ಳೇಗಾಲ ಮಾರ್ಗವಾಗಿ ಸತ್ತೇಗಾಲದ ಕಡೆ ಹೋಗುತ್ತಿದ್ದಾಗ ನರೀಪುರ ಬಳಿ ಹಿಂಬದಿಯಿಂದ ವೇಗವಾಗಿ ಬಂದ ಕಾರೊಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹದೇವಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಡಿಕ್ಕಿ ರಭಸಕ್ಕೆ ಮಹದೇವಸ್ವಾಮಿ ಅವರ ಮೃತದೇಹ ಕಾರಿನ ಟಾಪ್‌ನ ಮೇಲೆ ಬಿದ್ದಿದೆ. ಹಿಂಬದಿ ಸವಾರ ನಂಜುಂಡಸ್ವಾಮಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮಾನವೀಯತೆ ಮೆರೆದ ಶಾಸಕ: ಇದೇ ವೇಳೆ ಕಾರಿನಲ್ಲಿ ಬರುತ್ತಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಗಾಯಾಳುವನ್ನು ತಮ್ಮ ಕಾರಿನಲ್ಲಿ ಕೊಂಡೊಯ್ದು ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದಿದ್ದಾರೆ. ಘಟನಾ ಸ್ಥಳಕ್ಕೆ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೇಗೂರು ಗ್ರಾಪಂ ಉಪಚುನಾವಣೆ

ಬಿಜೆಪಿ ಬೆಂಬಲಿತ ನಾಗಮ್ಮಗೆ ಜಯ



ಬೇಗೂರು, ಮೇ 22(ಕಿರಣ್)– ಬೇಗೂರು ಗ್ರಾಮ ಪಂಚಾಯಿತಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ನಾಗಮ್ಮ ರಾಜಶೆಟ್ಟಿ ಅವರು ತಮ್ಮ ಪ್ರತಿಸ್ಪರ್ಧಿಗಿಂತ 156 ಹೆಚ್ಚು ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಸದಸ್ಯೆಯೊಬ್ಬರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಉಪಚುನಾವಣೆ ನಿಗದಿ ಯಾಗಿದ್ದು, ಶುಕ್ರವಾರ ಮತದಾನ ನಡೆದು 934 ಮತಗಳು ಚಲಾವಣೆಯಾಗಿದ್ದವು. ಭಾನುವಾರ ನಡೆದ ಮತ ಎಣಿಕೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ನಾಗಮ್ಮ (537) ತಮ್ಮ ಪ್ರತಿ ಸ್ಪರ್ಧಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರತ್ನಮ್ಮ (381) ವಿರುದ್ಧ 156 ಮತಗಳ ಅಂತರದಿಂದ ಜಯ ಗಳಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ರಾಜಶೆಟ್ಟಿ, ಸದಸ್ಯರಾದ ಸೋಮಶೇಖರ್, ಮಹೇಶ್, ಗುರುಸ್ವಾಮಿ, ಕರಿಯಪ್ಪ, ರತ್ನಮ್ಮ, ಕೆಂಪಮ್ಮ, ಭಾಗ್ಯ ಇದ್ದರು.

ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಗ್ರಾಮದ 2ನೇ ಬ್ಲಾಕ್ ಪ್ರಮುಖ ಬೀದಿಯಲ್ಲಿ ಪಾದಯಾತ್ರೆ ನಡೆಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಹೆಚ್.ಜಿ.ನಾರಾಯಣಸ್ವಾಮಿ, ಬೇಗೂರು ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಅಣ್ಣಯ್ಯ, ಗ್ರಾಪಂ ಸದಸ್ಯರಾದ ಸೋಮು, ರಾಜಶೆಟ್ಟಿ, ಗುರುಸ್ವಾಮಿ, ಮುಖಂಡ ರಾದ ನಾಗಶೆಟ್ಟಿ ಮತ್ತಿತರರು ಅಭಿನಂದನೆ ಸಲ್ಲಿಸಿದರು.

ನಾಡಿನ ಅಭಿವೃದ್ಧಿಯಲ್ಲೂ ಮಠಗಳ ಪಾತ್ರ ಪ್ರಮುಖ

● ಸುತ್ತೂರು ಶ್ರೀಗಳ ಅಭಿಮತ ● ಎರಡು ದಿನ ಯಶಸ್ವಿಯಾಗಿ ನಡೆದ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಕಾರ್ಯಕ್ರಮ



ಚಾಮರಾಜನಗರ, ಮೇ 22(ಎಸ್‌ಎಸ್)– ನಾಡಿನ ಜನಕಲ್ಯಾಣಕ್ಕಾಗಿ ಮಠಗಳು ಅಪಾರವಾಗಿ ಶ್ರಮಿಸುತ್ತಿವೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದಲ್ಲಿ ಭಾನುವಾರ ನಡೆದ ಶ್ರೀ ಬಸವರಾಜ ಸ್ವಾಮೀಜಿ ಅವರ ಅನುಭವ ಮಂಟಪವನ್ನು ಉದ್ಘಾಟಿಸಿದ ನಂತರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಜನರು ಮಠ-ಮಾನ್ಯಗಳಿಗೆ ಉದಾರವಾಗಿ ಕೊಡುಗೆಗಳನ್ನು ನೀಡುತ್ತಾರೆ. ಹಾಗೆಯೇ ನಾಡಿನ ಅಭಿವೃದ್ಧಿಯಲ್ಲಿ ಮಠಗಳ ಪಾತ್ರ ಪ್ರಮುಖವಾಗಿದೆ. ಇಂದು ರಾಜ್ಯದಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಲು ಮಠಗಳ ಕೊಡುಗೆ ಅಪಾರವಾಗಿದೆ ಎಂದರು.

ಜನರಿಗೆ ಶಿಕ್ಷಣ ಕೊಡುವಲ್ಲಿ, ಧಾರ್ಮಿಕ ಪ್ರಜ್ಞೆ ಮೂಡಿಸುವಲ್ಲಿ, ವಸತಿ ಕಲ್ಪಿಸುವಲ್ಲಿ ಮಠಗಳು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿದೆ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರಿಗೆ ಮಠಗಳು ರಕ್ಷಣೆ ನೀಡುವ ಮೂಲಕ ಅವರ ಹೋರಾಟಕ್ಕೆ ಬೆಂಬಲ ನೀಡಿದ್ದವು ಎಂದರು.

ಮಠಗಳಲ್ಲಿ ಬೆಳೆಯುವ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ, ಜನತೆಯ ಕಲ್ಯಾಣ, ದೇಶ ಕಟ್ಟುವ, ನಾಡಿನ ಶ್ರೇಯಸ್ಸಿಗೆ ನಿರಂತರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ನಾಡಿನ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಇದರಿಂದಲೇ ಜನರಿಗೆ ಮಠ-ಮಾನ್ಯಗಳ ಬಗ್ಗೆ ಪ್ರೀತಿ, ವಿಶ್ವಾಸ ಹೆಚ್ಚಾಗಿದೆ ಎಂದು ತಿಳಿಸಿದರು.

ತುಮಕೂರಿನ ಶ್ರೀಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಬಸವಣ್ಣನವರ ತತ್ವಗಳು ಒಂದು ಸಮಾಜಕ್ಕೆ, ಒಂದು ಧರ್ಮಕ್ಕೆ ಸೀಮಿತಗೊಳ್ಳಬಾರದು. ಎಲ್ಲಾ ಜನರು ಅವರ ತತ್ವ ಆದರ್ಶಗಳನ್ನು ಪಾಲಿಸಬೇಕು. ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಬಸವಣ್ಣ ಅವರ ತತ್ವಗಳನ್ನು ಪಾಲಿಸಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು. ಉತ್ತರ ಕರ್ನಾಟಕ ಭಾಗಕ್ಕಿಂತ ಈ ಭಾಗದ ಜನರು ಸ್ವಾಮೀಜಿಗಳಿಗೆ ಅಪಾರ ಗೌರವ, ಮನ್ನಣೆ ಕೊಡುತ್ತಾರೆ. ಈ ಭಾಗದ ಜನರಿಗೆ ಹೃದಯ ಶ್ರೀಮಂತಿಕೆ ಜಾಸ್ತಿ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಸಿದ್ಧಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಪಿರಿಯಾಪಟ್ಟಣ ಬೆಟ್ಟದಪುರ ಶ್ರೀಚನ್ನಬಸವ ದೇಶೀಕೇಂದ್ರ ಸ್ವಾಮೀಜಿ, ಪಡಗೂರು ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ, ಕನಕಪುರ ಕಿರಿಯ ಶ್ರೀಗಳಾದ ಚನ್ನಬಸವ ಸ್ವಾಮೀಜಿ, ಮರಿಯಾಲ ಮಠದ ಶ್ರೀಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಮೈಸೂರು ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಮಹದೇಶ್ವರ ಬೆಟ್ಟದ ಸಾಲೂರು ಮಠದ ಕಿರಿಯ ಶ್ರೀಗಳಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಸೇರಿದಂತೆ ಅನೇಕ ಮಠಗಳ ಮಠಾಧಿಪತಿಗಳು ಹಾಜರಿದ್ದರು. ಕಬ್ಬಳ್ಳಿಯ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಎಸ್.ಎಂ.ಸಿದ್ದರಾಜಪ್ಪ ಅವರು ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಬಗ್ಗೆ ಬರೆದಿರುವ 'ಶಬ್ದದೊಳಗಣ ನಿಶ್ಯಬ್ಧ' ಪುಸ್ತಕವನ್ನು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಇದೇ ವೇಳೆ ಬಿಡುಗಡೆ ಗೊಳಿಸಿದರು. ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಚಾಮುಲ್ ಅಧ್ಯಕ್ಷ ನಂಜುಂಡ ಪ್ರಸಾದ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡ ಅಮ್ಮನಪುರ ಮಲ್ಲೇಶ್ ಅವರು ಶ್ರೀಮಠಕ್ಕೆ ಆಗಮಿಸಿ ಬಸವಣ್ಣನವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು. ಯೋಗಪ್ರಕಾಶ್ ಸ್ವಾಗತಿಸಿದರು. ಸಿದ್ಧಮಲ್ಲಪ್ಪ ನಿರೂಪಿಸಿದರು. ಪಿ.ಮಹದೇವಸ್ವಾಮಿ ವಂದಿಸಿದರು.

ಜಿಲ್ಲೆಯಲ್ಲಿ ಮೊದಲ ಶ್ರೀಬಸವೇಶ್ವರರ ಪುತ್ಥಳಿ ಸ್ಥಾಪನೆ

ಚಾಮರಾಜನಗರ: ಜಿಲ್ಲೆಯಲ್ಲಿ ಮೊದಲ ಶ್ರೀಬಸವೇಶ್ವರರ ಪುತ್ಥಳಿ ಸ್ಥಾಪಿಸಿದ ಕೀರ್ತಿ ನಗರದ ಶ್ರೀಸಿದ್ಧಮಲ್ಲೇಶ್ವರ ವಿರಕ್ತ ಮಠ ಪಾತ್ರವಾಗಿದೆ.

ಶ್ರೀಮಠದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಅನುಭವ ಮಂಟಪದಲ್ಲಿ ಶ್ರೀಬಸವೇಶ್ವರರ ಪುತ್ಥಳಿಯನ್ನು ಸ್ಥಾಪಿಸಲಾಗಿದ್ದು, ಇಂದು ಅನಾವರಣ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಹಲವು ಮಠದ ಶ್ರೀಗಳು ಶ್ರೀಮಠದ ಶ್ರೀಗಳಾದ ಚನ್ನ ಬಸವ ಸ್ವಾಮೀಜಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮಠದ ವತಿಯಿಂದ ಶನಿವಾರ ಮತ್ತು ಭಾನುವಾರ ನಡೆದ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.



ಎಸ್‌ಡಿವಿಎಸ್ ವಿದ್ಯಾಸಂಸ್ಥೆಗೆ ಶೇ.100ರಷ್ಟು ಫಲಿತಾಂಶ



ಯಳಂದೂರು, ಮೇ 22(ವಿ.ನಾಗರಾಜು)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಶೇ.100ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ.

ಸಂಸ್ಥೆಯ 44 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಈ ಪೈಕಿ 22 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 18 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಪೈಕಿ ನಾಲ್ವರು ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದ್ದಾರೆ.

ಸಂಸ್ಥೆಯ ಎನ್.ವರ್ಷ 613(98.08), ರಕ್ಷ ಪ್ರಸಾದ್ 610(97.6.), ವೈ.ಎಂ. ಯಶಸ್ವಿನಿ 601(96.16) ಅಂಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆಗೈದಿದ್ದಾರೆ. ಜಿ.ಎಸ್.ನವ್ಯಶ್ರೀ ಕನ್ನಡ ಭಾಷಾ ಭಾಷೆಯಲ್ಲಿ 125ಕ್ಕೆ 125 ಅಂಕ ಪಡೆದಿದ್ದಾಳೆ. ಹಿಂದಿ ಭಾಷಾ ವಿಷಯದಲ್ಲಿ 14 ವಿದ್ಯಾರ್ಥಿಗಳು 100 ಅಂಕ ಪಡೆದಿದ್ದು, ಸಮಾಜ ವಿಜ್ಞಾನದಲ್ಲಿ 6 ವಿದ್ಯಾರ್ಥಿಗಳು 100 ಅಂಕ ಪಡೆಯುವ ಮೂಲಕ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಪಿ.ವೀರಭದ್ರಪ್ಪ, ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಗಂಗಾಧರಸ್ವಾಮಿ, ಖಜಾಂಚಿ ಡಿ.ಜಿ.ರಾಜೇಶ್, ಸದಸ್ಯರಾದ ಪ್ರಮೀಳಾ ಗುರುಪ್ರಸಾದ್, ಗೌರಮ್ಮ ಮಹದೇವಸ್ವಾಮಿ, ಐಟಿಐ ಪ್ರಾಂಶುಪಾಲ ವಿಖ್ಯಾತ್, ಮುಖ್ಯಶಿಕ್ಷಕ ವೀರಭದ್ರಸ್ವಾಮಿ, ಶಿಕ್ಷಕರಾದ ಗುಂಬಳ್ಳಿ ಬಸವರಾಜು, ಮಂಜುನಾಥ್, ನಾಗರಾಜು, ಮಲ್ಲಿಕಾರ್ಜುನಸ್ವಾಮಿ, ಶಿವಮೂರ್ತಿ, ಪವಿತ್ರ, ಜಬಿನ್‌ತಾಜ್, ಪ್ರಕಾಶ್ ಹಾಗೂ ಪೋಷಕರು ಸೇರಿದಂತೆ ಹಲವರು ಅಭಿನಂದನೆ ಸಲ್ಲಿಸಿದ್ದಾರೆ.

ಜೆಡಿಎಸ್ ಅಭ್ಯರ್ಥಿ ಗೆಲ್ಲಿಸುವುದೇ ನಮ್ಮ ಉದ್ದೇಶ: ರಾಜಣ್ಣ



ಹನೂರು, ಮೇ 22(ಸೋಮು)– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಹನೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಮಂಜುನಾಥ್ ಅವರನ್ನು ಗೆಲ್ಲಿಸುವುದೇ ನಮ್ಮ ಉದ್ದೇಶವಾಗಿದೆ ಎಂದು ಮುಖಂಡ ಸಿಂಗನಲ್ಲೂರು ರಾಜಣ್ಣ ಹೇಳಿದರು.

ಪಟ್ಟಣದ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಜೆಡಿಎಸ್ ಪಕ್ಷ ತೊರೆಯುವುದಿಲ್ಲ. ಈವರೆಗೂ ಪಕ್ಷದಲ್ಲೇ ಇದ್ದೇನೆ ಮುಂದೆಯೂ ಇರುತ್ತೇನೆ ಎಂದರು.

ಜೆಡಿಎಸ್ ಮುಖಂಡ ಮಂಜುನಾಥ್ ಮಾತನಾಡಿ, ಸಿಂಗನಲ್ಲೂರು ರಾಜಣ್ಣ ಅಂದಿನಿಂದಲೂ ಜೆಡಿಎಸ್‌ನಲ್ಲೇ ಇದ್ದಾರೆ. ಮುಂದಿನ ಚುನಾವಣೆಗೂ ನಮ್ಮ ಜೊತೆಗೆ ಇದ್ದು ಪಕ್ಷದ ಪರವಾಗಿ ದುಡಿಯುತ್ತಾರೆ. ಹಾಗಾಗಿ, ಇತ್ತೀಚಿಗೆ ಅವರ ಬಗ್ಗೆ ಕೇಳಿ ಬಂದ ಇಲ್ಲದ ಸಲ್ಲದ ವಿಚಾರಗಳ ಬಗ್ಗೆ ತೆರೆ ಎಳೆಯಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಿವಮೂರ್ತಿ, ಮಂಜೇಶ್, ಗ್ರಾಪಂ ಸದಸ್ಯರಾದ ಚಿಕ್ಕಣ್ಣ, ಸೆಲ್ವಮ್ ಇನ್ನಿತರಿದ್ದರು.

ಪೊರುಕೊಂಡ ಕ್ರಿಕೆಟ್ ಕಪ್ ಮುಡಿಗೇರಿಸಿಕೊಂಡ ತಂಬುಕುತ್ತೀರ ತಂಡ



ಗೋಣಿಕೊಪ್ಪ, ಮೇ 22–ಕೊಡವ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಬಾರಿಗೆ ನಡೆದ ಹೊನಲು ಬೆಳಕಿನ ಪೊರುಕೊಂಡ ಕ್ರಿಕೆಟ್ ಕಪ್ ಅನ್ನು ತಂಬುಕುತ್ತೀರ ತಂಡ ಮುಡಿಗೇರಿಸಿಕೊಂಡಿದೆ.

ಬೊಟ್ಟಂಗಡ ರನ್ನರ್‌ಅಪ್, ಚೆಕ್ಕೇರ 3ನೇ ಸ್ಥಾನ, ಮುಕ್ಕಾಟೀರ(ಮಾದಾಪುರ) 4ನೇ ತಂಡವಾಗಿ ಹೊರ ಹೊಮ್ಮಿತು. ರಾತ್ರಿ 11.30ಕ್ಕೆ ಸಮಾರೋಪದ ಮೂಲಕ ಸಂಭ್ರಮಕ್ಕೆ ತೆರೆ ಬಿದ್ದಿತು.

ಅಮ್ಮತ್ತಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ, ಪೊರುಕೊಂಡ ಕುಟುಂಬ ಸಹಯೋಗದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ತಂಬುಕುತ್ತೀರ ಬೊಟ್ಟಂಗಡ ತಂಡವನ್ನು ಮಣಿಸಿ ಚೊಚ್ಚಲ ಬಾರಿಗೆ ಚಾಂಪಿಯನ್ ಗಿರಿ ಅಲಂಕರಿಸಿತು. ಬೊಟ್ಟಂಗಡ ಕೂಡ ಚೊಚ್ಚಲ ರನ್ನರ್‌ಅಪ್ ತಂಡವಾಗಿ ಹೊರ ಹೊಮ್ಮಿತು. ಉಭಯ ತಂಡಗಳಿಗೆ ಮೊದಲ ಪ್ರಶಸ್ತಿ ಪಡೆದ ಸಾಧನೆ ಸಂಭ್ರಮಕ್ಕೆ ಕಾರಣವಾಯಿತು.

ಫಲಿತಾಂಶ: ತಂಬುಕುತ್ತೀರ ತಂಡವು ಬೊಟ್ಟಂಗಡ ತಂಡವನ್ನು 70 ರನ್‌ಗಳಿಂದ ಮಣಿಸಿತು. ಮೊದಲು ಬ್ಯಾಟ್ ಮಾಡಿ ನಿಗದಿತ 10 ಓವರ್‌ಗಳಿಗೆ 3 ವಿಕೆಟ್ ಕಳೆದುಕೊಂಡು 143 ರನ್ ಗಳಿಸಿತು. ಬೊಟ್ಟಂಗಡ ನಿಗದಿತ 10 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ಕೇವಲ 73 ರನ್ ಗಳಿಸಿ ಸೋಲಿಗೆ ಶರಣಾಯಿತು.

ಚೆಕ್ಕೇರ ಕಾರ್ಯಪ್ಪ ಸರಣಿ ಶ್ರೇಷ್ಠ: ಟೂರ್ನಿಯಲ್ಲಿ 190 ರನ್ ದಾಖಲಿಸಿ, 7 ವಿಕೆಟ್ ಸಂಪಾದಿಸಿದ ಚೆಕ್ಕೇರ ಕಾರ್ಯಪ್ಪ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು. ಒಂದು ಓವರ್‌ನಲ್ಲಿ 5 ವಿಕೆಟ್ ಸಾಧನೆ ಮಾಡಿದ ಮುಕ್ಕಾಟೀರ (ಮಾದಾಪುರ) ತಂಡದ ಆಟಗಾರ ಬೋಪಣ್ಣ ಉತ್ತಮ ಬೌಲರ್ ಪ್ರಶಸ್ತಿ ಪಡೆದರು. ಬೊಟ್ಟಂಗಡ ಹರೀಶ್ ಉತ್ತಮ ಬ್ಯಾಟರ್ ಪ್ರಶಸ್ತಿ ಪಡೆದರು. ಕಳಕಂಡ ತಂಡಕ್ಕೆ ಶಿಸ್ತಿನ ತಂಡ ಪ್ರಶಸ್ತಿ ನೀಡಲಾಯಿತು. ಒಂದೇ ಓವರ್‌ನ 6 ಬಾಲ್‌ನಲ್ಲಿ 6 ಸಿಕ್ಸರ್ ಸಿಡಿಸಿದ ಬಲ್ಲಂಡ ನಿಶುಗೆ ವಿಶೇಷ ಬಹುಮಾನ ನೀಡಲಾಯಿತು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ತಂಬುಕುತ್ತಿರ ಸಾಗರ್(65 ರನ್) ಪಡೆದರು. ಭವಿಷ್ಯದ ತಂಡ ಕೀರ್ತಿಗೆ ಐಚಂಡ ಮತ್ತು ಚೊಟ್ಟೆಯಂಡಮಾಡ ತಂಡ ಭಾಜನವಾಯಿತು. 3ನೇ ಸ್ಥಾನ ಪಡೆದ ಚೆಕ್ಕೇರ ತಂಡಕ್ಕೆ ಹಾಗೂ ನಾಲ್ಕನೇ ತಂಡವಾಗಿ ಹೊರ ಹೊಮ್ಮಿದ ಮುಕ್ಕಾಟೀರ(ಮಾದಾಪುರ) ಬಹುಮಾನ ಸ್ವೀಕರಿಸಿದರು.

ಮಾಜಿ ಚಾಂಪಿಯನ್ ಚೆಕ್ಕೇರ 3ನೇ ಸ್ಥಾನ ಅಲಂಕರಿಸಿತು. ಮುಕ್ಕಾಟೀರ (ಮಾದಾಪುರ) 4ನೇ ತಂಡವಾಗಿ ಹೊರಹೊಮ್ಮಿತು. 3ನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ಚೆಕ್ಕೇರ ತಂಡವು ಮುಕ್ಕಾಟೀರ(ಮಾದಾಪುರ) ವನ್ನು 10 ವಿಕೆಟ್‌ಗಳಿಂದ ಮಣಿಸಿತು. ಮುಕ್ಕಾಟೀರ ಮೊದಲು ಬ್ಯಾಟ್ ಮಾಡಿ ನಿಗದಿತ 5 ಓವರ್‌ಗಳಲ್ಲಿ 50 ರನ್ ದಾಖಲಿಸಿತು. ಚೆಕ್ಕೇರ 2.3 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 51 ರನ್ ಸಿಡಿಸಿತು. ಚೆಕ್ಕೇರ ಕಾರ್ಯಪ್ಪ 32 ರನ್ ಬಾರಿಸಿ, 3 ವಿಕೆಟ್ ಪಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು. ಮುಕ್ಕಾಟೀರ ಸಂಜು 20 ರನ್ ದಾಖಲಿಸಿದರು.

ಸೆಮಿ ಫೈನಲ್‌ನಲ್ಲಿ ಬೊಟ್ಟಂಗಡ ತಂಡವು ಚೆಕ್ಕೇರ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿ ಚೊಚ್ಚಲ ಬಾರಿ ಫೈನಲ್‌ಗೇರಿದ ಸಾಧನೆ ಮಾಡಿತು.

2ನೇ ಸೆಮಿಯಲ್ಲಿ ತಂಬುಕುತ್ತೀರವು ಮುಕ್ಕಾಟೀರ(ಮಾದಾಪುರ) ವಿರುದ್ಧ 47 ರನ್‌ಗಳ ಭರ್ಜರಿ ಗೆಲುವು ಪಡೆಯಿತು. ತಂಬುಕುತ್ತೀರ 3 ವಿಕೆಟ್ ನಷ್ಟಕ್ಕೆ 98 ರನ್ ಸಂಪಾದಿಸಿತು. ಮುಕ್ಕಾಟೀರ 8 ವಿಕೆಟ್ ಕಳೆದುಕೊಂಡು 51 ರನ್ ಗಳಿಸಿ ಸೋಲೊಪ್ಪಿಕೊಂಡಿತು. ತಂಬುಕುತ್ತೀರ ಸುಕೇಶ್ 41 ರನ್, ಶರಣ್ 2 ವಿಕೆಟ್ ಪಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು. ಮುಕ್ಕಾಟೀರ ಬೋಪಣ್ಣ 11 ರನ್ ಗಳಿಸಿ, 2 ವಿಕೆಟ್ ಪಡೆದ ಸಾಧನೆ ಮಾಡಿದರು.

ಪ್ರದರ್ಶನ ಪಂದ್ಯ: ಲೆದರ್ ಬಾಲ್ ಕ್ರಿಕೆಟ್ ಪ್ರದರ್ಶನ ಪಂದ್ಯದಲ್ಲಿ ವಿರಾಜಪೇಟೆ ಪ್ರಗತಿ ಕ್ರಿಕೆಟ್ ಅಕಾಡೆಮಿ ತಂಡವು ನಪ್ರೆಸಿಡೆಂಟ್ ಇಲೆವೆನ್ ವಿರುದ್ಧ 3 ರನ್ ಗಳ ರೋಚಕ ಗೆಲುವು ದಾಖಲಿಸಿತು. ಪ್ರಗತಿ 4 ವಿಕೆಟ್ ನಷ್ಟಕ್ಕೆ 98 ರನ್ ದಾಖಲಿಸಿತು. ಪ್ರೆಸಿಡೆಂಟ್ ಇಲೆವೆನ್ 6 ವಿಕೆಟ್ ನಷ್ಟಕ್ಕೆ 95 ರನ್ ಗಳಿಸಿತು.

ಬೆಳಕಿನ ಚಿತ್ತಾರ: ಕೊಡವ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಬಾರಿಗೆ ಹೊನಲು ಬೆಳಕಿನ ಆಟ ನಡೆಯಿತು. ಸೆಮಿ ಫೈನಲ್, 3 ನೇ ಸ್ಥಾನದ ಪಂದ್ಯಗಳು, ಆಟಗಾರರಿಗೆ ಇದು ವಿಶೇಷ ಅನುಭವವಾಯಿತು. ಸ್ಥಳೀಯ ಕ್ರೀಡಾಭಿಮಾನಿಗಳು ಹೆಚ್ಚಾಗಿ ಕಂಡು ಬಂದರು.

ಸನ್ಮಾನ : ಯುಕೋ ಸಂಘಟನೆ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಕಲಾವಿದ ಕಂಗಾಂಡ ಜಾಲಿ ಪೂವಪ್ಪ, ಸಾಮಾಜಿಕ ಕಾರ್ಯಕರ್ತ ಕೇಲೇಟೀರ ದೀಪು ದೇವಯ್ಯ, ವನ್ಯಪ್ರೇಮಿ ಸೋಮೆಯಂಡ ಮಧು ಬೋಪಣ್ಣ, ಡಾ.ಕೋಳೇರ ಬೋಪಣ್ಣ, ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ಪೊರುಕೊಂಡ ಪಿ.ಪೆಮ್ಮಯ್ಯ, ಐಲಪಂಡ ಸೋನು ಗಣಪತಿ ಸನ್ಮಾನ ಸ್ವೀಕರಿಸಿದರು.

ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ ನೆಲ್ಲಚಂಡ ಯತೀಶ್ ನಾಚಪ್ಪ ಪೊರುಕೊಂಡ ಸಿನಿಲ್, ಮಧ್ಮಂಡ ದರ್ಶನ್, ಬಲ್ಲಂಡ ರೇನಾ, ಬಲ್ಲಂಡ ದಿಲೀಪ್, ನೂರೇರ ಶರಣ್, ಅಮ್ಮಾಟಂಡ ಶಾಶ್ವಿತ್, ಕೋಚಮಂಡ ರಕ್ಷಿತ್, ಅಜ್ಜೀನಂಡ ಯತಾರ್ಥ್, ಪೊರುಕೊಂಡ ನಿಕಿಲ್, ಮಚ್ಚಾರಂಡ ಅಪ್ಪಣ್ಣ, ಬಳ್ಳಿಕಾಳಂಡ ಸುಜಿತ್, ಟೈಸ್ ಜವಾಬ್ದಾರಿ ನಿಭಾಯಿಸಿದ ಮಾಚಂಗಡ ದರ್ಶನ್, ಕೊಟ್ಟಂಗಡ ಸೂರಜ್, ಕೊಕ್ಕೇಂಗಡ ರಂಜನ್ ಅವರನ್ನು ಗೌರವಿಸಲಾಯಿತು.

ಸಮಾರೋಪ: ಸಮಾರಂಭ ಪೊರುಕೊಂಡ ಕುಟುಂಬದ ಪಟ್ಟೆದಾರ ಜೋಯಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು. ಕುಟುಂಬ ಅಧ್ಯಕ್ಷ ಪೊರುಕೊಂಡ ಬೋಪಣ್ಣ ಮಾತನಾಡಿ, ಕ್ರೀಡಾಭಿಮಾನಿಗಳ ಪ್ರೋತ್ಸಾಹದಿಂದ ನಮ್ಮ ಯಶಸ್ವಿ ಸಾಧಿಸಿದೆ. ಕೊಡವ ಒಗ್ಗಟ್ಟು, ಆಚರಣೆಗೆ ಪ್ರೋತ್ಸಾಹ ಅಗತ್ಯ ಎಂದರು.

ಹೈಕೋರ್ಟ್ ಹಿರಿಯ ವಕೀಲ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ಕ್ರೀಡೆ ಸಂಸ್ಕೃತಿ ಪೋಷಣೆಯ ಭಾಗವಾಗಿದ್ದು, ಆಚಾರ ವಿಚಾರ ಮುಖ್ಯ ಅಂಶವಾಗಿದೆ ಎಂದರು.

ರಿಪಬ್ಲಿಕ್ ಟಿವಿ ಕಮಿಟಿ ಉಪಾಧ್ಯಕ್ಷ ಚೇರಂಡ ಕಿಶನ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕ.ಕಂಡ್ಯತಂಡ ಸುಬ್ಬಯ್ಯ, ಹಿರಿಯ ವೈದ್ಯ ಡಾ.ಮಾಪಂಗಡ ಬೆಳ್ಯಪ್ಪ, ಕಾರ್ಮಾಡು ಗ್ರಾಪಂ ಅಧ್ಯಕ್ಷ ಕುಂಞಿಯಂಡ ನಿರನ್ ನಾಣಯ್ಯ, ಇದ್ದರು. ಉದ್ಯೋಗ ಮೇಳದಲ್ಲಿ ಉದ್ಯೋಗ ಪೂರಕ ಮಾರ್ಗದರ್ಶನ, ಸಲಹೆ, ನೋಂದಣಿ ಕಾರ್ಯಕ್ರಮ ನಡೆಯಿತು.

ಮುಂದಿನ ವರ್ಷ ಬಾಳೆಯಡ ಕಪ್...

2023ರಲ್ಲಿ ಬಾಳೆಯಡ ಕುಟುಂಬ ನಾಪೋಕ್ಲುವಿನಲ್ಲಿ ಟೂರ್ನಿ ನಡೆಸಲು ಸಮಾರೋಪದಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ ಧ್ವಜ ಸ್ವೀಕರಿಸಿದರು. ಅಕಾಡೆಮಿ ಅಧ್ಯಕ್ಷ ಕೀರ್ತಿಯಂಡ ಕಾರ್ಸನ್ ಕಾರ್ಯಪ್ಪ, ಪೊರುಕೊಂಡ ಕುಟುಂಬ ಅಧ್ಯಕ್ಷ ಬೋಪಣ್ಣ ಅವರು ಬಾಳೆಯಡ ಕುಟುಂಬಕ್ಕೆ ಧ್ವಜ ಹಸ್ತಾಂತರ ಮಾಡಿದರು. ಕುಟುಂಬದ ಹಿರಿಯರಾದ ಬಿ.ಕೆ.ಸುಬ್ರಮಣಿ, ಬಿ.ಸಿ. ಪೂಣಚ್ಚ ಶಿವಕುಮಾರ್, ಪ್ರತೀಶ್ ಸ್ವೀಕರಿಸಿದರು. ಮೈದಾನಕ್ಕೆ ಬಾಳೆಯಡ ಕುಟುಂಬ ಆಗಮಿಸುವಾಗ ಭವ್ಯ ಸ್ವಾಗತದ ಮೂಲಕ ಬರ ಮಾಡಿಕೊಳ್ಳಲಾಯಿತು.

ಮಿನಿ ಟಿಪ್ಪರ್–ಕಾರು ಮುಖಾಮುಖಿ ಡಿಕ್ಕಿ

ಸುಂಟಿಕೊಪ್ಪ, ಮೇ 22–ಮಿನಿಟಿಪ್ಪರ್ ಲಾರಿ ಹಾಗೂ ಕಾರು ಮುಖಾಮುಖಿ ಡಿಕ್ಕಿಯಾಗಿ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಸುಂಟಿಕೊಪ್ಪ ಗದ್ದೆಹಳ್ಳದ ಬಳಿ ನಡೆದಿದೆ.



ಸುಂಟಿಕೊಪ್ಪದಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಮಿನಿ ಟಿಪ್ಪರ್(ಕೆಎ12, ಬಿ7829) ಮಡಿಕೇರಿಯಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಕಾರು (ಕೆಎ11, ಬಿ2290) ನಡುವೆ ಡಿಕ್ಕಿ ಸಂಭವಿಸಿದೆ. ಸಿಕಂದರಾಬಾದ್ ಮೂಲದ ಕುಟುಂಬವು ಜಿಲ್ಲೆಗೆ ಪ್ರವಾಸಕ್ಕೆಂದು ಆಗಮಿಸಿದ್ದು, ಕಾರಿನಲ್ಲಿದ್ದ ದಂಪತಿ ಹಾಗೂ ಇಬ್ಬರು ಮಕ್ಕಳು ಅದೃಷ್ಟವಶಾತ್ ಸಣ್ಣ ಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವರ್ಲ್ಡ್ ಸ್ಕೂಲ್ ಗೇಮ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ತಂದ ಕೊಡಗಿನ ಕುವರಿ

ಮಡಿಕೇರಿ, ಮೇ 22– ಉದಯೋನ್ಮುಖ ಕ್ರೀಡಾ ತಾರೆ, ಕೊಡಗಿನ ಯುವತಿ ಬೊಳ್ಳಂಡ ಉನ್ನತಿ ಅಯ್ಯಪ್ಪ ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ವರ್ಲ್ಡ್ ಸ್ಕೂಲ್ ಗೇಮ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕದ ಸಾಧನೆ ಮಾಡಿದ್ದಾರೆ.




ಫ್ರಾನ್ಸ್‌ನ ನಾರ್ಮಂಡಿಯಲ್ಲಿ ನಡೆದ ವರ್ಲ್ಡ್ ಸ್ಕೂಲ್ ಗೇಮ್ಸ್‌ನ 100 ಮೀಟರ್ ಹರ್ಡಲ್ಸ್‌ನಲ್ಲಿ ಉನ್ನತಿ 13.73 ಸೆಕೆಂಡ್ಸ್‌ನಲ್ಲಿ ಗುರಿ ತಲುಪಿ ದೇಶಕ್ಕೆ ಪದಕ ತಂದಿದ್ದಾರೆ.

ಈ ಹಿಂದೆ ವಿವಿಧ ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಕೂಡ ಉನ್ನತಿ ಉತ್ತಮ ಸಾಧನೆ ತೋರಿದ್ದು, ಹಲವು ಪದಕಗಳನ್ನು ಗಳಿಸಿದ್ದಾರೆ. 2021ರಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಚಾಂಪಿಯನ್ ಶಿಪ್‌ನಲ್ಲಿ ಉನ್ನತಿ ದೇಶದ ಹೆಸರಾಂತ ಕ್ರೀಡಾ ತಾರೆ ಪಿ.ಟಿ.ಉಷಾ ಅವರ ದಾಖಲೆಯನ್ನು ಮುರಿದು(80 ಮೀಟರ್ ಹರ್ಡಲ್ಸ್) ಹೆಸರು ಮಾಡಿದ್ದರು. ಇದೀಗ ಆಕೆಗೆ ಚೊಚ್ಚಲ ಅಂತರರಾಷ್ಟ್ರೀಯ ಮಟ್ಟದ ಪದಕ ಲಭಿಸಿದೆ.

ಉನ್ನತಿ ಜಿಲ್ಲೆಯವರಾದ ಅಂತರರಾಷ್ಟ್ರೀಯ ಅಥ್ಲೆಟ್ ಹಾಗೂ ತರಬೇತುದಾರ ಬೊಳ್ಳಂಡ ಅಯ್ಯಪ್ಪ ಹಾಗೂ ಎರಡು ಬಾರಿಯ ಒಲಂಪಿಯನ್ ಪ್ರಮೀಳಾ ಅಯ್ಯಪ್ಪ (ತಾಮನೆ–ಗುಡ್ಡಂಡ) ದಂಪತಿ ಪುತ್ರಿಯಾಗಿದ್ದಾರೆ.

ಕೆ.ವಿ.ಶ್ರೀಮೂರ್ತಿ ನಿಧನ

ಪೊನ್ನಂಪೇಟೆ, ಮೇ 22–ಸಮೀಪದ ಬಾಳೆಲೆಯ ವಿಜಯಲಕ್ಷ್ಮಿ ಪದವಿ ಪೂರ್ವ ಕಾಲೇಜು ನಿವೃತ್ತ ಪ್ರಾಂಶುಪಾಲ ಕೆ.ವಿ.ಶ್ರೀಮೂರ್ತಿ(66) ಶನಿವಾರ ನಿಧನರಾದರು.



ಮೂಲತಃ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರಾದ ಶ್ರೀಮೂರ್ತಿ ಅವರು 1985ರಲ್ಲಿ ಬಾಳೆಲೆಯ ವಿಜಯಲಕ್ಷ್ಮಿ ಪದವಿ ಪೂರ್ವ ಕಾಲೇಜಿಗೆ ಅರ್ಥಶಾಸ್ತ್ರ ಉಪನ್ಯಾಸಕರಾಗಿ ಸೇರ್ಪಡೆಗೊಂಡು ವೃತ್ತಿ ಬದುಕು ಆರಂಭಿಸಿ, ನಂತರ 1990ರಿಂದ 2016ರವರೆಗೆ 26 ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಈ ಅವಧಿಯಲ್ಲಿ ಅಂದಿನ ಕೊಡಗು ಜಿಲ್ಲಾ ಸಂಯುಕ್ತ ಪದವಿಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರದಂದು ಹುಟ್ಟೂರಿನಲ್ಲಿ ನೆರವೇರಿತು.

ಇವರ ನಿಧನಕ್ಕೆ ಬಾಳೆಲೆ ಸೆಂಟರ್ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಅಳಮೆಂಗಡ ಬೋಸ್ ಮಂದಣ್ಣ, ನಿವೃತ್ತ ಪ್ರಾಂಶುಪಾಲ ಡಾ. ಜೆ. ಸೋಮಣ್ಣ ಅವರು ಸಂತಾಪ ಸೂಚಿಸಿದ್ದಾರೆ.

ಬೇಟೋಳಿ ಗ್ರಾಮ ಪಂಚಾಯಿತಿ ಕೆಡಿಪಿ ಸಭೆ



ವಿರಾಜಪೇಟೆ, ಮೇ 22–ವಿರಾಜಪೇಟೆ ಬಳಿಯ ಬೇಟೋಳಿ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಅಧ್ಯಕ್ಷೆ ಬಿ.ಜೆ.ಯಶೋದ ಅವರ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಗ್ರಾಮದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯ ಮೊದಲಿಗೆ ವಿರಾಜಪೇಟೆ ಪಶುಪಾಲನಾ ಸಹಾಯಕ ನಿರ್ದೇಶಕ ಡಾ. ತಮ್ಮಯ್ಯ ಮಾತನಾಡಿ, ರಾಷ್ಟ್ರೀಯ ಕಾರ್ಯಕ್ರಮಗಳಾದ ಜಾನುವಾರುಗಳಿಗೆ ಮತ್ತು ಹೆಣ್ಣು ಕರುಗಳಿಗೆ ಕಾಲುಬಾಯಿ ಲಸಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸಾರ್ವಜನಿಕರು ಮುತುವರ್ಜಿ ವಹಿಸಿ ಮುಂಜಾಗೃತ ಕ್ರಮವಾಗಿ ಜಾನುವಾರುಗಳಿಗೆ ವರ್ಷಕ್ಕೊಮ್ಮೆ ಲಸಿಕೆ ಹಾಕಿಸುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ವಿರಾಜಪೇಟೆ ಕೃಷಿ ಅಧಿಕಾರಿ ಲವಿನ್ ಮಾದಪ್ಪ ಮಾತನಾಡಿ, ಈಗಾಗಲೇ ಮಳೆ ಪ್ರಾರಂಭವಾಗಿ, ಕೃಷಿಕರಿಗೆ ಬಿತ್ತನೆ ಬೀಜ ನೀಡಲಾಗುತ್ತಿದೆ. ಕೃಷಿಕರು ತಮ್ಮ ಭೂಮಿಯ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಸಾವಯವ ಗೊಬ್ಬರವನ್ನೇ ಬಳಸುವಂತಾಗಬೇಕು. ಕೃಷಿ ಇಲಾಖೆಯಿಂದ ಹಿಡುವಳಿದಾರ ಫಲನುಭವಿಗಳಿಗೆ ಕೃಷಿ ಉಪಕರಣ ಸಾಮಗ್ರಿ, ಸಹಾಯಧನವನ್ನು ನೀಡಲಾಗುವುದು. ಇದಕ್ಕೆ ಆರ್‌ಟಿಸಿ ಸೇರಿದಂತೆ ಸೂಕ್ತ ದಾಖಲೆಗಳು ಅಗತ್ಯ ಎಂದರು.

ಗ್ರಾಮ ಲೆಕ್ಕಾಧಿಕಾರಿ ಕಸ್ತೂರಿ ಮಾತನಾಡಿ, ಸರ್ಕಾರದ ಸೌಲಭ್ಯ ಜನರ ಮನೆ ತಲುಪಿಸುವಂತಹ ಕಾರ್ಯಕ್ರಮವು ತಹಸೀಲ್ದಾರ್ ಮುಖಂತರ ಹಮ್ಮಿಕೊಳ್ಳಲಾಗಿದೆ. ಗ್ರಾಪಂ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗುವಂತ ಗ್ರಾಮಒನ್ ಎಂಬ ಉತ್ತಮ ಯೋಜನೆ ಪ್ರಾರಂಭಗೊಂಡಿದ್ದು, ಬಿಪಿಎಲ್ ಕಾರ್ಡ್ ಇರುವವರಿಗೆ ಪಿಂಚಣಿ ಸೇರಿದಂತೆ ಇತರೆ ಸೌಲಭ್ಯಗಳು ಪಂಚಾಯಿತಿ ಮೂಲಕ ತಲುಪಲಿದೆ ಎಂದು ಮಾಹಿತಿ ನೀಡಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಣಿ, ಎಲ್ಲಾ ಇಲಾಖೆಗಳಿಗೆ ಮಾಹಿತಿ ನೀಡಿದ್ದರೂ ಕೆಲವು ಅಧಿಕಾರಿಗಳು ಸಭೆಗೆ ಗೈರಾಗಿದ್ದಾರೆ ಎಂದ ಅವರು, ಬೇಟೋಳಿ ಪಂಚಾಯಿತಿ ಮೂಲಕ ನಡೆಯುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿ ಗ್ರಾಮಸ್ಥರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಪಂಚಾಯಿತಿ ಉಪಾಧ್ಯಕ್ಷೆ ವೈ.ಎಂ. ಶಾಂತಿ, ಸದಸ್ಯರಾದ ಎ.ಎ.ವಸಂತ್ ಕಟ್ಟಿ, ಸಿ.ಎಸ್.ಸುದೀಶ್, ಎಂ.ಎಂ.ರಜಾಕ್, ಕೆ.ಹೆಚ್. ಅಲೀಮ, ಪಿ.ಎಂ.ಲಕ್ಷ್ಮಿ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಬಿ.ಆರ್.ಗಾಯತ್ರಿ, ಕೃಷಿ ಪತ್ತಿನ ಸಹಕಾರ ಸಂಘದ ವ್ಯವಸ್ಥಾಪಕಿ ಇಂದಿರಾ ಮಾತನಾಡಿದರು. ಹೆಗ್ಗಳ ರಾಮನಗರ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು, ಗ್ರಂಥಾಲಯ, ಆರೋಗ್ಯ ಕೇಂದ್ರದ ಸಿಬ್ಬಂದಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಸಭೆಯಲ್ಲಿದ್ದರು.

ಒಂದನೇ ಪುಟದಿಂದ

ಸಿಎಂ ನಿಯೋಗ ಪಯಣ

ದೇಶಕ್ಕೆ ವಿದೇಶಿ ನೇರ ಬಂಡವಾಳ ಅತಿ ಹೆಚ್ಚು ಬಂದಿದೆ. ಇದರಲ್ಲಿ ನಂಬರ್ ಒನ್ ಪಾಲು ಕರ್ನಾಟಕಕ್ಕೆ ಹರಿದು ಬಂದಿದೆ. ನಾಳೆ ಮತ್ತು ನಾಡಿದ್ದು ದಾವೋಸ್ ವಿಶ್ವ ಆರ್ಥಿಕ ಒಕ್ಕೂಟದ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದೇವೆ. ಸಮ್ಮೇಳನದಲ್ಲಿ ವಿಶ್ವದ ಹೆಸರಾಂತ ಪ್ರಮುಖರನ್ನು ಮತ್ತು ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಲಾಗುವುದು. ಹಲವಾರು ಜನ ರಾಜ್ಯದಲ್ಲಿ ಬಂಡವಾಳ ಹೂಡಲು ಮುಂದೆ ಬಂದಿದ್ದಾರೆ. ವಿಶೇಷವಾಗಿ ನವೆಂಬರ್‌ನಲ್ಲಿ ರಾಜ್ಯದಲ್ಲಿ ನಡೆಯಲಿರುವ ಗ್ಲೋಬಲ್ ಇನ್ವೆಸ್ಟ್ ಮೀಟ್‌ಗೆ ಬಹುದೊಡ್ಡ ಪ್ರತಿಕ್ರಿಯೆ ಸಿಗುವ ವಿಶ್ವಾಸವಿದೆ ಎಂದು ಹೇಳಿದರು. ಇದೇ ವೇಳೆ ಸಿಎಂ ಭೇಟಿ ಮಾಡಿದ ಸಚಿವರಾದ ಮುನಿರತ್ನ, ಗೋಪಾಲಯ್ಯ, ಸಿ.ಸಿ.ಪಾಟೀಲ್, ಭೈರತಿ ಬಸವರಾಜು ಮುಂತಾದವರು ದಾವೋಸ್ ಪ್ರವಾಸಕ್ಕೆ ಅಭಿನಂದಿಸಿ ಶುಭ ಕೋರಿದರು.

ಬೊಮ್ಮಾಯಿಯವರು 2ನೇ ಬಾರಿಗೆ ದಾವೋಸ್ ಶೃಂಗ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಹಿಂದೆ ಜಲಸಂಪನ್ಮೂಲ ಖಾತೆ ಸಚಿವರಾಗಿದ್ದಾಗ ದಾವೋಸ್ ಪ್ರವಾಸ ಕೈಗೊಂಡಿದ್ದರು. ಸಿಎಂ ಆದ ಬಳಿಕ ಈಗ 2ನೇ ಬಾರಿಗೆ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ಜಪಾನ್‌ಗೆ ಪ್ರಧಾನಿ ಮೋದಿ ಭೇಟಿ

ಬಗ್ಗೆ ಚರ್ಚಿಸಲು ಕ್ವಾಡ್ ನಾಯಕರಿಗೆ ಈ ಶೃಂಗಸಭೆ ವೇದಿಕೆ ಒದಗಿಸಲಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಗ್ಚಿ ಹೇಳಿದ್ದಾರೆ. ಮೋದಿ ಅವರು ಜಪಾನ್ ಪ್ರಧಾನಿ ಫುಮಿಯೊ ಕಿಷಿದಾ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಜತೆಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಹಾಗೂ ಜಪಾನ್‌ನ ಪ್ರಧಾನಮಂತ್ರಿಗಳ ಜತೆ ಸಭೆ ಸೇರಿದಂತೆ ಒಟ್ಟು 40 ಗಂಟೆಗಳ ಅವಧಿಯಲ್ಲಿ 23 ಕಾರ್ಯಕ್ರಮಗಳಲ್ಲಿ ಪ್ರಧಾನಿ ಮೋದಿ ಭಾಗವಹಿಸಲಿದ್ದಾರೆಂದು ಸಚಿವಾಲಯ ತಿಳಿಸಿದೆ. ಕ್ವಾಡ್ ಶೃಂಗ ಎಂದರೆ ಕ್ವಾಡ್ರಿಲೇಟರಲ್ ಸೆಕ್ಯುರಿಟಿ ಡೈಲಾಗ್. ಚತುರ್ಭುಜ ಶೃಂಗ ಎಂದು ಕರೆಯಲಾಗುತ್ತದೆ. ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಅಮೆರಿಕ ಎಂಬ ನಾಲ್ಕು ಪ್ರಜಾಪ್ರಭುತ್ವ ರಾಷ್ಟ್ರಗಳ ಗುಂಪು ಇದಾಗಿದೆ. ಕ್ವಾಡ್ ಕಲ್ಪನೆಯನ್ನು 2007ರಲ್ಲಿ ಮೊದಲ ಬಾರಿಗೆ ಪ್ರಧಾನಮಂತ್ರಿ ಶಿಂಜೊ ಅಬೆ ಅವರು ಪ್ರಸ್ತಾಪಿಸಿದರು. ಚೀನಾದ ಒತ್ತಡದಿಂದಾಗಿ ಆಸ್ಟ್ರೇಲಿಯಾವು ಇದರಿಂದ ಹಿಂದೆ ಸರಿದ ಕಾರಣ ಈ ಕಲ್ಪನೆಯು ಮುಂದುವರೆಯಲು ಸಾಧ್ಯವಾಗಲಿಲ್ಲ. ಅಂತಿಮವಾಗಿ 2017ರಲ್ಲಿ ಈ ನಾಲ್ಕು ದೇಶಗಳು ಈ ಒಕ್ಕೂಟ ರಚಿಸಿದವು. ಈ ನಾಲ್ಕು ರಾಷ್ಟ್ರಗಳು ಅಡೆತಡೆಯಿಲ್ಲದ ಕಡಲ ವ್ಯಾಪರಾ, ಭದ್ರತೆಯ ಸಾಮಾನ್ಯ ಹಿತಾಸಕ್ತಿಯನ್ನು ಬೆಂಬಲಿಸುವುದು ಸೇರಿದಂತೆ ಹಲವು ಉದ್ದೇಶಗಳನ್ನು ಹೊಂದಿವೆ.

ನೌಕರರು ಗ್ರ್ಯಾಚುಟಿಗೆ ಅರ್ಹರು

ಪಾವತಿಸಲಾಗಿದೆ. ಉದ್ಯೋಗಿಗಳು ದಿನಗೂಲಿ ನೌಕರರಾಗಿದ್ದ ಸಮಯವನ್ನು ಗ್ರ್ಯಾಚುಟಿಗೆ ಪರಿಗಣಿಸಿಲ್ಲ. ಅದನ್ನು ಒಪ್ಪಲಾಗದು ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಕೆ.ವಿ.ಪುಟ್ಟರಾಜು ಮತ್ತಿತರರು ಸರಕಾರದ ನಾನಾ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಅವರಿಗೆ ಕಟ್ ಆಫ್ ದಿನಾಂಕ ನೀಡಿ ಅವರುಗಳ ಸೇವೆಯನ್ನು ಖಾಯಂಗೊಳಿಸಲಾಯಿತು. ಆ ಸಿಬ್ಬಂದಿ ಸೇವಾವಧಿ ಪೂರೈಸಿ ನಿವೃತ್ತರಾದರು. ಆನಂತರ ಅವರಿಗೆ ನಿಯಮದಂತೆ ಪಿಂಚಣಿ ಮತ್ತು ಗ್ರ್ಯಾಚುಟಿ ನೀಡಲಾಗಿದೆ. ಆದರೆ ಅವರಿಗೆ ದಿನಗೂಲಿ ನೌಕರರಾಗಿ ದುಡಿದ ಅವಧಿಯನ್ನು ಗ್ರ್ಯಾಚುಟಿ ನೀಡಲು ಪರಿಗಣಿಸಿರಲಿಲ್ಲ. ಅದನ್ನು ಪ್ರಶ್ನಿಸಿ ಅವರು ಸಕ್ಷಮ ಪ್ರಾಧಿಕಾರದ ಮೊರೆ ಹೋಗಿದ್ದರು. ಪ್ರಾಧಿಕಾರ ಅವರಿಗೆ ಸೇವೆ ಖಾಯಂ ಆಗುವ ಮುನ್ನ ಸಲ್ಲಿಸಿದ್ದ ಅವಧಿಗೂ ಗ್ರ್ಯಾಚುಟಿ ನೀಡುವಂತೆ ಆದೇಶಿಸಿತ್ತು. ಆ ಆದೇಶ ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

ಸಾಕ್ಷರತೆಗೆ ಐಒಎ ಆಸಕ್ತಿ

ಈ ವಿಚಾರವನ್ನು ಹಂಚಿಕೊಂಡಿದೆ. ಈ ವೇಳೆ ಅಶ್ವತ್ಥ ನಾರಾಯಣ್ ಅವರು, ಕರ್ನಾಟಕದ ಸಾವಿರಾರು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡೇಟಾ ಸಾಕ್ಷರತೆ ಕುರಿತು ಮಾತುಕತೆ ನಡೆಸಿದ್ದಾರೆ. ಅಶ್ವತ್ಥ ನಾರಾಯಣ್ ಅವರೊಂದಿಗೆ ಮಾತುಕತೆ ನಡೆಸಿದ ನಂತರ ಅನಲಿಟಿಕ್ಸ್ ಐಒಎ ಪ್ರತಿನಿಧಿ ಡಾ.ಕ್ಲೇರ್ ವಾಲ್ಶ್ ಈ ಕುರಿತು ಪ್ರತಿಕ್ರಿಯೆ ನೀಡಿದ್ದು, ಈ ಕಾರ್ಯಕ್ರಮಗಳಿಗೆ ಸಂಸ್ಥೆಯು ವಿಶೇಷ ನಿಧಿಯನ್ನು ತಾನೇ ಹೊಂದಿಸಲಿದ್ದು, ಇದಕ್ಕಾಗಿ ಕರ್ನಾಟಕ ಸರ್ಕಾರವು ಯಾವುದೇ ವೆಚ್ಚ ಮಾಡಬೇಕಾಗಿಲ್ಲ. ವಿದ್ಯಾರ್ಥಿಗಳ ಜೊತೆಗೆ ಸರ್ಕಾರದ ಮಾಹಿತಿ ತಂತ್ರಜ್ಞಾನ(ಐಟಿ) ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೂ ನಮ್ಮ ಸಂಸ್ಥೆಯ ಸದಸ್ಯತ್ವ ನೀಡುವ ಮೂಲಕ, ಅವರೆಲ್ಲ ತಮ್ಮ ಅನಲಿಟಿಕ್ಸ್ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ಡೇಟಾ ಸಾಕ್ಷರತೆ ಕಲಿಸುವುದು ನಮ್ಮ ಸದುದ್ದೇಶವಾಗಿದೆ ಎಂದರು.

ಎಂಜಿನಿಯರಿಂಗ್ ಕಲಿಯುತ್ತಿರುವವರಿಗೆ ಅನಲಿಟಿಕ್ಸ್ ಜಾಣ್ಮೆ ಕಲಿಸುವುದು ಅಗತ್ಯವಾಗಿದೆ. ಈ ಮೂಲಕ ಐಒಎ ಸಾಮಾಜಿಕ ಜಾಲತಾಣಗಳಲ್ಲಿ ಹೇರಳ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದು. ನಮ್ಮ ಸಂಸ್ಥೆಯು ವಿಶ್ವಾದ್ಯಂತ ಅನಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಅಧ್ಯಯನ, ಅನ್ವಯಿಕತೆ ಮತ್ತು ವ್ಯಾಪಕ ಪ್ರಸಾರಕ್ಕೆ ಕಟಿಬದ್ಧವಾಗಿದೆ ಎಂದು ವಾಲ್ಶ್ ತಿಳಿಸಿದರು. ಕರ್ನಾಟಕ ಸರ್ಕಾರದೊಂದಿಗೆ ಸಹಭಾಗಿತ್ವ ಹೊಂದಲು ಸಂಸ್ಥೆಯು ಹೊಂದಿರುವ ಆಸಕ್ತಿಯು 2022ರ ಬೆಂಗಳೂರು ತಂತ್ರಜ್ಞಾನ ಸಮಾವೇಶದ ಆಶಯಗಳಿಗೆ ಸರಿಯಾಗಿದೆ. ಈ ಮೂಲಕ ಅನಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಎರಡನ್ನೂ ಉಪಯೋಗಿಸುತ್ತಿರುವ ಐಟಿ, ಬಿಟಿ ಮತ್ತು ಡೀಪ್ ಟೆಕ್ ವಲಯದ ಅಗ್ರಗಣ್ಯ ಕಂಪನಿಗಳು ಮತ್ತು ನವೋದ್ಯಮಗಳನ್ನು ಬೆಸೆಯಬಹುದು. ಸಂಸ್ಥೆಯು ಭಾರತದಲ್ಲಿ ಅಂತಾರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮದೊಂದಿಗೆ(ಐಎಸ್‌ಡಿಸಿ) ಕೆಲಸ ಮಾಡುತ್ತಿದೆ ಎಂದು ಮಾಹಿತಿ ನೀಡಿದರು.

ಚುನಾವಣೆಗೆ ಸಿದ್ಧತೆ

ಅತೀ ಹೆಚ್ಚು ಜನಸಂಖ್ಯೆಯಿರುವ ಗ್ರಾಮದ ಹೆಸರನ್ನು ಆ ಚುನಾವಣಾ ಕ್ಷೇತ್ರದ ಹೆಸರನ್ನಾಗಿ ಪರಿಗಣಿಸತಕ್ಕದ್ದು.

ಜಿಲ್ಲಾ ಪಂಚಾಯತ್: ತಾಲೂಕಿನಲ್ಲಿರುವ ನಗರ ಸ್ಥಳೀಯ ಸಂಸ್ಥೆಗೆ ಸೇರ್ಪಡೆಯಾಗಿರುವ ಅಥವಾ ಸ್ಥಳೀಯ ಸಂಸ್ಥೆಯಾಗಿ ಮೇಲ್ದರ್ಜೆಗೇರಿಸಿರುವ ಗ್ರಾಮಾಂತರ ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಗ್ರಾಮೀಣ ಪ್ರದೇಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ತಾಲೂಕಿನಲ್ಲಿರುವ ಗ್ರಾಮ ಪಂಚಾಯತಿಗಳನ್ನು ವಿಭಜಿಸದೇ ಪೂರ್ಣ ಗ್ರಾಮ ಪಂಚಾಯತಿಗಳನ್ನು ಒಟ್ಟುಗೂಡಿಸಿ, ಜಿಪಂ ಚುನಾವಣೆ ಕ್ಷೇತ್ರ ರಚನೆಯಾಗುವಂತೆ ನೋಡಿಕೊಳ್ಳತಕ್ಕದ್ದು. ಈ ರೀತಿ ಗ್ರಾಪಂಗಳನ್ನು ಒಟ್ಟುಗೂಡಿಸುವ ಸಂದರ್ಭದಲ್ಲಿ ಅಕ್ಕಪಕ್ಕದ (ಭೌಗೋಳಿಕವಾಗಿ ಹೊಂದಿಕೊಂಡಂತಿರುವ) ಗ್ರಾಪಂಗಳನ್ನು ಒಟ್ಟುಗೂಡಿಸಬೇಕು. ಹಾಗೂ ಈ ಒಗ್ಗೂಡುವಿಕೆಯಿಂದ ಉಂಟಾಗುವ ಪ್ರದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸುಲಭವಾಗಿ ಸಂಚರಿಸುವಂತಿರಬೇಕು ಮತ್ತು ಯಾವುದೇ ಅಡೆತಡೆಗಳು ಇಲ್ಲದಿರುವುದನ್ನು ಅಂದರೆ ಬೆಟ್ಟ-ಗುಡ್ಡ, ಅರಣ್ಯ, ಜಲಾಶಯ, ನದಿ ಮುಂತಾದ ಅಡಚಣೆಗಳು ಇಲ್ಲದಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಪ್ರತಿಯೊಂದು ಚುನಾವಣಾ ಕ್ಷೇತ್ರದ ಜನಸಂಖ್ಯೆಯಲ್ಲಿ ಸಾಧ್ಯವಾದಮಟ್ಟಿಗೆ ಹೆಚ್ಚಿನ ವ್ಯತ್ಯಾಸವಿರದಂತೆ ನಿಗಾ ವಹಿಸಬೇಕು. ಹೊಸದಾಗಿ ಕ್ಷೇತ್ರ ರಚನೆ ಮಾಡಬೇಕಾದ ಸಂದರ್ಭದಲ್ಲಿ ಮಾತ್ರ ಸದರಿ ಕ್ಷೇತ್ರದಲ್ಲಿನ ಅತೀ ಹೆಚ್ಚು ಜನಸಂಖ್ಯೆ ಇರುವ ಗ್ರಾಮದ ಹೆಸರನ್ನು ಆ ಚುನಾವಣಾ ಕ್ಷೇತ್ರದ ಹೆಸರನ್ನಾಗಿ ಪರಿಗಣಿಸಬೇಕು. ಜಿಪಂ ಕಎತ್ರಗಳನ್ನು ರಚಿಸುವಾಗ ಯಾವುದೇ ತಾಪಂ ಕ್ಷೇತ್ರ 2 ಜಿಪಂ ಕ್ಷೇತ್ರಗಳ ವ್ಯಾಪ್ತಿಯಲ್ಲಿ ವಿಭಾಜನೆಯಾಗದಂತೆ ನೋಡಿಕೊಳ್ಳತಕ್ಕದ್ದು.


ಡಿಸಿಗಳ ಕರ್ತವ್ಯ: ಜಿಲ್ಲಾಧಿಕಾರಿಗಳು ತಾಪಂ ಹಾಗೂ ಜಿಪಂಗಳ ವ್ಯಾಪ್ತಿಯನ್ನು ನಿಯಮಾನುಸಾರ ಕೂಲಂಕುಷವಾಗಿ ಹಾಗೂ ಸ್ಥಳೀಯವಾಗಿ ಪರಿಶೀಲಿಸಿ ಕ್ಷೇತ್ರಗಳ ಗಡಿಗಳನ್ನು ಗುರುತಿಸತಕ್ಕದ್ದು. ಗಡಿಗಳನ್ನು ಗುರುತಿಸಿದ ನಂತರ ಪ್ರಸ್ತಾವನೆಗಳನ್ನು ಸೀಮಾ ನಿರ್ಣಯ ಆಯೋಗಕ್ಕೆ ಸಲ್ಲಿಸುವ ಪೂರ್ವದಲ್ಲಿ ಒಟ್ಟು ಪ್ರಕ್ರಿಯೆಯ ಭಾಗವಾಗಿ ಸ್ಥಳೀಯರ ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಪಡೆದು, ಪರಿಶೀಲಿಸಿ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು. ಹೊಸದಾಗಿ ರಚಿಸುವ ಜಿಪಂ ಅಥವಾ ತಾಪಂ ಕ್ಷೇತ್ರಗಳ ಹೆಸರನ್ನು ನಿಗದಿಪಡಿಸುವಾಗ ಅತೀ ಹೆಚ್ಚು ಜನಸಂಖ್ಯೆ ಇರುವ ಗ್ರಾಮದ ಹೆಸರನ್ನಲ್ಲದೇ, ಐತಿಹಾಸಿಕ, ಶೈಕ್ಷಣಿಕ, ಸಾಂಸ್ಕೃತಿಕ, ವಾಣಿಜ್ಯ ಇತ್ಯಾದಿ ಮಹತ್ವವಿರುವ ಗ್ರಾಮದ ಹೆಸರನ್ನು ಪರಿಗಣಿಸತಕ್ಕದ್ದು. ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಆಯೋಗಕ್ಕೆ ಸಲ್ಲಿಸುವಾಗ ಪ್ರಸ್ತಾವನೆಗೊಳಪಡುವ ಕ್ಷೇತ್ರಗಳ ನಕ್ಷೆಗಳನ್ನು ಕಳುಹಿಸಕೊಡತಕ್ಕದ್ದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಸರ್ಕಾರದ ಈ ಮಾರ್ಗಸೂಚಿಯ ಅಧಿಸೂಚನೆಯನ್ನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಗೋದ ಸದಸ್ಯ ಕಾರ್ಯದರ್ಶಿ ಕೆ.ಬಿ. ಅಂಜನಪ್ಪ ಮೇ 19ರಂದು ಹೊರಡಿಸಿದ್ದಾರೆ.

ಗಿನ್ನಿಸ್ ದಾಖಲೆಗೆ ಸಿದ್ಧತೆ

2017ರಲ್ಲಿ ಗಿನ್ನಿಸ್ ದಾಖಲೆ ಬರೆಯಲಾಗಿದೆ. ಅಂದಿನಿಂದಲೇ ಪ್ರಧಾನಿ ಮೋದಿಯವರಿಗೆ ಆಹ್ವಾನ ನೀಡುತ್ತಲೇ ಇದ್ದೇವೆ. ಆದರೆ ಮಧ್ಯೆ ಎರಡು ವರ್ಷ ಕೋವಿಡ್ ಕಾರಣದಿಂದ ಸಾಧ್ಯವಾಗಲಿಲ್ಲ. ಈಗ ಅವರು ಬರುವುದಾಗಿ ಪ್ರಕಟಿಸಿದ್ದು, ಇದೊಂದು ದೊಡ್ಡ ಹಬ್ಬದಂತೆ ಪರಿಣಮಿಸಲಿದೆ. ಎಲ್ಲಾ ರಾಜಕೀಯ ಮತ್ತು ಧಾರ್ಮಿಕ ಮುಖಂಡರು ಯೋಗ ದಿನೋತ್ಸವಕ್ಕೆ ಸಹಕಾರ ನೀಡಲಿದ್ದಾರೆ. 2 ಲಕ್ಷ ಯೋಗ ಪಟುಗಳನ್ನು ಸೇರಿಸುವ ಪ್ರಯತ್ನ ನಡೆಸುತ್ತಿದ್ದೇವೆ. ಈ ಮೂಲಕ ಮತ್ತೆ ದಾಖಲೆ ಮಾಡುವ ಗುರಿ ಹೊಂದಿದ್ದೇವೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ, ಲಕ್ಷ್ಮಿನಾರಾಯಣ ಶೆಣೈ, ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಪಿ.ಕೃಷ್ಣಯ್ಯ, ರಾಮ್‌ದೇವ್ ಪತಂಜಲಿ ಸಂಸ್ಥೆಯ ಶಶಿಕುಮಾರ್, ದೇವಯ್ಯ, ಯೋಗ ಒಕ್ಕೂಟದ ಶಾಂತಾರಾಂ, ಗಣೇಶ್‌ಕುಮಾರ್, ಪತಂಜಲಿ ಯೋಗ ಫೌಂಡೇಷನ್‌ನ ಸತ್ಯನಾರಾಯಣ್, ಗೋಪಾಲಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಸುಸೂತ್ರವಾಗಿ ನೆರವೇರಿದ ಪ್ರಾಥಮಿಕ ಪದವೀಧರ ಶಿಕ್ಷಕರ ನೇಮಕಾತಿ ಪರೀಕ್ಷೆ

33 ಕೇಂದ್ರದಲ್ಲಿ ಪರೀಕ್ಷೆ ಬರೆದ 5,497 ಅಭ್ಯರ್ಥಿಗಳು





ಮೈಸೂರಿನ ಟೆರೇಷಿಯನ್ ಕಾಲೇಜಲ್ಲಿ ಭಾನುವಾರ ನಡೆದ ಶಿಕ್ಷಕರ ನೇಮಕಾತಿ ಪರೀಕ್ಷೆ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತೆರಳಿ ಪರಿಶೀಲಿಸಿದರು. ಈ ವೇಳೆ ಡಿಡಿಪಿಐ ರಾಮಚಂದ್ರರಾಜೇ ಅರಸ್, ಯೋಜನಾ ಸಮನ್ವಯಾಧಿಕಾರಿ ಕೆ.ಸುರೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಮೇ 22(ಎಂಟಿವೈ)- ಶಿಕ್ಷಕರ ನೇಮಕಾತಿಗಾಗಿ ಮೈಸೂರಲ್ಲಿ ಕಳೆದ ಎರಡು ದಿನಗಳಿಂದ ನಡೆದ ಲಿಖಿತ ಪರೀಕ್ಷೆ ಭಾನುವಾರ ಸುಸೂತ್ರವಾಗಿ ನೆರವೇರಿತು. ಬಿಗಿ ಭದ್ರತೆಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ಬೆಳಗ್ಗೆ ನಡೆದ 5,497 ಮಂದಿ ಹಾಜರಾದರೆ, ಮಧ್ಯಾಹ್ನ ನಡೆದ ಮತ್ತೊಂದು ಪರೀಕ್ಷೆಯಲ್ಲಿ 5,484 ಅಭ್ಯರ್ಥಿಗಳು ಪರೀಕ್ಷೆ ಬರೆದರು.

ರಾಜ್ಯದಲ್ಲಿ ಕೆಲವು ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ನಡೆಯುತ್ತಿರುವ ಪ್ರಾಥಮಿಕ ಪದವೀಧರ ಶಿಕ್ಷಕರ ನೇಮಕಾತಿಗೆ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ, ಬಿಗಿಭದ್ರತೆಯಲ್ಲಿ ನಡೆಸಲಾಯಿತು. ಮೈಸೂರು ಜಿಲ್ಲೆಯಲ್ಲಿ 33 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಯಿತು.

ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆದ ವಿಷಯವಾರು(ಗಣಿತ, ಸಮಾಜ, ವಿಜ್ಞಾನ, ಸಮಾಜವಿಜ್ಞಾನ) ಪರೀಕ್ಷೆಯಲ್ಲಿ 8312 ಮಂದಿ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿದ್ದರು. ಅವರರಲ್ಲಿ 5497 ಮಂದಿ ಪರೀಕ್ಷೆಗೆ ಹಾಜರಾದರೆ 2815 ಮಂದಿ ಗೈರು ಹಾಜರಾದರು. ಬೆಳಗ್ಗೆ ನಡೆದ ಪರೀಕ್ಷೆಯಲ್ಲಿ ಒಂದು ಗಂಟೆ ಅವಧಿಯಲ್ಲಿ ಓಎಂಆರ್ ಶೀಟ್‌ನಲ್ಲಿ ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಿಸಿದರೆ, ಉಳಿದ ಎರಡು ಗಂಟೆಯಲ್ಲಿ ವಿವರಾತ್ಮಕವಾಗಿ ಉತ್ತರ ಬರೆಯುವ ಪರೀಕ್ಷೆ ಎದುರಿಸಿದರು.

ಮಧ್ಯಾಹ್ನ 3 ಗಂಟೆಯಿಂದ 5.30ರವರೆಗೆ ನಡೆದ ಭಾಷಾ ಸಾಮರ್ಥ್ಯ(ಕನ್ನಡ, ಇಂಗ್ಲಿಷ್, ಹಿಂದಿ) ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿದ್ದ 8312 ಮಂದಿಯಲ್ಲಿ 5484 ಮಂದಿ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದರೆ, 2828 ಅಭ್ಯರ್ಥಿಗಳು ಗೈರು ಹಾಜರಾದರು. ಪರೀಕ್ಷೆಗೂ ಮುನ್ನ ಬಿಗಿ ಭದ್ರತೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಯಿತು. ಒಟ್ಟು 11 ರೂಟ್‌ಗಳಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಗಾಧಿಕಾರಿಗಳ ಸಮ್ಮುಖದಲ್ಲಿ ಪ್ರಶ್ನೆ ಪತ್ರಿಕೆ ರವಾನಿಸಲಾಯಿತು.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿಭದ್ರತೆ ಕಲ್ಪಿಸಲಾಗಿತ್ತು. ಪ್ರತಿ ಕೇಂದ್ರದಲ್ಲೂ ಮೆಟಲ್ ಡಿಟೆಕ್ಟರ್ ಅಳವಡಿಸಿ, ಸೂಕ್ಷ್ಮವಾಗಿ ಪರಿಶೀಲಿಸಿದ ಬಳಿಕವಷ್ಟೇ ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳನ್ನು ಬಿಡಲಾಯಿತು. ಒಂದೊಂದು ಕೊಠಡಿಯಲ್ಲಿ 20 ಮಂದಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿತ್ತು. ಪರೀಕ್ಷಾ ಅಕ್ರಮ ತಡೆಗಟ್ಟಲು ಸಿಟ್ಟಿಂಗ್ ಸ್ಕ್ವಾಡ್, ಸಂಚಾರಿ ಸ್ಕ್ವಾಡ್ ತಂಡ ರಚಿಸಲಾಗಿತ್ತು ಅಲ್ಲದೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಡಿಡಿಪಿಐ ರಾಮಚಂದ್ರರಾಜೇ ಅರಸ್, ಯೋಜನಾ ಸಮನ್ವಯಾಧಿಕಾರಿ ಕೆ.ಸುರೇಶ್ ಹಾಗೂ ಇನ್ನಿತರರು ಪರಿಶೀಲಿಸಿದರು.

ದಕ್ಷಿಣ ಪದವೀಧರ ಕ್ಷೇತ್ರ: ಬಿಜೆಪಿ ಅಭ್ಯರ್ಥಿ ಪರ ಇಂದಿನಿಂದ ಶಾಸಕ ರಾಮದಾಸ್ ಮತಯಾಚನೆ



ಮೈಸೂರು, ಮೇ 22 (ಆರ್‌ಕೆಬಿ)- ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮೈ.ವಿ.ರವಿಶಂಕರ್ ಪರವಾಗಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ಕೃಷ್ಣರಾಜ ಕ್ಷೇತ್ರದಲ್ಲಿ ಸೋಮವಾರ (ಮೇ 23)ದಿಂದ ಮೇ 26ರವರೆಗೆ ಮತಯಾಚನೆ ಮಾಡಲಿದ್ದಾರೆ ಎಂದು ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 23ರಂದು ಬೆಳಗ್ಗೆ 8 ಗಂಟೆಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರನ್ನು ಭೇಟಿ ಮಾಡಿ, ಮತಯಾಚಿಸುವ ಮೂಲಕ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಸತತ ನಾಲ್ಕು ದಿನಗಳ ಕಾಲ ಕ್ಷೇತ್ರದ ಎಲ್ಲಾ ಮತದಾರರನ್ನು ಖುದ್ದಾಗಿ ಭೇಟಿ ಮಾಡಿ ಮತ ಯಾಚಿಸಲಿರುವ ಶಾಸಕರು, ಆ ಮತಗಟ್ಟೆ ವ್ಯಾಪ್ತಿಯಲ್ಲಿ ಬರುವ ಶಾಲಾ-ಕಾಲೇಜುಗಳು, ಬ್ಯಾಂಕುಗಳು, ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ, ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತ ಯಾಚಿಸಲಿದ್ದಾರೆ ಎಂದು ಹೇಳಿದರು.

ಕೃಷ್ಣರಾಜ ಕ್ಷೇತ್ರದಲ್ಲಿ 10 ಸಾವಿರಕ್ಕೂ ಹೆಚ್ಚು ಪದವೀಧರ ಮತದಾರರಿದ್ದು, ಅವರನ್ನು ಖುದ್ದು ಭೇಟಿ ಮಾಡಿ ಮತಯಾಚನೆ ಮಾಡಲಿದ್ದಾರೆ. ಜೊತೆಗೆ ಮಳೆ ಹಾನಿ ಪ್ರದೇಶಗಳಿಗೂ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ಸಂಘಟನಾತ್ಮಕವಾಗಿ ಶಕ್ತಿಯುತವಾಗಿದ್ದು, ನಿರಂತರವಾಗಿ ಎರಡು ವರ್ಷಗಳಿಂದ ಕ್ಷೇತ್ರದ 270 ಬೂತ್‌ಗಳಲ್ಲಿರುವ ಮತದಾರರ ಪಟ್ಟಿಯ ಪ್ರತಿಯೊಂದು ಪೇಜ್‌ಗೆ ಒಬ್ಬ ಪ್ರಮುಖರನ್ನು ನೇಮಿಸಿ, ಬೂತ್ ಸಮಿತಿ ರಚಿಸಿ, ಬೂತ್ ಮಟ್ಟದಿಂದ 6 ಮೋರ್ಚಾಗಳಲ್ಲಿ ಸಮಿತಿ ರಚಿಸಲಾಗಿದೆ ಪ್ರತಿ ಬೂತ್‌ಗಳಲ್ಲಿ ಮಹಿಳಾ ಮೋರ್ಚಾ, ಯುವ ಮೋರ್ಚಾಗಳ ಮೂಲಕ ಪಕ್ಷ ಸಂಘಟನೆಗೆ ಒತ್ತು ನೀಡಿದ್ದಾರೆ. ಹೀಗಾಗಿ ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಪರ ಮತಯಾಚಿಸಲು ಇದರಿಂದ ಅನುಕೂಲವಾಗಿದೆ. ಕಳೆದ ಬಾರಿ ಶೇ.40ರಷ್ಟು ಮತದಾನವಾಗಿತ್ತು. ಈ ಬಾರಿ ಶೇ.80ಕ್ಕೂ ಹೆಚ್ಚು ಮತದಾನ ಮಾಡಿಸುವ ನಿಟ್ಟಿನಲ್ಲಿ ಶ್ರಮಿಸಲಾಗುವುದು. ಹೀಗಾಗಿ ಈ ಬಾರಿ ಪಕ್ಷದ ಅಭ್ಯರ್ಥಿ ಅಭೂತಪೂರ್ವ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕ್ಷೇತ್ರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಓಂಶ್ರೀನಿವಾಸ್, ಜೆ.ನಾಗೇಂದ್ರಕುಮಾರ್, ದಕ್ಷಿಣ ಶಿಕ್ಷಕರ ಕ್ಷೇತ್ರದ ಸಂಚಾಲಕ ಜೆ.ರವಿ, ಮುಖಂಡ ಪ್ರಸಾದ್‌ಬಾಬು ಉಪಸ್ಥಿತರಿದ್ದರು.

ಕಿವುಡು ಮಕ್ಕಳ ಶಾಲೆಗೆ ಶೇ.100 ಫಲಿತಾಂಶ



ಮೈಸೂರು, ಮೇ 22(ಎಸ್‌ಬಿಡಿ)- ಮೈಸೂರಿನ ಕಿವುಡು ಮಕ್ಕಳ 2 ವಿಶೇಷ ವಸತಿ ಶಾಲೆಗಳ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಬನ್ನಿಮಂಟಪದ ಶ್ರೀ ಸಾಯಿರಂಗ ವಿದ್ಯಾಸಂಸ್ಥೆ 'ಉಚಿತ ಕಿವುಡು ಗಂಡು ಮಕ್ಕಳ ವಸತಿ ಶಾಲೆ'ಯ ಎಲ್ಲಾ ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. 15 ವರ್ಷಗಳಿಂದ ಈ ಶಾಲೆಯ 10 ನೇ ತರಗತಿ ವಿದ್ಯಾರ್ಥಿಗಳು ಸಾಮಾನ್ಯ ಮಕ್ಕಳೊಂದಿಗೆ ಪಬ್ಲಿಕ್ ಪರೀಕ್ಷೆ ಬರೆದು ಶೇ.100ರ ಫಲಿತಾಂಶ ಪಡೆಯುತ್ತಿರುವುದು ವಿಶೇಷ.

ಆರ್.ನಾಗೇಂದ್ರ ಶೇ.86.82, ಎಸ್.ಮಹೇಂದ್ರ ಶೇ.86.82, ಸುದರ್ಶನರೆಡ್ಡಿ ಶೇ.86.12, ಜಿ.ಎಂ.ಶಿವಶಂಕರ್ ಶೇ.85.65, ಎನ್.ಎಂ.ಭರತ್ ಶೇ.84.94, ಜಿ.ತಿಮ್ಮರಾಜ ಶೇ.84.71, ವಿ.ಚೆಲುವರಾಜು ಶೇ.81.41, ಸಂದೇಶ್ ಜಾನ್ ಗುರುನಾಳ್ ಶೇ.81.18, ಆರ್.ಮಂಜುನಾಥ ಶೇ.80.94, ಬಿ.ಡಿ.ರೋಹಿತ್ ಶೇ.80, ಮೋಹನ್ ಕುಮಾರ್ ಶೇ.79.53, ತೇಜು ಶೇ.79.06, ಸಿ.ಶಿವಮೂರ್ತಿ ಶೇ.78.82, ಹರೀಶ್ ಮಲ್ಲಪ್ಪ ಬಂಡ್ರೋಳಿ ಶೇ.73.65 ಹಾಗೂ ಎಂ.ರೋಹಿತ್ ಶೇ.71.29 ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಈ ಬಾರಿಯೂ ಶೇ.100ರಷ್ಟು ಸಾಧನೆಯಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.

ಈ ಶಾಲೆಯಲ್ಲಿ 1 ರಿಂದ 10ನೇ ತರಗತಿಯವರೆಗೆ 120 ವಿದ್ಯಾರ್ಥಿಗಳಿದ್ದು, ವಸತಿ, ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ ಸಂಪೂರ್ಣ ಉಚಿತವಾಗಿದೆ. ಜೊತೆಗೆ ಟೈಲರಿಂಗ್, ಕಸೂತಿ ಕೆಲಸ, ಚಿತ್ರಕಲೆ, ಕಂಪ್ಯೂಟರ್ ತರಬೇತಿಯಂತಹ ವೃತ್ತಿ ಕೌಶಲ್ಯಗಳನ್ನೂ ಕಲಿಸಲಾಗುತ್ತಿದೆ.

ಪುಟ್ಟೀರಮ್ಮ ಶಾಲೆ: ವಾಗ್ದೇವಿನಗರ ಟೆಲಿಕಾಂ ಬಡಾವಣೆಯ ಶ್ರೀಮತಿ ಪುಟ್ಟೀರಮ್ಮ ಕಿವುಡು ಮಕ್ಕಳ ವಿಶೇಷ ಉಚಿತ ವಸತಿ ಶಾಲೆಯ ಹೆಚ್.ಪಿ.ಸಾನಿಕ ಶೇ.76, ಚೈತ್ರ ಶೇ.72.41, ಡಿ.ಚಂದನ ಶೇ.69.88, ವಿ.ಹೆಚ್.ಪೂಜಾ ಶೇ.69.88, ವಿ.ಎಂ.ತೇಜು ಶೇ.69.64, ಎಂ.ಐಶ್ವರ್ಯ ಶೇ.68.70, ಹೆಚ್.ಎಸ್.ಪೂಜಾ ಶೇ.68.47, ಸಿ.ಆರ್.ಅರ್ಚನ ಶೇ.64.23, ಆರ್.ಹರ್ಷಿತ ಶೇ.62.11 ಹಾಗೂ ಎಂ.ಪ್ರಿಯಾ ಶೇ.52.70 ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು, ಶಾಲೆ ಶೇ.100ರಷ್ಟು ಫಲಿತಾಂಶ ಪಡೆದಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ.





'ಭಾರತ ಪರಿಕ್ರಮ' ಬೈಕ್ ರ್‍ಯಾಲಿ: ಮೊಳಗಿದ ಭಾರತ್ ಮಾತಾಕೀ ಜೈ ಘೋಷಣೆ

- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಡೆದ ರ್‍ಯಾಲಿ
- ಮಹಿಳಾ, ಪುರುಷ ಬೈಕ್ ಸವಾರರು ಭಾಗಿ



ಮೈಸೂರು, ಮೇ 22 (ಆರ್‌ಕೆಬಿ)- ಕ್ರೀಡಾ ಭಾರತಿ ಮೈಸೂರು, ಮೈಸೂರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಭಾನುವಾರ ಬೆಳಗ್ಗೆ ಮೈಸೂರಿನಲ್ಲಿ 'ಭಾರತ ಪರಿಕ್ರಮ' ಬೈಕ್ ರ್‍ಯಾಲಿ ಆಯೋಜಿಸಲಾಗಿತ್ತು.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಎನ್‌ಸಿಸಿ ಮೈಸೂರು ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್. ಮೆನನ್ ಹಸಿರು ಬಾವುಟ ಪ್ರದರ್ಶಿಸುವ ಮೂಲಕ ಬೈಕ್ ರ್‍ಯಾಲಿಗೆ ಚಾಲನೆ ನೀಡಿದರು.

ಮೈಸೂರು ನಗರ ಮತ್ತು ಸುತ್ತಮುತ್ತಲಿನ 50 ಮಹಿಳೆಯರು ಸೇರಿದಂತೆ 100 ಬೈಕ್ ಸವಾರರು ಭಾಗವಹಿಸಿದ್ದ ರ್‍ಯಾಲಿ ನಜರ್‌ಬಾದ್ ಪೊಲೀಸ್ ಠಾಣೆ, ಚಾಮರಾಜ ಒಡೆಯರ್ ವೃತ್ತ, ಕೆ.ಆರ್.ವೃತ್ತ, ಆಯುರ್ವೇದ ಆಸ್ಪತ್ರೆ ವೃತ್ತ, ಮಿಲೇನಿಯಂ ವೃತ್ತ ಮೂಲಕ ಸಾಗಿ ಬಳಿಕ ಶ್ರೀರಂಗಪಟ್ಟಣಕ್ಕೆ ತೆರಳಿತು. ರ್‍ಯಾಲಿ ಸಂದರ್ಭದಲ್ಲಿ ಬೈಕ್ ಸವಾರರು ಮತ್ತು ಇತರರು 'ಭಾರತ್ ಮಾತಾ ಕೀ ಜೈ' ಘೋಷಣೆ ಕೂಗಿ ಉತ್ಸಾಹದಿಂದ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಎನ್‌ಸಿಸಿ ಮೈಸೂರು ಗ್ರೂಪ್ ಕಮಾಂಡರ್ ಕರ್ನಲ್ ಮೆನನ್, ಭಾರತದ ಏಕತೆಯನ್ನು ಪ್ರದರ್ಶಿಸಲು ಮತ್ತು ದೇಶಕ್ಕೆ ಗೌರವ ಸಲ್ಲಿಸಲು ರ್‍ಯಾಲಿಯಲ್ಲಿ ಭಾಗವಹಿಸಿರುವ ಬೈಕ್ ಸವಾರರಿಗೆ ಶುಭ ಕೋರಿದರು.

ಮೈಸೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕ ಸುರೇಶ್ ಕಂದಾವರ ಸ್ವಾಗತಿಸಿದರು. ಕಾರ್ಯಕ್ರಮ ಸಂಘಟಕ ಸಂತೋಷ್ ಶ್ರೀರಂಗಪಟ್ಟಣ, ಶೌರ್ಯ ಪ್ರಶಸ್ತಿ ಪುರಸ್ಕೃತ ಎಚ್.ಎನ್.ಮಹೇಶ್, ಆದಿತ್ಯ ಆಸ್ಪತ್ರೆ ಮುಖ್ಯಸ್ಥ ಡಾ.ಚಂದ್ರಶೇಖರ್, ಕ್ರೀಡಾ ಭಾರತಿ ಮೈಸೂರು ಜಿಲ್ಲಾಧ್ಯಕ್ಷ ಡಾ.ಪಿ.ಎನ್.ಗಣೇಶ್‌ಕುಮಾರ್, ಕಾರ್ಯದರ್ಶಿ ಪೈ.ಅಮೃತ್ ಪುರೋಹಿತ್, ನಗರಾಧ್ಯಕ್ಷ ಸುಬ್ರಹ್ಮಣ್ಯ, ಕಾರ್ಯದರ್ಶಿ ವಿನೋದ್ ಕದಂ, ಸಂಯೋಜಕ ಎಚ್.ಎಂ.ಶ್ರೀಕಂಠ ಇನ್ನಿತರರು ಉಪಸ್ಥಿತರಿದ್ದರು.

ಬೆಳಗ್ಗೆ 8.55ರಿಂದ 9 ಗಂಟೆ ಅವಧಿಯಲ್ಲಿ ಮೈಸೂರು ಸೇರಿದಂತೆ ದೇಶಾದ್ಯಂತ 225 ಸ್ಥಳಗಳಲ್ಲಿ ಇಂದು 'ಭಾರತ ಪರಿಕ್ರಮ' ಬೈಕ್ ರ್‍ಯಾಲಿ ನಡೆದು, ಮೂರು ಗಂಟೆ ಅವಧಿಯಲ್ಲಿ ಇಡೀ ದೇಶವನ್ನು ಸುತ್ತುವ ಗುರಿಯೊಂದಿಗೆ ರ್‍ಯಾಲಿ ನಡೆಸಲಾಯಿತು. ಇದರ ಅಂಗವಾಗಿ ಮೈಸೂರಿನಿಂದಲೂ ರ್‍ಯಾಲಿ ನಡೆಸಲಾಯಿತು.



ಶಶಾಂಕ್ ಹಾಗೂ ಅರಕೆರೆ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ಅಭಿಮಾನಿಗಳ ಬಳಗದವರು ಅವರುಗಳು ಮಾಜಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಅವರಿಗೆ ಮೋಸಂಬಿ ಹಾರ ಹಾಕುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಯೂರಾಲಜಿ ಸಂಬಂಧಿಸಿದ ಲೈವ್ ಆಪರೇಷನ್ ಕಾರ್ಯಾಗಾರ



ಮೈಸೂರು,ಮೇ 22(ಎಂಟಿವೈ)- ಯೂರಾಲಜಿ (ಮೂತ್ರಶಾಸ್ತ್ರ)ಗೆ ಸಂಬಂಧಿಸಿದ ಕ್ಲಿಷ್ಟಕರವಾದ 9 ಆಪರೇಷನ್ ಅನ್ನು ಲೈವ್ ಆಗಿ ತಜ್ಞ ವೈದ್ಯರು ಮಾಡುವ ಮೂಲಕ ನೂರಾರು ವೈದ್ಯರಿಗೆ ಶಸ್ತ್ರಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿಆರ್‌ಐ)ಯ ಯೂರಾಲಜಿ ವಿಭಾಗ, ಮೈಸೂರು ಸೊಸೈಟಿ ಆಫ್ ಜೆನಿಟೋ-ಯೂರಿನರಿ ಸರ್ಜನ್ಸ್ ಅಸೋಸಿಯೇಷನ್ ಹಾಗೂ ಕರ್ನಾಟಕ ಯೂರಾಲಜಿ ಅಸೋಸಿಯೇಷನ್ (ಕೆಯುಎ) ಸಂಯುಕ್ತಾಶ್ರಯದಲ್ಲಿ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಲೈವ್ ಆಪರೇಷನ್ ಆನ್ ಪೆರಿನಿಯಲ್ ಸರ್ಜರಿಸ್' ಕಾರ್ಯಾಗಾರದಲ್ಲಿ ವಿವಿಧೆಡೆಯಿಂದ 250ಕ್ಕೂ ಯೂರಾಲಜಿ ವಿಭಾಗದ ವೈದ್ಯರು ಪಾಲ್ಗೊಂಡು ಕ್ಲಿಷ್ಟಕರ ಶಸ್ತ್ರಚಿಕಿತ್ಸೆ ಮಾಡುವುದನ್ನು ಪರದೆಯ ಮೇಲೆ ನೇರಪ್ರಸಾರದ ಮೂಲಕ ವೀಕ್ಷಿಸಿ, ಕೆಲವು ಮಹತ್ತರವಾದ ಅಂಶಗಳನ್ನು ಕರಗತ ಮಾಡಿಕೊಂಡರು.

ಕಳೆದ ಕೆಲ ವರ್ಷಗಳಿಂದ ಲೈವ್ ಆಪರೇಷನ್ ಕಾರ್ಯಾಗಾರವನ್ನು ನಡೆಸುವ ಮೂಲಕ ಕ್ಲಿಷ್ಟಕರವಾದ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಮಾಹಿತಿ ನೀಡಲಾಗುತ್ತಿದೆ. ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ಲೈವ್ ಆಪರೇಷನ್ ಕಾರ್ಯಾಗಾರ ಸ್ಥಗಿತಗೊಂಡಿತ್ತು. ಈ ಬಾರಿ ಕಾರ್ಯಾಗಾರವನ್ನು ಮುಂದುವರೆಸಲಾಗಿದೆ. ಈ ಸಾಲಿನ ಕಾರ್ಯಾಗಾರದಲ್ಲಿ ವಿವಿಧೆಡೆಯಿಂದ ವೈದ್ಯರು ಪಾಲ್ಗೊಂಡು ಗಮನ ಸೆಳೆದರು.

ಕಾರ್ಯಾಗಾರವನ್ನು ಎಂಎಂಸಿಆರ್‌ಐ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಎನ್.ದಿನೇಶ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದೇಶದ ವಿವಿಧೆಡೆಯಿಂದ ಹೆಸರಾಂತ ವೈದ್ಯರು ಲೈವ್ ಆಪರೇಷನ್ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವ ಮೂಲಕ ಬಡರೋಗಿಗಳಿಗೆ ಮಾತ್ರವಲ್ಲದೆ, ನಮ್ಮಲ್ಲಿನ ವೈದ್ಯರಲ್ಲಿ ಇನ್ನಷ್ಟು ಮಾಹಿತಿ ದೊರಕಿಸಿಕೊಡುವುದಕ್ಕೆ ಸಹಕರಿಸುತ್ತಿದ್ದಾರೆ. ಇಂತಹ ಕಾರ್ಯಾಗಾರಗಳು ವೈದ್ಯರು ಹಾಗೂ ರೋಗಿಗಳಿಗೂ ಸಹಕಾರಿಯಾಗಲಿದೆ. ಈ ಕಾರ್ಯಾಗಾರಕ್ಕೆ ಎಂಎಂಸಿಆರ್‌ಐ ಸ್ಟೋನ್ ಬಿಲ್ಡಿಂಗ್‌ನಲ್ಲಿರುವ ಆಪರೇಷನ್ ಥಿಯೇಟರ್ ಹಾಗೂ ಯುರೋಲಜಿ ವಿಭಾಗದ ಆಪರೇಷನ್ ಥಿಯೇಟರ್ ಬಳಸಿಕೊಳ್ಳಲಾಗಿದ್ದು, ಒಟ್ಟು 9 ಮಂದಿ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ನಡೆಸಿ ನೇರವಾಗಿ ಪ್ರಸಾರ ಮಾಡಲಾಗಿದೆ. ದೆಹಲಿ, ಪೂಜಾ ಹಾಗೂ ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಹೆಸರಾಂತ ತಜ್ಞ ವೈದ್ಯರು ಪಾಲ್ಗೊಂಡಿರುವುದು ಸಂತೋಷವನ್ನುಂಟು ಮಾಡಿದೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿ, 50ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಿರುವ ಹೆಸರಾಂತ ಯೂರಾಲಜಿಸ್ಟ್ ಡಾ. ಸಂಜಯ್ ಕುಲಕರ್ಣಿ ಪಾಲ್ಗೊಂಡಿದ್ದರು. ಅವರೊಂದಿಗೆ ಡಾ.ಪಂಕಜ್ ಜೋಶಿ, ಡಾ. ದೀಪಕ್ ದುಬೆ, ಡಾ.ಗೌತಮ್ ಬಂಗಾ, ಡಾ. ಪ್ರಮೋದ್ ಕೃಷ್ಣಪ್ಪ, ದೆಹಲಿಯ ಡಾ. ಹೇಮಂತ್ ಗೋಯಲ್ ಶಸ್ತ್ರ ಚಿಕಿತ್ಸೆ ನಡೆಸಿಕೊಟ್ಟರು.

ಕಾರ್ಯಾಗಾರದಲ್ಲಿ ಕಾರ್ಯಾಗಾರದ ಸಂಘಟನಾ ಸಮಿತಿಯ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಸಂಘಟನಾ ಕಾರ್ಯದರ್ಶಿ ಡಾ. ಜೆ.ಬಿ. ನರೇಂದ್ರ, ಸಂಘಟನಾ ಉಪಾಧ್ಯಕ್ಷ ಡಾ.ಹೆಚ್.ಎಸ್.ಪ್ರಕಾಶ್, ಸಂಘಟನಾ ಸಹಕಾರ್ಯದರ್ಶಿ ಡಾ.ಹೆಚ್.ಎಲ್.ಪ್ರಸಾದ್, ಮೈಸೂರು ಸೊಸೈಟಿ ಆಫ್ ಜೆನಿಟೋ-ಯೂರಿನರಿ ಸರ್ಜನ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಟಿ.ಪಿ. ದಿನೇಶ್‌ಕುಮಾರ್, ಕಾರ್ಯದರ್ಶಿ ಡಾ. ಜಿ.ಕಿರಣ್ ಕುಮಾರ್, ಕರ್ನಾಟಕ ಯೂರಾಲಜಿ ಅಸೋಸಿಯೇಷನ್(ಕೆಯುಎ) ಖಜಾಂಚಿ ಡಾ. ಸಚಿನ್ ಧಾರವಾಡ್ಕರ್, ಡಾ. ಮಾದಪ್ಪ ಡಾ. ಪ್ರಕಾಶ್ ಪ್ರಭು, ಡಾ. ಜೇವಿಯರ್ ಡಿಸೋಜ, ಡಾ. ಅಮೃತ್ ರಾಜ್‌ಗೌಡ, ಡಾ.ಎಸ್.ಹಿಮಾಮಣಿ ಇನ್ನಿತರರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಹಿರಿಯ ವೈದ್ಯರಾದ ಡಾ. ಪಿ.ವಿ. ವೇಣುಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

ಮೈ.ವಿ.ರವಿಶಂಕರ್ ಗೆಲುವಿಗೆ 4 ಜಿಲ್ಲೆಗಳಲ್ಲೂ ಮಿಂಚಿನ ಸಂಚಾರ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ತಿ.ನರಸೀಪುರ ಮೇ 22(ಎಸ್‌ಕೆ)– ಕಳೆದ 30 ವರ್ಷದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವಿಗೆ 4 ಜಿಲ್ಲೆಗಳಲ್ಲೂ ಮಿಂಚಿನ ಸಂಚಾರ ನಡೆಸುತ್ತಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ಕಾರ್ಯಗ್ರಾಮದಲ್ಲಿ ಕಾರ್ಯಕರ್ತರು ಹಾಗೂ ಪದವೀಧರರ ಸಭೆ ಉದ್ದೇಶಿಸಿ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಿ ಮಾತನಾಡಿದ ಅವರು, ಪಕ್ಷದಿಂದ ಸಾಕಷ್ಟು ಪ್ರಮಾಣದಲ್ಲಿ ಪದವೀಧರರನ್ನು ನೋಂದಣಿ ಮಾಡಿಸಿದ್ದೇವೆ. 33 ಸಾವಿರ ಮಂದಿಯನ್ನು ಭೇಟಿ ಮಾಡಿ ಮತಯಾಚಿಸಿದ್ದೇವೆ. ವಿವಿಧ ಇಲಾಖೆಗಳಲ್ಲಿ ಸಭೆ ನಡೆಸಿ ಮತಯಾಚಿಸುತ್ತಿದ್ದೇವೆ. ಕಳೆದ ಬಾರಿ ಬಹಳ ಕಡಿಮೆ ಅಂತರದಲ್ಲಿ ರವಿಶಂಕರ್ ಸೋತಿದ್ದರು. ಈ ಬಾರಿ ಅವರ ಗೆಲುವಿಗೆ ಪಕ್ಷದ ಕಾರ್ಯಕರ್ತರು, ಮುಖಂಡರು ಶ್ರಮಿಸುತ್ತಿದ್ದಾರೆ. ಕಳೆದ ಬಾರಿ ನಮ್ಮ ಸರ್ಕಾರ ಇರಲಿಲ್ಲ. ಈಗ ಕೇಂದ್ರ ಹಾಗೂ ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರವಿದೆ. ಜನಪರ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಪಕ್ಷದ ಶಾಸಕರು, ಸಂಸದರಿದ್ದಾರೆ. ಈ ಬಾರಿ ನಮಗೆ ಗೆಲುವು ಸಿಗಲಿದೆ ಎಂಬ ವಿಶ್ವಾಸವಿದೆ ಎಂದರು.

ಸರ್ಕಾರದ ಯಾವುದೇ ವಿಧೇಯಕಗಳಿಗೆ ಅನುಮೋದನೆ ಪಡೆಯಲು ನಮಗೆ ವಿಧಾನ ಪರಿಷತ್‌ನಲ್ಲಿ ಸದಸ್ಯರ ಕೊರತೆ ಇದೆ. ಈ 4 ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ ಪರಿಷತ್‌ನಲ್ಲಿ ಪಕ್ಷದ ಸದಸ್ಯರು ಹೆಚ್ಚಾಗುತ್ತಾರೆ. ಆಗ ಯಾವುದೇ ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಪಡೆಯಲು ಸಾಧ್ಯ. ಜೆಡಿಎಸ್‌ನಿಂದ ಜಯರಾಂ ಕೀಲಾರ ಅವರಿಗೆ ಟಿಕೆಟ್ ನೀಡಿಲ್ಲ ಎಂದು ಮರಿತಿಬ್ಬೇಗೌಡರು ಅಸಮಾಧಾನಗೊಂಡಿದ್ದಾರೆ ಅವರಿಂದ ನಮ್ಮ ಪಕ್ಷಕ್ಕೆ ಬೆಂಬಲ ಸಿಗಲಿದೆ ಎಂದರು.

ದೇಶವನ್ನು ಸಶಕ್ತವಾಗಿ ಕಟ್ಟಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಾಪಿಸಿ, ಯುವಜನರಿಗೆ ಉಜ್ವಲ ಅವಕಾಶಗಳನ್ನು ಕಲ್ಪಿಸುತ್ತಿರುವ ಪ್ರಧಾನಿ ಮೋದಿ ನೇತೃತ್ವದ ಸರ್ಕಾರವನ್ನು ಮತ್ತಷ್ಟು ಬಲಪಡಿಸಲು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸಲು ಕಾರ್ಯಕರ್ತರು ಶ್ರಮಿಸಬೇಕು. ಇದಕ್ಕಾಗಿ ಪದವೀಧರರ ಮನವೊಲಿಸಿ.

– ಕಾಪು ಸಿದ್ದಲಿಂಗಸ್ವಾಮಿ, ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ.

ಈ ವೇಳೆ ವರುಣಾ ವಿಧಾನಸಭಾ ಕ್ಷೇತ್ರಾಧ್ಯಕ್ಷ ಕೆ.ಬಿ.ವಿಜಯಕುಮಾರ್, ರಾಜ್ಯ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾಸೋಮಶೇಖರ್, ಪ್ರಧಾನ ಕಾರ್ಯ ದರ್ಶಿ ದೇವನೂರು ಪ್ರತಾಪ್, ಜಿಪಂ ಮಾಜಿ ಅಧ್ಯಕ್ಷ ಕಾಪು ಸಿದ್ದವೀರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಚಿನ್ನಂಬಳ್ಳಿ ಮಂಜುನಾಥ್, ಜಿಪಂ ಮಾಜಿ ಸದಸ್ಯ ಬಿ.ಎನ್.ಸದಾನಂದ, ಗುರುಸ್ವಾಮಿ, ಕಾರ್ಯ ಪ್ರಶಾಂತ, ಅಳಗಂಚಿ ಶಿವಯ್ಯ, ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ಎಂ.ವೆಂಕಟರಮಣಶೆಟ್ಟಿ, ಚಿಕ್ಕಳ್ಳಿ ಕೃಷ್ಣಮೂರ್ತಿ, ಸಿ.ಎಂ. ಮಹದೇವಯ್ಯ, ದಂಡಿಕೆರೆ ಶ್ರೀಧರ್, ಲಲಿತಾದ್ರಿಪುರ ಮಹ ದೇವ, ಕಾರ್ಯ ಕುಮಾರ್, ಎಲ್‌ಐಸಿ ಮಲ್ಲಣ್ಣ, ಪ್ರಧಾನ ಕಾರ್ಯದರ್ಶಿಗಳಾದ ಎ.ಎನ್. ರಂಗುನಾಯಕ, ವರುಣಾ ಮಂಜುನಾಥ್, ನಗರ್ಲೆ ಮಹೇಶ, ಆನಂದರಾಜು, ಚಿಕ್ಕ ಮಹದೇವ, ಎಂ.ಸೋಮಣ್ಣ, ಕುಪ್ಪೇಗಾಲ ಶಿವಬಸಪ್ಪ, ಹಲಗಯ್ಯನಹುಂಡಿ ಸೋಮಶೇಖರ್, ಸಣ್ಣಮಲ್ಲಿಪುರ ಮಹೇಶ, ಶರತ್ ಪುಟ್ಟಬುದ್ಧಿ, ಹಿಟ್ಟುವಳ್ಳಿ ಗೋಪಾಲ, ವರಕೂಡು ಪ್ರಕಾಶ, ಪಿ.ಜಿ.ಮಹೇಶ, ರಾಂಪುರ ನಾಗರಾಜು, ನಂದೀಶ, ನಗರ್ಲೆ ಚಿನ್ನಸ್ವಾಮಿ, ಸರಗೂರು ಮಹದೇವ ನಾಯಕ ಹಾಗೂ ಪಕ್ಷದ ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ತೊಗಟವೀರ ಸಮಾಜದಿಂದ ಶ್ರೀಚೌಡೇಶ್ವರಿ ಅಮ್ಮನವರ ವರ್ಧಂತಿ



ಸರಗೂರು, ಮೇ 22(ನಾಗೇಶ್)– ಪಟ್ಟಣದಲ್ಲಿ ತೊಗಟವೀರ ಸಮಾಜದಿಂದ ಶ್ರೀಚೌಡೇಶ್ವರಿ ಅಮ್ಮನವರ ದೇವಾಲಯದ ಗೋಪುರ ನವೀಕರಣ, ಕಳಶ ಪ್ರತಿಷ್ಠಾಪನೆ, ಮಹಾ ಚಂಡಿಕಾ ಹೋಮ ಹಾಗೂ 82ನೇ ವರ್ಧಂತಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ವರ್ಧಂತಿ ಅಂಗವಾಗಿ ಪಟ್ಟಣವನ್ನು ತಳಿರು ತೋರಣ ಹಾಗೂ ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ ಹವನ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ಪೂಜಾ ಕೈಂಕರ್ಯಗಳು ಜರುಗಿದವು. ಬಳಿಕ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ದೇವಿಯ ಪಲ್ಲಕ್ಕಿ ಉತ್ಸವ ಮೂರ್ತಿಯನ್ನು ವಿವಿಧ ಜಾನಪದ ಕಲಾ ಪ್ರಕಾರಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಹರಕೆ ಹೊತ್ತ ಭಕ್ತರು ಬಾಯಿಬೀಗ, ಅಲಗುಸೇವೆ, ಸ್ತೋತ್ರಪಠಣ, ಖಡ್ಗಸ್ತೋತ್ರ ಪಠಣ, ಭಜನೆ ನಡೆಸಿದರು. ಬಳಿಕ ದೇವಾಲಯದಲ್ಲಿ ದೇವಿಗೆ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ಮೇ 22 ರಂದು ಶಾಲಾ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಮೇ 23ರಂದು ಅನ್ನದಾಸೋಹ, ರಾತ್ರಿ ಸುಗಮ ಸಂಗೀತ ಕಾರ್ಯಕ್ರಮ, ಮೇ 24ರಂದು ಮಧ್ಯಾಹ್ನ ವಸಂತೋತ್ಸವ, ಬಣ್ಣ ದೋಕುಳಿ ನಂತರ ಶ್ರೀ ಚೌಡೇಶ್ವರಿ ಅಮ್ಮನವರ ಪಲ್ಲಕಿ ಉತ್ಸವ ನಡೆಸಿ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ನಡೆಸಲಾಗುವುದು ಎಂದು ತೊಗಟವೀರ ಕ್ಷತ್ರಿಯ ಸಮಾಜದ ಮುಖಂಡರು ತಿಳಿಸಿದ್ದಾರೆ.

ಭಾರೀ ಮಳೆಗೆ ಮನೆ ಗೋಡೆ ಕುಸಿತ



ತಿ.ನರಸೀಪುರ, ಮೇ 22 (ಎಸ್‌ಕೆ)– ಇತ್ತೀಚೆಗೆ ಸುರಿದ ಭಾರೀ ಮಳೆಗೆ ತಾಲೂಕಿನ ಕಳ್ಳಿಪುರ ಗ್ರಾಮದ ನಿವಾಸಿ ಗೌರಮ್ಮ ಎಂಬುವರಿಗೆ ಸೇರಿದ ಮನೆಗೋಡೆ ಕುಸಿದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಉಕ್ಕಲಗೆರೆ ಪಿಡಿಓ ಹೆಚ್.ಎಂ.ಕೃಷ್ಣಪ್ಪ ಭೇಟಿ ನೀಡಿ ಪರಿಶೀಲಿಸಿದರು. ಗೌರಮ್ಮ ಅವರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದು, ಗೋಡೆ ಕುಸಿತದಿಂದಾಗಿ ಅವರಿಗೆ ವಸತಿ ಸಮಸ್ಯೆ ಎದುರಾಗಿದೆ. ಕೂಡಲೇ ತಾಲೂಕು ಹಾಗೂ ಸ್ಥಳೀಯ ಆಡಳಿತ ಇತ್ತ ಗಮನಹರಿಸಿ ಪರಿಹಾರ ದೊರಕಿಸಿ ಕೊಡುವಂತೆ ಗ್ರಾಮದ ರೈತ ಮುಖಂಡ ಮಹದೇವಸ್ವಾಮಿ ಒತ್ತಾಯಿಸಿದ್ದಾರೆ.

ಗೋವಿಂದನಹಳ್ಳಿ ಗ್ರಾಪಂನಿಂದ ಬಡ ದಂಪತಿಗೆ ಆರ್ಥಿಕ ನೆರವು



ಹುಣಸೂರು, ಮೇ 22(ಕೆಕೆ)– ತಾಲೂಕಿನ ಗೋವಿಂದನಹಳ್ಳಿ ಗ್ರಾಪಂ ವತಿಯಿಂದ ದಾಸಪ್ಪ ಹಾಗೂ ಶೋಭಮ್ಮ ದಂಪತಿಗೆ 5 ಸಾವಿರ ರೂ.ಗಳ ಸಹಾಯ ಧನ ಚೆಕ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಗ್ರಾಪಂ ಅಧ್ಯಕ್ಷ ಪ್ರಸನ್ನ ಕುಮಾರ್, ದಾಸಪ್ಪ ದಂಪತಿಗಳು ಅನಾರೋಗ್ಯ ಪೀಡಿತರಾಗಿದ್ದು, ಚಿಕಿತ್ಸೆಗಾಗಿ ಹಣಕಾಸಿನ ಸಹಾಯ ಮಾಡುವಂತೆ ದಸಂಸ ಸಂಘಟನೆ ಮನವಿ ಸಲ್ಲಿಸಿತ್ತು. ಇದಕ್ಕೆ ಸ್ಪಂದಿಸಿ ಗ್ರಾಪಂ ಸಾಮಾನ್ಯ ಸಭೆಯಲ್ಲಿ ಈ ವಿಷಯ ಚರ್ಚಿಸಿ 5 ಸಾವಿರ ರೂ. ಸಹಾಯಧನ ನೀಡಲು ತೀರ್ಮಾನಿಸಲಾಯಿತು. ಅದರಂತೆ ಇಂದು ಚೆಕ್ ವಿತರಿಸಲಾಗುತ್ತಿದೆ ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ದಾಸಪ್ಪ, ಅವರ ಪತ್ನಿ ಶೋಭಮ್ಮ ಹಲವು ವರ್ಷಗಳಿಂದ ಭಿಕ್ಷಾಟನೆ ಮಾಡಿಕೊಂಡು ಗ್ರಾಪಂ ವ್ಯಾಪ್ತಿಯ ಡಾ.ಬಿ.ಆರ್.ಅಂಬೇಡ್ಕರ್ ನಗರದಲ್ಲಿ ಗುಡಿಸಿಲಿನಲ್ಲಿ ವಾಸವಿದ್ದರು. ಈ ದಂಪತಿ ಅನಾರೋಗ್ಯ ಪೀಡಿತರಾಗಿ ಚಿಕಿತ್ಸೆಗೆ ಹಣವಿಲ್ಲದೇ ಪರದಾಡುತ್ತಿದ್ದ ವೇಳೆ ಅವರಿಗೆ ದಸಂಸದಿಂದ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಗ್ರಾಪಂನಿಂದ ಹಣಕಾಸಿನ ನೆರವು ಕೊಡಿಸುವಂತೆ ತಾಪಂ ಇಓ ಗಿರೀಶ್‌ಗೆ ಮನವಿ ಸಲ್ಲಿಸಲಾಗಿತ್ತು. ಇದಕ್ಕೆ ಸ್ಪಂದಿಸಿದ ಅವರು ಗೋವಿಂದನಹಳ್ಳಿ ಪಿಡಿಓಗೆ ಆರ್ಥಿಕ ಸಹಾಯ ಮಾಡುವಂತೆ ನಿರ್ದೇಶನ ನೀಡಿದ್ದರು. ಅದರಂತೆ ಗ್ರಾಪಂ ಅಧ್ಯಕ್ಷರು, ಸದಸ್ಯರು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಈ ಬಡ ದಂಪತಿಗೆ ಆರ್ಥಿಕ ನೆರವು ನೀಡಿದ್ದಾರೆ ಎಂದರು. ಸರಿಯಾದ ನೆಲೆ ಇಲ್ಲದೇ ಸಂಕಷ್ಟದಲ್ಲಿ ಜೀವನ ನಡೆಸುತ್ತಿರುವ ಈ ದಂಪತಿಗೆ ಶಾಶ್ವತ ನೆಲೆ ಕಲ್ಪಿಸಲಾಗುವುದು ಎಂದರು. ಈ ವೇಳೆ ಪಿಡಿಓ ಗಿರೀಶ್, ಕಾರ್ಯದರ್ಶಿ ಮಹೇಶ್, ಬಿಲ್ ಕಲೆಕ್ಟರ್ ಲೋಕೇಶ್ ಇತರರಿದ್ದರು.

ಬೆಟ್ಟದಪುರ ಗ್ರಾಪಂ ಸದಸ್ಯರಾಗಿ ರೇಖಾ ಆಯ್ಕೆ



ಬೆಟ್ಟದಪುರ, ಮೇ 22 (ಶಿವದೇವ್)– ಇಲ್ಲಿನ ಗ್ರಾಪಂ ನೂತನ ಸದಸ್ಯರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರೇಖಾ ಆಯ್ಕೆಯಾಗಿದ್ದಾರೆ.

ಗ್ರಾಪಂ ಸದಸ್ಯರಾಗಿದ್ದ ರಾಜೇಶ್ವರಿ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು. ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರೇಖಾ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಅನಿತಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಭಾನುವಾರ ಪಿರಿಯಾಪಟ್ಟಣ ತಾಲೂಕು ಕಚೇರಿಯಲ್ಲಿ ನಡೆದ ಮತ ಎಣಿಕೆಯಲ್ಲಿ ರೇಖಾ 430 ಮತಗಳನ್ನು ಪಡೆದು ಜಯ ಗಳಿಸಿದರೆ, ಅನಿತಾ 421 ಮತ ಪಡೆದು ಪರಾಭವಗೊಂಡರು. 17 ಮತಗಳ ತಿರಸ್ಕೃತಗೊಂಡವು. ಚುನಾವಣಾಧಿಕಾರಿಯಾಗಿ ಶಿವಕುಮಾರ್ ಕಾರ್ಯ ನಿರ್ವಹಿಸಿದರು.

ನೂತನ ಸದಸ್ಯೆ ರೇಖಾ ಅವರನ್ನು ಶಾಸಕ ಕೆಮಹದೇವ್ ಸನ್ಮಾನಿಸಿದರು. ಬಳಿಕ ಮತನಾಡಿದ ಅವರು, ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಇದನ್ನರಿತ ಮತದಾರರು ಜೆಡಿಎಸ್ ಬೆಂಬಲಿಸಿ ರೇಖಾ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. ಹೀಗಾಗಿ ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಯುವ ಘಟಕದ ಅಧ್ಯಕ್ಷ ವಿದ್ಯಾಶಂಕರ್, ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸೌಮ್ಯ, ಸದಸ್ಯರಾದ ರಾಜಶೇಖರ್, ಅಯ್ಯರ್‌ಗಿರಿ, ಈಶ್ವರಾಚಾರ್, ಇಮ್ರಾನ್ ಪಾಷಾ, ಜೆಡಿಎಸ್ ಮುಖಂಡರಾದ ನವೀದಾಬಾನು, ಗಿರಿಗೌಡ, ಮುಖಂಡರಾದ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಬಿ.ಎನ್.ಗಿರೀಶ್, ಗುತ್ತಿಗೆದಾರ ಲೋಕೇಶ್, ಚಂದ್ರಕಾಂತ್, ಡಿ.ಟಿ.ಗಿರೀಶ್, ಕುಳ್ಳ ಕೆಂಪಯ್ಯ, ಪಟೇಲ್, ನಟೇಶ್, ಉದಯ, ಗುಂಡಣ್ಣ ಸೇರಿದಂತೆ ಇನ್ನಿತರರಿದ್ದರು.

ಟಿ.ಎಸ್.ಸುಬ್ಬಣ್ಣ ಪ್ರೌಢಶಾಲೆಗೆ ಶೇ.97.29 ರಷ್ಟು ಫಲಿತಾಂಶ

ನಂಜನಗೂಡು, ಮೇ 22(ಸುದರ್ಶನ್)– ತಾಲೂಕಿನ ಹುರ ಗ್ರಾಮದ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.97.29 ರಷ್ಟು ಫಲಿತಾಂಶ ಬಂದಿದೆ. ಮೂವರು ಅತ್ಯುನ್ನತ, 24 ಮಂದಿ ಉನ್ನತ ಶ್ರೇಣಿ, 7 ಪ್ರಥಮ, ಇಬ್ಬರು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆ ತೆಗೆದುಕೊಂಡಿದ್ದ 37 ವಿದ್ಯಾರ್ಥಿಗಳ ಪೈಕಿ 36 ಮಂದಿ ತೇರ್ಗಡೆಯಾಗಿದ್ದಾರೆ ಎಂದು ಶಾಲಾ ಮುಖ್ಯ ಶಿಕ್ಷಕ ಆರ್.ಪ್ರಕಾಶ್ ತಿಳಿಸಿದ್ದಾರೆ.

ಉಪ್ಪಾರ ಸಮಾಜದಿಂದ ವಿಜೃಂಭಣೆಯ ಶ್ರೀಭಗೀರಥ ಜಯಂತಿ



ಸರಗೂರು, ಮೇ 22(ನಾಗೇಶ್)– ತಾಲೂಕಿನ ಗೊಂತಗಾಲಹುಂಡಿ ಗ್ರಾಮದ ಉಪ್ಪಾರ ಸಮಾಜದಿಂದ ಶ್ರೀಭಗೀರಥ ಜಯಂತಿ ಹಾಗೂ ಸಿದ್ದಪಾಜಿ ಕಂಡಾಯ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಗ್ರಾಮದ ಸಿದ್ದಪಾಜಿ ದೇವಸ್ಥಾನವನ್ನು ತಳಿರು ತೋರಣ, ರಂಗೋಲಿ, ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯೇ ಗಣಪತಿ ಹೋಮ ಪುಣ್ಯಾಹ, ಕಳಶ ಪ್ರತಿಷ್ಠಾಪನೆ, ನವಗ್ರಹ ಹೋಮ, ಪೂಜಾ ಕೈಂಕರ್ಯ ಜರುಗಿದವು. ಬೆಳಗ್ಗೆ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಪೂರ್ಣ ಕುಂಭ ಕಳಶದೊಂದಿಗೆ ಶ್ರೀಭಗೀರಥ ಭಾವಚಿತ್ರವನ್ನು ವಾಹನದ ಮೇಲೆ ಪ್ರತಿಷ್ಠಾಪಿಸಿ ವಿವಿಧ ಹೂಗಳಿಂದ ಅಲಂಕರಿಸಿ ಸಿದ್ದಪಾಜಿ ಕಂಡಾಯ ಸೇರಿದಂತೆ ನಂದಿ ಕಂಬ, ಮಂಗಳ ವಾದ್ಯ, ಸತ್ತಿಗೆಯೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಹೆಣ್ಣು ಮಕ್ಕಳು ಕಳಶ ಹೊತ್ತು ಭಕ್ತಿ ಸಮರ್ಪಿಸಿದರು. ಹರಕೆ ಹೊತ್ತ ಭಕ್ತರು ಈಡಗಾಯಿ ಒಡೆದು ಭಕ್ತಿ ಸಮರ್ಪಿಸಿದರು. ನಂತರ ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಭಕ್ತರಿಗೆ ಅನ್ನದಾಸೋಹ ಏರ್ಪಡಿಸಲಾಗಿತ್ತು.

ನೇಣು ಬಿಗಿದ ಸ್ಥಿತಿಯಲ್ಲಿ ಕೂಲಿ ಕಾರ್ಮಿಕನ ಶವ ಪತ್ತೆ

ನಂಜನಗೂಡು, ಮೇ 22– ತಾಲೂಕಿನ ಸೂರಳ್ಳಿ ಗ್ರಾಮದ ಫೌಲ್ಟ್ರಿ ಫಾರಂವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಕೂಲಿ ಕಾರ್ಮಿಕನ ಶವ ಪತ್ತೆಯಾಗಿದೆ.

ಸೂರಳ್ಳಿ ಗ್ರಾಮದ ಶ್ರೀನಿವಾಸಶೆಟ್ಟಿ (40) ಮೃತ ಕೂಲಿ ಕಾರ್ಮಿಕ. ಮೈಸೂರು ಮೂಲದ ಉಮೇಶ್ ಎಂಬುವರಿಗೆ ಸೇರಿದ ಫೌಲ್ಟ್ರಿ ಫಾರಂನಲ್ಲಿ ಕಳೆದ ಒಂದು ವರ್ಷದಿಂದ ಶ್ರೀನಿವಾಸ್ ಕೆಲಸ ಮಾಡುತ್ತಿದ್ದ ಎನ್ನಲಾಗಿದ್ದು, ಇದು ಸಾವಲ್ಲ ಕೊಲೆ ಎಂದು ಮೃತನ ಪತ್ನಿ ರಾಜೇಶ್ವರಿ, ಮಗಳು ಸುಕನ್ಯಾ ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಸ್ಥಳಕ್ಕೆ ಎಸ್‌ಐ ಜಯರಾಂ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದು, ಘಟನೆಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಫೌಲ್ಟ್ರಿ ಫಾರಂ ಮಾಲೀಕ ಉಮೇಶ್ ತಿಳಿಸಿದ್ದಾರೆ.

ಸೂರಳ್ಳಿ ಮತ್ತು ಮಸಗೆ ಗ್ರಾಮಸ್ಥರು ಸಾರ್ವಜನಿಕ ಆಸ್ಪತ್ರೆ ಶವಾಗಾರದ ಎದುರು ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿ ಫೌಲ್ಟ್ರಿ ಫಾರಂ ಮಾಲೀಕನ ಬಂಧಿಸುವವರೆಗೂ ಶವ ಪಡೆಯಲು ನಿರಾಕರಿಸಿದ್ದಾರೆ.



ಎಸ್‌ಎಸ್‌ಎಲ್‌ಸಿಯಲ್ಲಿ 625 ಅಂಕ ಗಳಿಸಿದ ಬನ್ನೂರಿನ ಶ್ರೀಆದಿಚುಂಚನಗಿರಿ ಶಾಲೆ ವಿದ್ಯಾರ್ಥಿನಿ ಹಾಗೂ ಬಸವನಹಳ್ಳಿಯ ಮಹೇಶ್, ಲಕ್ಷ್ಮಿ ದಂಪತಿ ಪುತ್ರಿ ಬಿ.ಎಂ.ದಿಶಾ ಅವರನ್ನು ಎಂ.ಸಿ.ಸುಂದರೇಶನ್ ಟ್ರಸ್ಟ್‌ನಿಂದ ಸನ್ಮಾನಿಸಿ ಸ್ಕಾಲರ್‌ಶಿಪ್ ವಿತರಿಸಲಾಯಿತು. ಈ ವೇಳೆ ಬಿಜೆಪಿ ಯುವ ಮುಖಂಡ ಸಾಮ್ರಾಟ್ ಸುಂದರೇಶನ್, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮುಖಂಡರಾದ ಸತೀಶ್, ರಾಜುಗೌಡ, ದಯಾನಂದ ಪಾಟೀಲ್, ನರಸೇಗೌಡ ಇತರರಿದ್ದರು.

ವಿಸ್ಮಯಗೆ ಉನ್ನತ ಶ್ರೇಣಿ



ಭೇರ್ಯ, ಮೇ 22– ಹೊಸ ಅಗ್ರಹಾರ ಗ್ರಾಮದ ಜೀವ ವಿಮಾ ಪ್ರತಿನಿಧಿ ಹೆಚ್.ಎಸ್. ಮಂಜುನಾಥ್ ಮತ್ತು ಚೈತ್ರಾ ದಂಪತಿ ಪುತ್ರಿ ವಿಸ್ಮಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 558 (ಶೇ.90) ಅಂಕ ಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆಯ ಸಾಧನೆಗೆ ಕೆ.ಆರ್.ನಗರ ಮಾದಪ್ಪ ವಿದ್ಯಾ ಸಂಸ್ಥೆ ಸಂಸ್ಥೆ ಆಡಳಿತ ಮಂಡಳಿ, ಶಿಕ್ಷಕ ಸಮೂಹ ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಬೆಟ್ಟದಪುರ ಸರ್ಕಾರಿ ಪಪೂ ಕಾಲೇಜು ಪ್ರೌಢಶಾಲೆಗೆ ಉತ್ತಮ ಫಲಿತಾಂಶ

ಬೆಟ್ಟದಪುರ, ಮೇ 22(ಶಿವದೇವ್)– ಈ ಬಾರಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಆಂಗ್ಲ ಮಾಧ್ಯಮದಲ್ಲಿ ಶೇ. 100 ಫಲಿತಾಂಶ ಹಾಗೂ ಕನ್ನಡ ಮಾಧ್ಯಮದಲ್ಲಿ ಶೇ.97.8 ಉತ್ತಮ ಫಲಿತಾಂಶ ಪಡೆದುಕೊಂಡಿದೆ.

ಪರೀಕ್ಷೆಗೆ ಹಾಜರಾದ 136 ವಿದ್ಯಾರ್ಥಿಗಳಲ್ಲಿ 133 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅವರಲ್ಲಿ 3 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 67 ವಿದ್ಯಾರ್ಥಿಗಳು ಪ್ರಥಮ ಹಾಗೂ 57 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಆದಿತ್ಯ ಡಿ.ಎಲ್ (ಶೇ.97.92), ಸೌಭಾಗ್ಯ (ಶೇ.96.8), ರಕ್ಷಿತಾ ಈ.ಆರ್ (ಶೇ.96.48) ಅಗ್ರಸ್ಥಾನ ಪಡೆದುಕೊಂಡಿದ್ದಾರೆ.

ಹೊಸ ಅಗ್ರಹಾರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಭೇರ್ಯ, ಮೇ 22– ಹೊಸ ಅಗ್ರಹಾರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಂಜೇಗೌಡ, ಉಪಾಧ್ಯಕ್ಷರಾಗಿ ಚಂದ್ರಶೇಖರ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಸ್ವಾಮಿಗೌಡ ಮತ್ತು ಉಪಾಧ್ಯಕ್ಷೆ ಶಾರದಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚಂದ್ರೇಗೌಡ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚಂದ್ರಶೇಖರ್ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು ಎಂದು ಸಹಕಾರ ಇಲಾಖೆ ಚುನಾವಣಾಧಿಕಾರಿ ಕೆ.ಎಲ್.ಸವಿತಾ ಘೋಷಿಸಿದರು.

ನೂತನ ಅಧ್ಯಕ್ಷ ಮಂಜೇಗೌಡ ಮಾತನಾಡಿ, ಹೊಸಅಗ್ರಹಾರ ಸಹಕಾರ ಸಂಘ ತಾಲೂಕಿನಲ್ಲೇ ಮಾದರಿಯಾಗಿದೆ. ವಿವಿಧ ಯೋಜನೆಯಡಿ ರೈತರು ಪಹಣಿ ಮತ್ತು ದಾಖಲಾತಿ ನೀಡಿದರೆ 3 ಲಕ್ಷದವರೆಗೆ ಬಡ್ಡಿರಹಿತ ಸಾಲ ನೀಡುವುದಾಗಿ ತಿಳಿಸಿದರು.

ಈ ವೇಳೆ ನಿರ್ದೇಶಕರಾದ ಡಿ.ಎಸ್.ಯೋಗೇಶ್, ರಾಮೇಗೌಡ, ಗೋಪಾಲೇಗೌಡ, ಚಂದ್ರೇಗೌಡ, ನಾಗಮ್ಮ, ಹೆಚ್.ಎಸ್.ಗೋಪಾಲ್, ಸೋಮನಾಯಕ, ಸ್ವಾಮೀಗೌಡ, ಓಬೇಗೌಡ, ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಎಂ.ಸತೀಶ್, ಸಹಕಾರ ಸಂಘದ ಸಿಇಓ ಎಸ್.ರವಿ ಇದ್ದರು. ಇದೇ ವೇಳೆ ಮಂಡಿಗನಹಳ್ಳಿ ಗ್ರಾಮಸ್ಥರಾದ ದೇವರಾಜೇಗೌಡ, ನರಸಿಂಹೇಗೌಡ, ಸೂರಿ, ಚಂದು, ಸತೀಶ್, ಚಂದ್ರು ಸೇರಿದಂತೆ ಇನ್ನಿತರರು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಾಡ್(ಹಿಂ): ರಾ.7.20ಕ್ಕೆ.

ಸ್ಕ್ರೀನ್ 2 ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಕುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ.

ಸ್ಕ್ರೀನ್ 3 ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.

ಸ್ಕ್ರೀನ್ 4 ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಾಯ್ಯ (ಹಿಂ): ರಾ.7ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1 ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.

ಸ್ಕ್ರೀನ್ 2 ಬೂಲ್ ಬುಲಾಯ್ಯ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಾಡ್ (ಹಿಂ): ಮ.3.45ಕ್ಕೆ.

ಸ್ಕ್ರೀನ್ 3 ಸಾರ ವಜ್ರ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.

ಸ್ಕ್ರೀನ್ 4 ಕೆಜಿಎಫ್ 2(ಕ): ಬೆ.10ಕ್ಕೆ, ಸಕುಟುಂಬ ಸಮೇತ (ಕ): ಮ.1.30ಕ್ಕೆ, ನೆಂಜಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಕುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.9ಕ್ಕೆ.

ಸ್ಕ್ರೀನ್ 2 ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಡಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ,

ಸ್ಕ್ರೀನ್ 3 ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ,

ಸ್ಕ್ರೀನ್ 4 ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಾಡ್ (ಹಿಂ): ಮ.3.50ಕ್ಕೆ, ನೆಂಜಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಸರ್ಕಾರು ವಾರಿ ಪಾಠ (ತೆ)	3 ಪ್ರದರ್ಶನಗಳು
ಅಂಗಾರ್ (ಕ)	1 ಪ್ರದರ್ಶನ
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬೂಲ್ ಬೂಲಯ್ಯ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
21 ಅವರ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
21 ಅವರ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೆಂಜುಕು ನೀದಿ (ತ)	4 ಪ್ರದರ್ಶನಗಳು
ಸಂಗಂ	
ಪ್ರಾರಂಭ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಕೈಲೈನ್	
ದಾಕದ್ (ಹಿ)	4 ಪ್ರದರ್ಶನಗಳು

ಗೆಲುವಿನೊಂದಿಗೆ ವಿದಾಯ ಹೇಳಿದ ಪಂಜಾಬ್



ಮುಂಬೈ, ಮೇ 22– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಪಂಜಾಬ್ ಕಿಂಗ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 5 ವಿಕೆಟ್‌ಗಳ ಗೆಲುವು ಸಾಧಿಸಿದೆ. ಈ ಮೂಲಕ ಪಂಜಾಬ್ ಪ್ರಸಕ್ತ ಸಾಲಿನ ಟೂರ್ನಿಗೆ ಗೆಲುವಿನೊಂದಿಗೆ ವಿದಾಯ ಹೇಳಿದೆ. ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ತಂಡದ ಪರ ಅಭಿಷೇಕ್ ಶರ್ಮಾ 43, ರಾಹುಲ್ ತ್ರಿಪಾಠಿ 20, ಏಡನ್ ಮಾಕರಮ್ 21, ವಾಷಿಂಗ್‌ಟನ್ ಸುಂದರ್ 25, ರೊಮಾರಿಯೊ ಶೆಫರ್ಡ್ 26 ರನ್ ಗಳಿಸಿದರು. ಪಂಜಾಬ್ ಪರ ಹರ್‌ಪ್ರಿತ್ ಬ್ರಾರ್, ನಾಥನ್ ಇಲಿಸ್ ತಲಾ 3, ರಬಡಾ 1 ವಿಕೆಟ್ ಪಡೆದರು.

ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ 15.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 160 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ಜಾನಿ ಬೇರ್‌ಸ್ಟೋ 23, ಶಿಖರ್ ಧವನ್ 39, ಶಾರೂಕ್ ಖಾನ್ 19, ಲಿಯಾಮ್ ಲಿವಿಂಗ್‌ಸ್ಟೋನ್ 49, ಜಿತೇಶ್ ಶರ್ಮಾ 19ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಫರೂಕಿ 2, ವಾಷಿಂಗ್‌ಟನ್ ಸುಂದರ್, ಜಗದೀಶ್ ಸುಚಿತ್ ಹಾಗೂ ಉಮ್ರಾನ್ ಮಲ್ಲಿಕ್ ತಲಾ ಒಂದೊಂದು ವಿಕೆಟ್ ಪಡೆದರು. ಹರ್‌ಪ್ರಿತ್ ಬ್ರಾರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



31ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಪ್ರಧಾನ ಆಗಮಿಕರಾದ

ಡಾ.ಶ್ರೀ ಎನ್.ಶಶಿಶೇಖರ ದೀಕ್ಷಿತ್ ಹಾಗೂ ಶ್ರೀಮತಿ ಲತಾ

ಅವರಿಗೆ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು

ಶುಭಕೋರುವವರು: ದೀಕ್ಷಿತ್ ಕುಟುಂಬದವರು, ಬಂಧುವರ್ಗದವರು ಹಾಗೂ ಚಾಮುಂಡಿ ಬೆಟ್ಟ ಗ್ರಾಮಸ್ಥರು

ಅಭಿನಂದನೆಗಳು



ಜಿಮ್ (ಯೋಗ) ರವಿ ವಸಂತ, ಲೋಕನಾಯಕ ನಗರ, ಮೇಟಗಳ್ಳಿ, ಮೈಸೂರು ಇವರ ಮಗ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿ ಹರ್ಮಿತ್ ಗೌಡ ಆರ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 602 (96.32%) ಅಂಕ ಗಳಿಸಿದ್ದಾರೆ.

ಅಭಿನಂದನೆ ಕೋರುವ : ಆಟೋ ರಾಜ, ಕೆ.ಜಿ.ಕೊಪ್ಪಲು

ಹರ್ಮಿತ್‌ಗೌಡ ಆರ್

20ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಪಂಕಜ & ಶ್ರೀ ಶಿವಲಿಂಗು.ಎಲ್

ತಾಯಿ ಚಾಮುಂಡೇಶ್ವರಿ ಆರೋಗ್ಯ, ಐಶ್ವರ್ಯ ಕರುಣಿಸಲೆಂದು ಶುಭಕೋರುವವರು: ಮಾದಮ್ಮ, ನಾಗಮ್ಮ, ರಾಮೇಗೌಡ ಹಾಗೂ ಕುಟುಂಬವರ್ಗ, ಕೆ.ಜಿ.ಕೊಪ್ಪಲು ಮೈಸೂರು

TEACHERS REQUIRED

OUR LITTLE WONDERZ preschool

Needed Preschool Teachers with good English communication.

Near Hampi Circle, Vijayanagar 2nd Stage, Mysore-570 017

Contact: 9886629945 / 9591553300

ಹುಟ್ಟುಹಬ್ಬದ ಶುಭಾಶಯಗಳು



ಪ್ರಮೋದ್ (PRAMODH)

ಶುಭಾಶಯ ಕೋರುವವರು: ತಾಯಿ: ನಂದಿನಿ ಮತ್ತು ಸ್ನೇಹಿತರು

ಅಭಿನಂದನೆಗಳು



ಇವರು ಎಸ್‌ಎಸ್‌ಎಲ್‌ಸಿ ಯಲ್ಲಿ 625 ಕ್ಕೆ 525 ಅಂಕ ಪಡೆದು ಶೇ.84 ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಗಿದ್ದಾರೆ

ಶುಭಕೋರುವವರು: ತಂದೆ: ಶ್ರೀ ಆರ್.ಶ್ರೀನಿವಾಸ ಮೂರ್ತಿ ತಾಯಿ: ಶ್ರೀಮತಿ ಡಿ . ಮಧುಮತಿ, ಎಸ್ ಐಶ್ವರ್ಯ, ಎಂ ಪ್ರೀತಿ, ಆರ್. ಅಮೂಲ್ಯ, ಎಸ್.ದಿವ್ಯ ಆರಾಧನಾ

ಕು|| ಎಸ್.ಶ್ರೇಯಾ

WANTED

We are Hiring candidates for the following Posts

Telecallers-15 (F)

Sales Executives-5 (M)

Team Leader-1 Male/Female.

Qualification: Any graduates

Experience: minimum 2 years in any sales. Salary: 8000/- to 15000/- , incentives and allowances

Location: VRV SERVICES

Gangothri Layout, Near Maruthi Temple, TK layout, Mysore.

Interview on 23.05.2022/ 24.05.2022

Contact: 9964885548 / 6361168056

ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಕಮಲ ಮತ್ತು ಶಿವಣ್ಣ(vvww)

ನನ್ನ ದೇವರುಗಳಾದ ಕಮಲ ಮತ್ತು ಶಿವಣ್ಣ(vvww) ರವರಿಗೆ 37ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಶುಭ ಕೋರುವರು: ದಿಲೀಪ್ ಗೌಡ, ನಂದನ್, ಮಮತ ಚಂದ್ರಶೇಖರ್ (ಜಲಮಂಡಳಿ) ಕಾವ್ಯ (ಅರಣ್ಯ ಇಲಾಖೆ) ದೀಪಕ್ ಗೌಡ DX, ಅಧ್ಯಕ್ಷರು, ನಾಡಪ್ರಭು ಕೆಂಪೇಗೌಡ ಯುವ ಬ್ರಿಗೇಡ್, ಧೀಮಂತ ಗೌಡ, ಅಯ್ರಾ DX ಕೆಂಪೇಗೌಡ ಕುಂಬಾರಕೊಪ್ಪಲ್ ಮೈಸೂರು ಮೋ 8050290359

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ಪ್ಲಿ. ಸಯ್ಯಾಜಿರಾವ್ ರಸ್ತೆ, ಕೆ.ಆರ್. ಆಸ್ಪತ್ರೆ ಹತ್ತಿರ, ಮೈಸೂರು

ಪ್ರವೇಶ ತೆರೆದಿದೆ

ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)

X-Ray, OT, Dialysis

SSLC / PUC Pass


Mob: 9886654463

REPCO BANK ರೆಪ್ಕೊ ಬ್ಯಾಂಕ್

(Govt. of India Enterprise) Mysuru Branch

Special Deposit Scheme for Senior Citizens & Super Senior Citizens

REPCO SUBHIKSHAM



- Rate of interest : 7.15% & 7.25%
- Tenure : 15 Months
- Interest payable : Monthly / Quarterly / Half-yearly or on maturity
- Loan Facility : Available

*Conditions Apply *Member Customers Only

1022, 1st Floor, G & H Block, Panchamanthra Road, Kuvempunagar, Mysuru - 570023

Ph: 0821 - 2562211, Mob: 94498 56210

Vidyavardhaka Sangha (R), Mysuru

Vidyavardhaka Composite PU College

(High School Section)

Sheshadri Iyer Road, Mysuru-01.

Ph : 0821-4264886 | Email : vidyavardhaka.ee0028@gmail.com

WANTED TEACHERS

Trained Experienced Teachers to Teach Following Subjects

For High School • English : MA B.Ed • Kannada : MA B.Ed • Physical Education : BP.Ed

For PU College • Economics : MA B.Ed

Please submit the application at the above address with the copies of Certificates, Resume & Passport size photo within 7 days from date of publication.

Hon. President Hon. Secretary

ಗೋಪಾಲಗೌಡ ಶಾಂತವೇರಿ ಸ್ಮಾರಕ ಸಮೂಹ ಆಸ್ಪತ್ರೆ

ನಜರ್‌ಬಾದ್, ಮೈಸೂರು – 570010. ಫೋ. 0821–4001600

ಕ್ಯಾನ್ಸರ್ ಮತ್ತು ಗ್ಯಾಸ್ಟ್ರೋ /ಅವರ್ ವಿಶೇಷ ಚಿಕಿತ್ಸಾ ಶಿಬಿರ

• ಮೂರು ದಿನ • ಇಬ್ಬರು ತಜ್ಞ ವೈದ್ಯರು • ಒಂದೇ ಸ್ಥಳ

ಡಾ. ಜಯಕಾರ್ತಿಕ್. ವೈ
ಸರ್ಜಿಕಲ್ ಆಂಕಾಲಜಿ
ಕ್ಯಾನ್ಸರ್ ಇಲಾಜಿಗೆ ಲ್ಯಾಪ್‌ರೋಸ್ಕೋಪಿ ಹಾಗೂ ತೊರಾಕೋಸ್ಕೋಪಿಕ್ ನುರಿತ ಅನುಭವಿ ಶಸ್ತ್ರಚಿಕಿತ್ಸಾ ತಜ್ಞರು.
ಮಾಜಿ ತಪಾಸಣಾಗಾರರು ಇಂಡೋ ಅಮೇರಿಕನ್ ಆಸ್ಪತ್ರೆ, ಹೈದರಾಬಾದ್

ಡಾ. ನಿಶ್ಚಯ್. ಆರ್
ಎಂ.ಡಿ, ಡಿ.ಎಂ
ಗ್ಯಾಸ್ಟ್ರೋಎಂಟ್ರೋಲಾಜಿಸ್ಟ್, ಹೆಪಾಟೊಲಜಿಸ್ಟ್ ಸೂಪರ್ ಸ್ಪೆಷಾಲಿಸ್ಟ್, ಎಂಡೋಸ್ಕೋಪಿ ಚಿಕಿತ್ಸಕರು

ದಿನಾಂಕ: 23.05.2022 ರಿಂದ 25.05.2022

ಸಮಯ: ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಸಲಾಗುತ್ತದೆ.

ವಿಶೇಷ ಚಿಕಿತ್ಸಾ ಶಿಬಿರದಲ್ಲಿ ಸಮಾಲೋಚನೆ ಆದವರಿಗೆ ರಕ್ತ ಪರೀಕ್ಷೆ, ಸಿಟಿ ಸ್ಕ್ಯಾನ್ ಮತ್ತು ಎಂ.ಆರ್.ಐ **ಶೇ 30 ರಷ್ಟು ರಿಯಾಯಿತಿ** ದರದಲ್ಲಿ

ಉಚಿತ ತಜ್ಞ ವೈದ್ಯರ ಸಮಾಲೋಚನೆ, ಉಚಿತ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್

ಉಚಿತ Free

CAREER OPPORTUNITY

OFFICER-LEGAL

One of the leading FMCG Companies near Mysore is looking out for applications from Energetic and Experienced candidates to fill in the role of **Officer-Legal** - Min 02 years post qualification or **LLB Graduates** with a min 03-04 years of working experience in a corporate or a company. Company Secretary Certification will be an added advantage.

Qualification : LLB/LLM from a reputed Institution. Preferred from a corporate Background. Basic Understanding of all South Indian Languages with Excellent verbal & drafting in English Skills.

Email : cvs.mys2018@gmail.com

(Please mention the designation in the Subject)



SESHADRIPURAM EDUCATIONAL TRUST

SESHADRIPURAM INDEPENDENT PRE UNIVERSITY COLLEGE

(Recognized by Karnataka Pre University Board)

#25, Hebbal Ring Road, Hebbal Industrial Area, Mysuru – 17

A Legacy of 92 Years

ADMISSIONS OPEN FOR 2022-23

CET / NEET
CA / CMA

COURSES OFFERED

SCIENCE : PCMB & PCMC

COMMERCE : CEBA, BEBA & SEBA

FREE SEAT & MERIT* SCHOLARSHIP

Conditions apply*

Join us on the journey to your destination...

SANITIZED CAMPUS DIGITAL LIBRARY

CONTACT US :
#25, Hebbal Ring Road, Hebbal Industrial Area, Mysuru - 17

Call - 96119 81858 / 0821 - 2970536

Website: www. spucmysore.ac.in | Email-Id: info@spucmysore.ac.in

N.R.Panditharadhya, President | Nadoja Dr. Wooday Krishna, Honorary General Secretary | B.A. Anantharam, Chairman-Governing Council | Archana Swamy, Principal

MAHAJANA EDUCATION SOCIETY (R)
Education to Excel

SBRR MAHAJANA PU COLLEGE

Jayalakshmipuram, Mysuru – 570 012. Ph: 0821- 2513535
● sbrrmpu@gmail.com ● www.puc.mahajana.edu.in

ADMISSION NOTIFICATION

Issue of Application forms to Science, Commerce & Arts I & II PUC courses will be made between 10:00 a.m. to 5 p.m. in the college office.

COURSES OFFERED

Part - 1
LANGUAGES : KANNADA, SANSKRIT, HINDI & FRENCH
Part - 2
SCIENCE : PCMB, PCMC & PCME
COMMERCE : EGBA, EBAC & BASC
ARTS : HEGS

50 Years Golden Jubilee 1972-2022

"Golden Jubilee" Year of PU Education

FREE EDUCATION FOR STUDENTS WHO HAVE SECURED 95% AND ABOVE IN 10TH STD
FEE CONCESSION FOR MERITIOUS AND DESERVING STUDENTS & CHILDREN OF DEFENSE PERSONNEL

- Spacious, exclusive & Green campus for PU students only.
- Spacious & well equipped separate laboratories for I PU & II PU
- Emphasis for skill based training.
- Specialised attention, Expert coaching & fee discount for sports persons.
- Hostel facility for Boys & Girls.
- We take pride in improving performance level of all categories of students.
- Provision for NCC & NSS enrollment .
- Good number of distinctions & I classes in March 2021 Annual examination and Expecting Good Results in the Current year.

Smt. Umarani.S, Principal | Dr. T. Vijayalakshmi Muralidhar, Hon. Secretary | Sri T. Muralidhar Bhagavat, President

ಮಾರಾಟಾಧಿಕಾರಿ (ಸರ್ಕಾರ)

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮೈಸೂರು ಉಪವಿಭಾಗ, ಮೈಸೂರು ಹಾಗೂ ಮಾರಾಟಾಧಿಕಾರಿಗಳು

ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಮೈಸೂರು

ಇವರ ಕಛೇರಿಯಿಂದ ದೂರವಾಣಿ 0821–2448947

ಸ್ಥಿರ ಸ್ವತ್ತು ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ.ಲಿ ಚಾಮರಾಜ ಜೋಡಿ ರಸ್ತೆ ಕೆ.ಆರ್ ಮೊಹಲ್ಲಾ , ಮೈಸೂರು ಈ ಸಂಘದ ಈ ಕೆಳಕಂಡ ಸದಸ್ಯರು ಸದರಿ ಸಂಘದಿಂದ ಸಾಲ ಪಡೆದು ಸಾಲ ಮರುಪಾವತಿ ಮಾಡದೆ, ಸಾಲವು ಸುಸ್ತಿಯಾದ ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪ–ವಿಭಾಗ, ಮೈಸೂರು, ಇವರ ಘನ ನ್ಯಾಯಾಲಯದಲ್ಲಿ ದಾವಾ ಹೂಡಲಾಗಿ ಡಿಕ್ರಿ ಪಡೆಯಲಾಗಿದ್ದು ಹಾಗೂ ಅಮಲ್ಜಾರಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಕೆಳಗೆ ಸಹಿ ಮಾಡಿರುವ ಮಾರಾಟಾಧಿಕಾರಿ (ಸರ್ಕಾರ) ಮೈಸೂರು ರವರ ಬಳಿ ಜಾರಿ ಕ್ರಮಕ್ಕೆ ಇದ್ದು, ಸದರಿ ಅಮಲ್ಜಾರಿ ಪ್ರಕರಣದಲ್ಲಿ ಒಳಪಡಿಸಿರುವ ಸ್ಥಿರಾಸ್ತಿಯನ್ನು ಬಾಕಿ ಇರುವ ಪೂರ್ತಾ ಮೊಬಲಗಿನ ವಸೂಲಾತಿಗಾಗಿ ಈ ಕೆಳಕಂಡ ಸುಸ್ತಿದಾರರ ಸ್ಥಿರ ಸ್ವತ್ತುಗಳನ್ನು ಬಹಿರಂಗ ಹರಾಜು ಮಾಡಲಾಗುವುದು, ಸುಸ್ತಿದಾರರಿಗೆ ಸೇರಿದ ಸ್ಥಿರಾಸ್ತಿಯ ವಿವರ ಹಾಗೂ ಅವರ ವಿರುದ್ಧ ಪಡೆಯಲಾದ ಅಮಲ್ಜಾರಿ ಸಂಖ್ಯೆ ಮತ್ತು ಅವರಿಂದ ವಸೂಲಾಗಬೇಕಾದ ಮೊಬಲಗಿನ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

ಕ್ರ. ಸಂ	ಬಾಕಿದಾರರ ಹೆಸರು	ಸುಸ್ತಿದಾರ ಸದಸ್ಯರ ವಿಳಾಸ	ಅಮಲ್ಜಾರಿ ಸಂಖ್ಯೆ	ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ವಿಳಾಸ ಮತ್ತು ಚಕ್ಕುಬಂದಿ ವಿವರ	ಡಿಕ್ರಿ ಮೊಬಲಗಿನ ಬಾಕಿ ಮೊಬಲಗು	ಹರಾಜು ದಿನಾಂಕ ಮತ್ತು ಸಮಯ	ಹರಾಜು ನಡೆಯುವ ಸ್ಥಳ
1.	1.ಎಂ.ಕೆ.ಮಂಜುನಾಥ 2.ಎಂ.ರಂಗನಾಥ	ಮನೆ ನಂ . 2513. ನ್ಯೂ ಕಾಂತರಾಜೇ ಅರಸ್ ರಸ್ತೆ, ಕೆ.ಜಿ ಕೊಪ್ಪಲು, ಚಾಮರಾಜ ಮೊಹಲ್ಲಾ ಮೈಸೂರು.	ಸಿ.ಇ.ಪಿ.136/ 2006–07 ಮತ್ತು ಸಿ.ಇ.ಪಿ.137/ 2006–07	ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ 5ನೇ ಪೇಸ್, ಮನೆ ನಂ .ಎಲ್.ಐ.ಜಿ.2, ಟಿ.ಐ.ಬಿ.1413, ಪೂರ್ವಕ್ಕೆ: ಮನೆ ನಂ.1414, ಪಶ್ಚಿಮಕ್ಕೆ: ಮನೆ ನಂ. 1412 ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಪಾತ್ ವೇ ಪೂ–ಪ : 20 ಅಡಿಗಳು, ಉ–ಸ : 30 ಅಡಿಗಳು	1) ರೂ .5,60,340.00 +ಇತರೆ ಖರ್ಚು ಪ್ರತ್ಯೇಕ ಮತ್ತು 2) ರೂ . 1,70,546.00 +ಇತರೆ ಖರ್ಚು ಪ್ರತ್ಯೇಕ	03.06.2022 ಶುಕ್ರವಾರ ಬೆಳಗ್ಗೆ 11.00 ಗಂಟೆಗೆ	ಮೈಸೂರು ಸಿಟಿ ಚಾಮರಾಜ ಮೊಹಲ್ಲಾ, ಬೋಗಾದಿ 5ನೇ ಫೇಸ್, ಮನೆ ನಂ. ಎಲ್.ಐ.ಜಿ.2, ಟಿ.ಐ.ಬಿ.1413, ಇದರ ಮುಂದೆ
2.	1.ಜಯಲಕ್ಷ್ಮಮ್ಮ 2.ಪಿ.ಶಿವಮೂರ್ತಿ 3.ಮಹದೇವಸ್ವಾಮಿ 4.ತಾಯಮ್ಮ	ಮನೆ ನಂ.4480/ಬಿ1, ಎಲ್–12/ಬಿ1, ಸೆಂಟ್ ಮೇರಿಸ್ ರಸ್ತೆ , 6ನೇ ಕ್ರಾಸ್, ಎನ್.ಆರ್ ಮೊಹಲ್ಲಾ (ಲಷ್ಕರ್ ಮೊಹಲ್ಲಾ) ಮೈಸೂರು	ಸಿ.ಇ.ಪಿ.76/ 2011–12	ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ ,(ಲಷ್ಕರ್ ಮೊಹಲ್ಲಾ) ಸೆಂಟ್ ಮೇರಿಸ್ ರಸ್ತೆ, 6ನೇ ಕ್ರಾಸ್, ಮನೆ ನಂ: 4480/ಬಿ1, ಎಲ್–12/ಬಿ1 ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಶಂಕರಪ್ಪನವರ ಮನೆ, ದಕ್ಷಿಣಕ್ಕೆ : ಖಾಲಿ ಜಾಗ ಉತ್ತರಕ್ಕೆ : 6ನೇ ಕ್ರಾಸ್ ರಸ್ತೆ ಪೂ.ಪ : (45+35 1/4)/2 ಅಡಿ ಉ.ದ : (11 1/2+10/1/4)/2 ಅಡಿ	ರೂ. 9,75,727.00 +ಇತರೆ ಖರ್ಚು ಪ್ರತ್ಯೇಕ	03.06.2022 ಶುಕ್ರವಾರ ಮಧ್ಯಾಹ್ನ 3.00 ಗಂಟೆಗೆ	ಮೈಸೂರು ಸಿಟಿ, ಎನ್. ಆರ್ಮೊಹಲ್ಲಾ ,(ಲಷ್ಕರ್ ಮೊಹಲ್ಲಾ) ಸೆಂಟ್ ಮೇರಿಸ್ ರಸ್ತೆ, 6ನೇ ಕ್ರಾಸ್, ಮನೆ ನಂ: 4480/ಬಿ1, ಎಲ್–12/ಬಿ1 ಇದರ ಮುಂದೆ

ಷರತ್ತುಗಳು:

1) ಮೇಲೆ ತಿಳಿಸಿರುವ ಕಟ್ಟಡ (ಸ್ಥಿರಾಸ್ತಿಯನ್ನು) ಬಹಿರಂಗ ಹರಾಜು ಮಾಡಲಾಗುವುದು.
2) ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಠೇವಣಿ ಹಣ ರೂ. 5000/– ಗಳನ್ನು ಸಂಘಕ್ಕೆ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.
3) ಆಸಕ್ತಿ ಹೊಂದಿದ ಬಿಡ್‌ದಾರರು ಕಟ್ಟಡದ (ಸ್ಥಿರಾಸ್ತಿಯನ್ನು) ಆದಷ್ಟು ಮುಂಚಿತವಾಗಿ ಪರಿಶೀಲನೆ ಮಾಡಿಕೊಳ್ಳಬಹುದು.
4) ಹರಾಜಿನಲ್ಲಿ ಭಾಗವಹಿಸಿ ಹರಾಜಿನ ಅಖೈರು ಮೊಬಲಗಿನ ಪೈಕಿ ಕೂಡಲೇ ಆ ಹಣದ ಶೇಕಡ 15% ಮೊಬಲಗನ್ನು ಹರಾಜಿನ ಸ್ಥಳದಲ್ಲಿ ಪಾವತಿ ಮಾಡಿ ರಶೀದಿ ಪಡೆಯುವುದು, ಉಳಿಕೆ ಹಣವನ್ನು ಹರಾಜು ದಿನಾಂಕದಿಂದ 30 ದಿನಗಳೊಳಗಾಗಿ ಸಂಘಕ್ಕೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಬಿಡ್‌ದಾರರು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು).
5) ಮೇಲೆ ಹೇಳಿದ ಪ್ರಕಾರ ನಿರ್ಣಯಿಸಿದ ಸಮಯದೊಳಗೆ ಹಣವನ್ನು ಠೇವಣಾತಿ ಕಟ್ಟದಿದ್ದರೆ ಅಥವಾ ದರಖಾಸ್ತು ಹಣದ ಪೈಕಿ ಉಳಿಕೆ ಮೊಬಲಗನ್ನು ಕಟ್ಟದಿದ್ದರೆ ಪ್ರಥಮ ದರಖಾಸ್ತುದಾರನ ಖರ್ಚು ಅಥವಾ ನಷ್ಟ ಬಾಧ್ಯತೆ ಮೇಲೆ ಮಾರಾಟದ ಹೊಸ ಇಸ್ತಿಹಾರವನ್ನು ಪ್ರಕಟಿಸಿದ ನಂತರ, ಕಟ್ಟಡಗಳು ಮಾರಾಟವಾದಿತು ಅಥವಾ ಹರಾಜನ್ನು ರದ್ದುಪಡಿಸಿ ಮರು ಹರಾಜನ್ನು ಮಾಡಲಾಗುವುದು.
6) ಹರಾಜು ಆದ 30 ದಿವಸಗಳ ನಂತರ ಹರಾಜನ್ನು ಮಾರಾಟಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರು ಸ್ಥಿರೀಕರಿಸುವವರು, ಸ್ಥಿರೀಕರಿಸಿದ ನಂತರವೇ ವಿಲೇವಾರಿ ಕ್ರಮವಿಡಲಾಗುವುದು.
7) ಸಾರ್ವಜನಿಕರು ಬಿಡ್ ಮಾಡದಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ 101 (ಸಿ) ಪ್ರಕಾರ ಸಂಘಕ್ಕೆ ಸ್ಥಿರಾಸ್ತಿಯನ್ನು ಕೊಳ್ಳಲು ಅವಕಾಶ ಮಾಡಿಕೊಂಡಿರುತ್ತದೆ.
8) ಬಾಕಿದಾರರೇ ಆಗಲಿ ಅಥವಾ ಅವರ ಅನುಮತಿ ಪಡೆದ ಅಧಿಕೃತ ವ್ಯಕ್ತಿಯಾಗಲಿ ಹರಾಜು ವೇಳೆಗಿಂತ ಮುಂಚೆ ಅಮಲ್ಜಾರಿ ಮೊಬಲಗನ್ನು ಕಟ್ಟಿದಲ್ಲಿ ಹರಾಜನ್ನು ರದ್ದುಗೊಳಿಸಲಾಗುತ್ತದೆ.
9) ಹರಾಜಿನ ಅಖೈರು ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳಿಗೆ ಸೇರಿರುತ್ತದೆ.
10) ಹರಾಜಿನ ದಿನಾಂಕದಂದು ಆಡಳಿತಾತ್ಮಕ ಕಾರಣಗಳಿಂದ ಹರಾಜು ನಡೆಯದೆ ಇದ್ದ ಪಕ್ಷದಲ್ಲಿ, ಯಾವುದೇ ಪ್ರಕಟಣೆ ನೀಡದೆ ಮುಂದಿನ 7 ದಿನಕ್ಕೆ ಕ್ರಮವಾಗಿ ಬೆಳಿಗ್ಗೆ 11–00 ಗಂಟೆಗೆ ಹಾಗೂ ಮಧ್ಯಾಹ್ನ 3–00 ಗಂಟೆಗೆ ಸದರಿ ಸ್ಥಳದಲ್ಲೇ ಮತ್ತೆ ಹರಾಜನ್ನು ನಡೆಸಲಾಗುವುದು.
11) ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ವಿವರಗಳ ಬಗ್ಗೆ ಅಥವಾ ಇತರೆ ಸಂಬಂಧಪಟ್ಟ ಮಾಹಿತಿ ಬಗ್ಗೆ ಸೊಸೈಟಿ ಕಾರ್ಯದರ್ಶಿಯವರಿಂದ ಸಂಘದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
12) ಹರಾಜಿನ ಸಂಬಂಧ ಯಾವುದೇ ತಕರಾರು ಉಂಟಾಗಿದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು ಇವರ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ದಿನಾಂಕ: 21–05–2022
ಸ್ಥಳ: ಮೈಸೂರು

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು
ಈ ನ್ಯಾಯಾಲಯದ ಆದೇಶದ ಮೇರೆಗೆ
ಹೆಚ್.ಕೆ. ಸತೀಶ್, ಮಾರಾಟಾಧಿಕಾರಿ (ಸರ್ಕಾರ)
ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಮಾರಾಟಾಧಿಕಾರಿಗಳು, ಮೈಸೂರು

VIDYAVARDHAKA SANGHA (REGD), Mysuru

ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು, ಮೈಸೂರು

Sheshadri Iyer Road, Mysuru - 570 001. Phone:0821-2428361

ADMISSIONS OPEN FOR 2022 - 23



Vidyavardhaka Polytechnic

(Recognised by Govt. of Karnataka & Approved by AICTE, Delhi)
Vidyavardhaka College of Engineering Campus, Gokulam, Mysuru-02,
Tele: 0821-2419190 email:office@vvpolytechnic.ac.in

DIPLOMA IN ENGINEERING

- Computer Science & Engineering
- Electronics & Communication Engineering
- Mechanical Engineering
- Civil Engineering

Vidyavardhaka K. Puttaswamy PU College

College is awarded "A" grade by PU Education Department
Vidyavardhaka College of Engineering Campus, Gokulam, Mysuru-02.
Tele: 0821-2419191. Mob: 94495 29443

Science PCMB, PCMC | **Commerce** EGBA, EBACs

PU + IIT - JEE, PU + NEET, PU + CET, PU + COMAD - K, PU + KVPY — CARE ACADEMY

Vidyavardhaka PU College

(Co-Education)
Sheshadri Iyer Road, Mysuru-01. Ph: 0821-2420334 / 2978334

COURSES OFFERED

SCIENCE: PCMB & PCMC (English Medium) | COMMERCE: EBACs, EGBA & EBABm (English Medium) | ARTS: HEGP (Kannada Medium)

Vidyavardhaka Sangha ITI

(Aided Institution, Recognized by Govt of India)
Vidyavardhaka College of Engineering Campus, Gokulam, Mysuru-02.
Tele: 0821-2419192. Email: vviti1984mys02@gmail.com

COURSES OFFERED
- Electrician
- Fitter
- Electronics Mechanic

Free Computer Training

Vidyavardhaka Composite PU College (High School Section)

Sheshadri Iyer Road, Mysuru-01. Ph: 0821-4264886

ADMISSIONS OPEN To VIII, IX and X std., MEDIUM English / Kannada

Vidyavardhaka K.P. CONVENT

Engineering College Campus, Gokulam II Stage, Mysuru-02. Phone: 0821-2419193

Admissions open for Montessori M1, M2, M3 & 1st Std. to 10th Std.

MEDIUM English